# ಅಧ್ಯಯನ 6 Study VI

# ನೂತನ ಸೃಷ್ಟಿಯಲ್ಲಿನ ಕ್ರಮ ಮತ್ತು ಶಿಸ್ತು

## ORDER AND DISCIPLINE IN THE NEW CREATION

**ನೇಮಿಸುವಿಕೆಯ ಅರ್ಥ – ಸಂಪೂರ್ಣ ಅಧಿಕಾರವುಳ್ಳವರು ಹನ್ನೆರಡು ಕ್ರೈಸ್ತ ರಾಯಭಾರಿಗಳು ಮಾತ್ರ, – ಪುರೋಹಿತರುಗಳು ಮತ್ತು ಸಾಮಾನ್ಯರು – ಹಿರಿಯರುಗಳನ್ನು ಮತ್ತು ಡೀಕನರುಗಳನ್ನು ಆಯ್ಕೆಮಾಡುವುದು – ಪ್ರತಿಯೊಂದು ಸಭೆಯಲ್ಲಿಯೂ ಹಿರಿಯರುಗಳ ಪ್ರತಿಷ್ಠೆ – ಯಾರು ಹಿರಿಯರುಗಳನ್ನು ಆಯ್ಕೆಮಾಡಬಹುದು ಮತ್ತು ಹೇಗೆ? – ಬಹುಮತ ಸಂಖ್ಯೆ ಸಾಲದು – ವಿವಿಧ ಸೇವಾ ಶಾಖೆಗಳು – ಸಂಬಳ ಪಡೆವ ಸೇವೆ? – ಸಭೆಯಲ್ಲಿ ಶಿಸ್ತು – ಬೋಧಿಸಲು ತಪ್ಪುಗ್ರಹಿಕೆಯ ಕರೆ – "ಪುಂಡಾಟ ಮಾಡುವವರನ್ನು ಎಚ್ಚರಿಸು" – ತಪ್ಪು ತೋರಿಸಿಕೊಡುವುದು ಒಂದು ಸಾಮಾನ್ಯವಾದ ಕ್ರಮವಲ್ಲ – ಸಾರ್ವಜನಿಕ ಗದರಿಕೆ ಅಪರೂಪ – "ಯಾರೂ ಕೆಡುಕಿಗೆ ಕೆಡುಕನ್ನು ಮಾಡದಂತೆ ನೋಡಿಕೊಳ್ಳಿರಿ"– ಪ್ರೀತಿಸಲು ಉತ್ತೇಜಿಸುವುದು – " ನಾವಾಗಿಯೇ ಸಭೆ ಸೇರುವುದು" – ನಮ್ಮ ಕೂಟಗಳ ವಿವಿಧತೆ ಮತ್ತು ಗುಣ ಲಕ್ಷಣಗಳು – ಸಿದ್ಧಾಂತವು ಇನ್ನೂ ಅವಶ್ಯಕವಾಗಿದೆ – ಪ್ರಶ್ನೆಗಳಿಗೆ ಅವಕಾಶಗಳು – ದೃಷ್ಟಾಂತಿಸಿದ ಲಾಭಕರ ಕೂಟಗಳು – ಪ್ರತಿಯೊಬ್ಬ ವ್ಯಕ್ತಿಯೂ ತಮ್ಮ ಮನಸ್ಸಿನಲ್ಲಿ ಸಂಪೂರ್ಣವಾಗಿ ಒಡಂಬಡಲಿ – ಶವ ಸಂಸ್ಕಾರಗಳು – ಸಭಾ ವಂತಿಗೆಗಳು, ಹಣ ಸಂಗ್ರಹಗಳು ಮತ್ತು ದಾನ ಧರ್ಮಗಳು .**

ಈ ಪ್ರಸ್ತಾಪವನ್ನು ಪರಿಗಣಿಸುವಾಗ ನಾವು ಸಭೆಯ ಏಕತೆಯನ್ನು ನಮ್ಮ ಮನಸ್ಸಿನ ಮುಂದೆ ಇಟ್ಟುಕೊಳ್ಳತಕ್ಕದ್ದು. ಅದೇ ಸಮಯದಲ್ಲಿ ಪ್ರಪಂಚದಾದ್ಯಂತದ ಸಮಗ್ರ ಸಭೆಯು ಒಂದೇ ಆಗಿದೆ, ಮತ್ತೊಂದು ಅರ್ಥದಲ್ಲಿ ಕೂಡಿಬರುವ ಭಕ್ತರ ಪ್ರತಿಯೊಂದು ಗುಂಪುಗಳು ಅಥವಾ ಸಮೂಹಗಳು ಅಖಂಡ ಸಭೆಯನ್ನು ಪ್ರತಿನಿಧಿಸುತ್ತವೆ. ಹೀಗಿರುವುದರಿಂದ ಪ್ರತಿಯೊಂದು ಪ್ರತ್ಯೇಕ ಸಭೆಯು ಕರ್ತನನ್ನು ತನ್ನ ಶಿರಸ್ಸು ಮತ್ತು ಹನ್ನೆರಡು ಮಂದಿ ಅಪೋಸ್ತಲರುಗಳು ಹನ್ನೆರಡು ನಕ್ಷತ್ರಗಳಂತಿದ್ದು, ಪ್ರಕಾಶಿಸುವವರಾಗಿ ಮತ್ತು ಅವರು ಬೋಧಕರುಗಳಾಗಿದ್ದು ಕರ್ತನು ಅವರನ್ನು ತನ್ನ ವಶದಲ್ಲಿಟ್ಟುಕೊಂಡು ನಿಯಂತ್ರಿಸುತ್ತಾನೆ ಎಂದು ಪರಿಗಣಿಸಬೇಕು. ಅವರನ್ನು ಕರ್ತನು ತನ್ನ ವಕ್ತಾರರನ್ನಾಗಿ ತನ್ನ ಸಭೆಯ ಶಿಕ್ಷಣಕ್ಕಾಗಿ ಎಲ್ಲಾ ಕಡೆಗಳಲ್ಲಿಯೂ, ಎಲ್ಲಾ ಕೂಟಗಳಲ್ಲಿಯೂ ಯುಗದ ಎಲ್ಲಾ ಕಾಲದಲ್ಲಿಯೂ ಉಪಯೋಗಿಸಿಕೊಳ್ಳುತ್ತಿದ್ದಾನೆ.

ಪ್ರತಿಯೊಂದು ಸಭೆಯೂ ಅದು ಕೇವಲ ಎರಡು ಅಥವಾ ಮೂರು ಮಂದಿ ಸದಸ್ಯರನ್ನು ಹೊಂದಿದ್ದರೂ ತನ್ನ ಎಲ್ಲಾ ಕಾರ್ಯಗಳಲ್ಲಿ ತನ್ನ ಶಿರಸ್ಸಿನ ಇಚ್ಛೆಗಳನ್ನು ಗ್ರಹಿಸಬೇಕು. ಇದು ವಿಮೋಚಕನ ಅಮೂಲ್ಯವಾದ ತ್ಯಾಗದ ಮೇಲೆ ಮತ್ತು ದೇವರ ವಾಗ್ದಾನಗಳ ಮೇಲೆ ವಿಶ್ವಾಸವಿಟ್ಟಿರುವ ಎಲ್ಲೆಡೆ ಇರುವ ಎಲ್ಲಾ ಪ್ರೀತಿಯ ಸಭೆಗಳ ಏಕತೆಯನ್ನು ಅನುಭವಿಸುವುದು (feel a oneness), ಮತ್ತು ಅವರ ಕಲ್ಯಾಣದ ಬಗ್ಗೆ ಸಂತೋಷದಿಂದ ಆಲಿಸುವುದು, ಕರ್ತನು ತನ್ನ ಕಾರ್ಯಗಳ ಮೇಲ್ವಿಚಾರಕನಾಗಿ ಪ್ರತಿಯೊಂದು ಕಾಲದಲ್ಲಿದ್ದಂತೆ ಇಂದೂ ಸಹಾ ತನ್ನ ಸಭೆಯ ಸೇವೆಗಾಗಿ ಯಾವುದೋ ವಿಶೇಷ ಸಾಧನವನ್ನು ಪ್ರಯೋಗಿಸುತ್ತಾನೆ ಮತ್ತು ಪ್ರತಿಯೊಂದು ಸ್ಥಳೀಯ ಸಮೂಹಕ್ಕಾಗಿ ಕೆಲವೊಂದು ನಿರ್ದಿಷ್ಟರನ್ನು ಉಪಯೋಗಿಸಿ ಕೊಳ್ಳುತ್ತಾನೆ ಎಂಬುದನ್ನು ಗ್ರಹಿಸುವುದು. ಈ ರೀತಿಯಲ್ಲಿ ಕರ್ತನೆಡೆಗೆ ನೋಡಿ ಆತನು ಉಪಯೋಗಿಸುವ ಸೇವಕರುಗಳ ಗುಣನಡತೆಗಳನ್ನು ಅಂದರೆ ನಮ್ರತೆ–ಅಸಕ್ತಿ, ಒಳ್ಳೆಯ ಖ್ಯಾತಿ–ಸತ್ಯದಲ್ಲಿ ಸ್ಪಷ್ಟತೆ, ಆತ್ಮನ ಅಭಿಷೇಕ ಅಥವಾ ಉತ್ಸಾಹ ಇವುಗಳನ್ನು ಗ್ರಹಿಸುವುದು ಮತ್ತು ಅವರನ್ನು ಸಮಗ್ರ ಸಭೆಯ ಅಗತ್ಯತೆಗಳಿಗನುಸಾರವಾಗಿ ಸಾಮಾನ್ಯ ಸಭಾ ಸೇವೆಯ ಪ್ರತೀಕ್ಷೆಗಾಗಿ ತಯಾರು ಮಾಡುವುದು ಮತ್ತು ಕರ್ತನಿಂದ ವಾಗ್ದಾನಮಾಡಲ್ಪಟ್ಟು ಸೂಕ್ತ ಸಮಯದಲ್ಲಿ ದೊರೆಯಲಿರುವ "ಹೊತ್ತು ಹೊತ್ತಿನ ಆಹಾರ" ವಿತರಿಸುವುದಲ್ಲದೆ ಆಶೀರ್ವಾದದಲ್ಲಿ ಪಾಲುಗಾರರಾಗುವುದು. ಈ ಯುಗದ ಅಂತ್ಯದಲ್ಲಿ ಆತನು ಯಾವ ರೀತಿಯಲ್ಲಿ ತನ್ನ ಮನೆವಾರ್ತೆಯವರಿಗೆ ಹಳೆಯ ಮತ್ತು ನೂತನ ಸಂಗತಿಗಳನ್ನು ತನ್ನ ಸ್ವಂತ ಆಯ್ಕೆಯ ಮಾರ್ಗಗಳ ಮೂಲಕ ಒದಗಿಸುತ್ತಾನೆ ಎಂಬ ವಾಗ್ದಾನಗಳನ್ನು ಅವರು ವಿಶೇಷವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕು. (ಮತ್ತಾಯ 24 : 31 ನೋಡಿರಿ)

ಈ ಆಶೀರ್ವಾದಗಳ ಸಂಪನ್ಮೂಲಗಳನ್ನು ಕರ್ತನು ತಾನೇ ಮೇಲ್ವಿಚಾರಕನಾಗಿ ನಿರ್ದೇಶಿಸುತ್ತಾನೆ. ಶಿರದೊಂದಿಗೆ ಅನ್ಯೋನ್ಯತೆಯಿಂದಿರುವ ಎಲ್ಲಾ ಭಾಗಗಳಿಗೆ ಆತ್ಮ ಭರವಸೆ ಇರಬೇಕು ಮತ್ತು ಆತನ ವಾಗ್ದಾನಗಳ ಪೂರೈಕೆಯ ವಿಶ್ವಾಸದಿಂದ ಎದುರು ನೋಡಬೇಕು; ಯಾವುದೇ ಸಮಯದಲ್ಲಿ ಯಾರಿಂದಲೋ ಉದ್ಭವಿಸಿರುವ ಸಿದ್ಧಾಂತಗಳನ್ನು ಶೋಧಿಸಲು ಆತ್ಮನಿಂದ ಅನುಭವ ಹೊಂದಿ ಪ್ರಯತ್ನಿಸಬೇಕಾಗುವುದು. ರುಜುವಾತು ಪಡಿಸಿಕೊಳ್ಳುವುದು ದೈವಿಕವಾಗಿ ನಿರ್ದೇಶಿಸಲ್ಪಟ್ಟ ಸತ್ಯದ ಮಾರ್ಗದ(channel) ಬಗ್ಗೆ ವಿಶ್ವಾಸದ ಕೊರತೆ ಎನಿಸಿಕೊಳ್ಳುವುದಿಲ್ಲ; ಆದರೆ ಅದು ಕರ್ತನಿಗೆ ನಿಷ್ಠೆಯಾಗಿರುವುದು ಮತ್ತು ಸತ್ಯವು ಎಲ್ಲಾ ಮಾನವ ಬೋಧಕರುಗಳಿಗಿಂತ ಮತ್ತು ಅವರ ಹೇಳಿಕೆಗಳಿಗಿಂತ ಶ್ರೇಷ್ಟವಾದುದು ಎಂಬ ಅಭಿಪ್ರಾಯವನ್ನು ಮೂಡಿಸುತ್ತದೆ. ಅವರು ಮನುಷ್ಯರ ಸ್ವರವನ್ನು ಮಾತ್ರವೇ ಕೇಳದೆ ಹಿರಿ ಕುರುಬನ ಸ್ವರವನ್ನೂ ಆಲಿಸುವವರಾಗಿದ್ದಾರೆ. ಅವರು ಆತನ ಮಾತುಗಳಲ್ಲಿ ಉಲ್ಲಾಸಿಸುತ್ತಾರೆ ಮತ್ತು ಅವುಗಳನ್ನು ಪ್ರೀತಿಸುತ್ತಾರೆ – ಅವುಗಳನ್ನು ಮೆಲ್ಲಲು ಮತ್ತು ಜೀರ್ಣಿಸಿಕೊಳ್ಳಲು ಆಶಿಸುತ್ತಾರೆ. ದೇಹದ ಅಂತಹ ಸದಸ್ಯರುಗಳು ಕರ್ತನಲ್ಲಿ ಮತ್ತು ಆತನ ಶಕ್ತಿಯಲ್ಲಿ ಇತರರಿಗಿಂತ ಬಲಯುತವಾಗಿ ಮತ್ತು ತ್ವರಿತವಾಗಿ ಬೆಳೆಯುತ್ತಾರೆ. ಯಾಕೆಂದರೆ ಅವರು ಕರ್ತನ ನಡೆಸುವಿಕೆ ಮತ್ತು ಸೂಚನೆಗಳಿಗೆ ಬಹಳಷ್ಟು ಗಮನಕೊಡುವವರಾಗಿದ್ದಾರೆ.

ದೇಹದ ಈ ಸಾಮಾನ್ಯವಾದ ಅನ್ಯೋನ್ಯತೆ, ಈ ಸಾಮಾನ್ಯ ಅನುಕಂಪ, ಸಾಮಾನ್ಯ ಮಾರ್ಗದ ಮೂಲಕ ಕರ್ತನು ತಾನೇ

ತನ್ನ ದ್ವಿತೀಯಾಗಮನದಲ್ಲಿ ತನ್ನ ಸ್ವಂತ ಸಮೂಹಕ್ಕೆ ನೀಡಲಿರುವ ಸಾಮಾನ್ಯ ಶಿಕ್ಷಣ (ಮಲಾಕಿ 3:17, ಮತ್ತಾ. 24:43–47) ಇವುಗಳು ಪ್ರತಿಯೊಂದು ಸಣ್ಣ ಸಮೂಹಗಳ ಸಭೆಗಳ ಕ್ರಮಕ್ಕೆ ಅಡ್ಡಿಪಡಿಸಲಾರವು. ಸಮೂಹವು ಎಷ್ಟೇ ಚಿಕ್ಕದ್ದಾಗಿದ್ದರೂ ಅದರಲ್ಲಿ ಒಂದು ಕ್ರಮವಿರಲೇಬೇಕು. "ಕ್ರಮ' ಎಂಬ ಶಬ್ಧದಿಂದ ನಾವು ಕಠಿಣ ಅಥವಾ ಸಂಪ್ರದಾಯಬದ್ಧತೆ ಎಂಬ ಅರ್ಥ ನೀಡುವುದಿಲ್ಲ. ಬಹಳ ಉತ್ತಮವಾಗಿ ಮತ್ತು ತೃಪ್ತಿಕರವಾಗಿ ಕಾರ್ಯವೆಸಗುವ ಕ್ರಮವೆಂದರೆ ಶಬ್ಧರಹಿತವಾಗಿ ಕಾರ್ಯ ಸಾಧಿಸುವುದೇ ಆಗಿದೆ. ಇದಕ್ಕಾಗಿ ಇರುವ ಸಾಧನೆಗಳ ಕಾರ್ಯರಚನೆಯು ಕಣ್ಣಿಗೆ ಕಾಣಿಸದು. ಕೂಟವು ಕೇವಲ ಮೂರು, ಹತ್ತು ಅಥವಾ ಹದಿನೈದು ಮಂದಿಯರಾಗಿದ್ದು ಬಹಳ ಸಣ್ಣದ್ದಾಗಿದ್ದರೆ ಹೇಗಾದರೂ ಕರ್ತನ ಕಡೆಗೆ ನೋಡಿ ಎಷ್ಟು ಮಂದಿಯನ್ನು ಹಿರಿಯರು, ದೊಡ್ಡವರು ಅಥವಾ ಸತ್ಯದಲ್ಲಿ ಬಹಳ ಮುಂದುವರೆದವರು ಎಂದು ಪರಿಗಣಿಸಲು ಆತನ ಮಾರ್ಗದರ್ಶನದ ನಿಶ್ಚಯತ್ವವನ್ನು ಪಡೆಯಬೇಕಾಗುತ್ತದೆ. ಇವರು ಒಬ್ಬ ಸಭಾ ಹಿರಿಯನಿಗಿರಬೇಕಾದ ಎಲ್ಲ ಅರ್ಹತೆಗಳನ್ನೂ ಹೊಂದಿರಬೇಕಾಗುತ್ತದೆ. ಇದನ್ನು ನಾವೀಗಾಗಲೇ ಸ್ಫೂರ್ತಿಭರಿತ ಮಾತುಗಳಲ್ಲಿ–ಸತ್ಯದಲ್ಲಿ ಸ್ಪಷ್ಟತೆ, ಅದನ್ನು ಬೋಧಿಸುವ ಸಮಂಜಸತೆ, ನೈತಿಕ ಗುಣನಡತೆಯ ವಿಷಯದಲ್ಲಿ ನಿರ್ದೋಷಿಗಳಾಗಿರುವುದು, ಯಾವುದೇ ಅನಗತ್ಯ ಅಡೆತಡೆಗಳಿಲ್ಲದೆ ಕ್ರಮವನ್ನು ಕಾಪಾಡಿಕೊಳ್ಳುವ ಸಾಮರ್ಥ್ಯ, ಇದನ್ನು ತನ್ನಕುಟುಂಬ ಇತ್ಯಾದಿಗಳಲ್ಲಿ ಉದಾಹರಿಸುವುದನ್ನು ಇವುಗಳಲ್ಲಿ ಕಂಡುಕೊಂಡಿದ್ದೇವೆ.

ಈ ರೀತಿಯಾಗಿ ಚಿಕ್ಕ ಹಿಂಡು ಕರ್ತನ ವಾಕ್ಯ ಮತ್ತು ಸ್ಫೂರ್ತಿಯನ್ನು ತನ್ನ ಮುಂದೆ ಹೊಂದಿರುವಲ್ಲಿ ಮತ್ತು ಅವನ್ನು ಪ್ರಚೋದಿಸುತ್ತಿರುವಲ್ಲಿ ಸೇವಕರನ್ನು ಆಯ್ಕೆಮಾಡುವಲ್ಲಿ ತಿಳಿಯಪಡಿಸಿದ ಅವರ ಸಂಯುಕ್ತ ನಿರ್ಣಯದ ಫಲವನ್ನು ಈ ಪ್ರಸ್ತಾಪದಲ್ಲಿ ಕರ್ತನ ಮನಸ್ಸೆಂದು ಒಪ್ಪಿಕೊಳ್ಳಲೇಬೇಕಾಗುತ್ತದೆ – ಹಿರಿಯರಾಗಿ ಆಯ್ಕೆಗೊಂಡ ವ್ಯಕ್ತಿಗಳು ಎಲ್ಲಾ ಸಾಧ್ಯತೆಗಳ ಪ್ರಕಾರ ಇರುವುದರಲ್ಲಿ ಅತ್ಯುತ್ತಮರು ಹಾಗೂ ಯೋಗ್ಯವಾದವರಾಗಿರುತ್ತಾರೆ. ಹೀಗಿದ್ದಾಗ್ಯೂ, ಅಂತಹ ಆಯ್ಕೆಯನ್ನು ಮಾಡುವಲ್ಲಿ ಅದನ್ನು ಯೋಗ್ಯ ಪರಿಶೀಲನೆ ಮತ್ತು ಪ್ರಾರ್ಥನೆಗಳಿಂದ ಮಾಡಲು ಎಚ್ಚರಿಕೆಯನ್ನು ವಹಿಸಬೇಕು. ತಕ್ಕ ಪ್ರಕಟನೆಯನ್ನು ಮುಂಚಿತವಾಗಿ ಮಾಡಬೇಕು ಮತ್ತು ನೂತನ ಸೃಷ್ಟಿಯ ಸದಸ್ಯರು ಎಂದು ಹೇಳಿಕೊಳ್ಳುವವರನ್ನು ಮಾತ್ರವೇ (ಸ್ತ್ರೀ ಮತ್ತು ಪುರುಷರು) ಈ ವಿಷಯದಲ್ಲಿ ಕರ್ತನ ಮನಸ್ಸನ್ನು ವ್ಯಕ್ತಪಡಿಸುವ ಪ್ರಯತ್ನವನ್ನು– ಮತದಾನವನ್ನು ಮಾಡಬೇಕು. ಇವರುಗಳು ತಮ್ಮ ಪಾಪಗಳಿಗೆ ಪಶ್ಚಾತ್ತಾಪಪಟ್ಟವರಾಗಿದ್ದು, ತಮ್ಮ ಯೋಗ್ಯತಾನುಸಾರ ಪೂರ್ವಸ್ಥಿತಿಯನ್ನು ಪಡಕೊಂಡವರಾಗಿದ್ದು, ದೇವರೊಂದಿಗೆ ತಮ್ಮ ಐಕ್ಯತೆ ಹೊಂದಿ ಹಾಗೂ ಕರ್ತನಾದ ಯೇಸುಕ್ರಿಸ್ತನ ಯಜ್ಞವೇ ತಳಹದಿಯೆಂದು ಅಂಗೀಕರಿಸಿರುವರಾಗಿರಬೇಕು, ಮಾತ್ರವಲ್ಲದೆ ತಮ್ಮನ್ನು ಕರ್ತನಿಗೇ ಸಂಪೂರ್ಣವಾಗಿ ಪ್ರತಿಷ್ಠೆ ಪಡಿಸಿಕೊಂಡವರಾದ ಅಭಿಷಕ್ತರಾಗಿರಬೇಕು, ಹಾಗೂ "ಕರ್ತನ ಮಕ್ಕಳ ಮನೆ'ಯ ಸಕಲ ಸೌಕರ್ಯಕ್ಕೆ ಅರ್ಹರಾಗಿರಬೇಕು. ಇವರು ಮಾತ್ರವೇ ಸಭಾ ಶಿರಸ್ಸಿನ ಮನಸ್ಸು, ಚಿತ್ತ ಇವುಗಳನ್ನು ಮೆಚ್ಚಿಕೊಳ್ಳಲು ಮತ್ತು ಅವನ್ನು ವ್ಯಕ್ತಪಡಿಸಲು ಸಮರ್ಥರಾಗಿರುತ್ತಾರೆ. ಇವರುಗಳು ಮಾತ್ರವೇ ಕ್ರಿಸ್ತನ ದೇಹವಾದ ಸಭೆಯ ಅಂಶವಾಗಿರುತ್ತಾರೆ. ಇನ್ನೂ ಪ್ರತಿಷ್ಠೆಯ ಹೆಜ್ಜೆ ಇಡದೆ ಕ್ರಿಸ್ತನ ಅಮೂಲ್ಯವಾದ ರಕ್ತದಲ್ಲಿ ನಂಬಿಕೆಯಿಟ್ಟ ಇತರರನ್ನು ವಿಶ್ವಾಸದ ಮನೆವಾರ್ತೆಯವರ ಲೆಕ್ಕಕ್ಕೆ ತೆಗೆದುಕೊಳ್ಳಬಹುದು ಮತ್ತು ಅವರ ಪ್ರಗತಿಯನ್ನು ನಿರೀಕ್ಷಿಸಬಹುದು ಮತ್ತು ಅವರ ಕಲ್ಯಾಣವನ್ನು ಪರಿಗಣಿಸಬಹುದು.

## ಪ್ರತಿಯೊಂದು ಕ್ರೈಸ್ತ ಸಭೆಯಲ್ಲಿಯೂ ಹಿರಿಯರನ್ನು ಪ್ರತಿಷ್ಠಿಸುವುದು

### Ordaining Elders in Every Ecclesia

**"ಇದಲ್ಲದೆ ಪ್ರತಿ ಸಭೆಯಲ್ಲಿ ಸಭೆಯವರ ಸಮ್ಮತಿಯಿಂದ ಹಿರಿಯರನ್ನು ಗೊತ್ತುಮಾಡಿ ನೇಮಿಸಿ ಉಪವಾಸವಿದ್ದು ಪ್ರಾರ್ಥನೆ ಮಾಡಿ ಅವರು ನಂಬಿದ್ದ ಕರ್ತನ ಕೈಗೆ ಅವರನ್ನು ಒಪ್ಪಿಸಿದರು" (ಅಪೋಸ್ತಲರ ಕೃತ್ಯಗಳು 14:23)**

ಈ ರೀತಿಯ ಹೇಳಿಕೆಗಳು ಮತ್ತು ಆಗಾಗ ಎಲ್ಲ ಸಭೆಯ ಹಿರಿಯರ ಬಗ್ಗೆ ಬರುವ ಇತರ ಉಲ್ಲೇಖಗಳು ಇದು ಆದಿ ಸಭೆಗಳಲ್ಲಿದ್ದ ಸ್ಥಿರವಾದ ಪದ್ಧತಿಯಾಗಿತ್ತು ಎಂಬ ಊಹೆಯನ್ನು ಪುಷ್ಟಿಗೊಳಿಸುತ್ತದೆ. ಈ ವಾಕ್ಯಭಾಗದಲ್ಲಿ ಕಾಣುವ "ಹಿರಿಯರು' ಎಂಬ ಪದವು ಸೌವಾರ್ತಿಕರನ್ನು, ಸಭಾಪಾಲಕರುಗಳನ್ನು, ಬೋಧಕರುಗಳನ್ನು ಮತ್ತು ಪ್ರವಾದಿಗಳನ್ನು (ಸಾರ್ವಜನಿಕ ಪ್ರತಿಪಾದಕರುಗಳು) ಒಳಗೊಂಡಿದೆ; ಅದುದರಿಂದ ನಾವು "ದೀಕ್ಷೆ" (Ordained) ಎಂಬುದರ ಅರ್ಥವನ್ನು ತಿಳಿದು ಕೊಳ್ಳಬೇಕು. ಈಗಿನ ಕಾಲದಲ್ಲಿ ಈ ಪದವನ್ನು ಸಂಸ್ಥಾಪನಾ(ದೀಕ್ಷಾ) ಸಮಾರಂಭಗಳಲ್ಲಿ ಉಪಯೋಗಿಸುತ್ತಾರೆ; ಆದರೆ ಇದು ಗ್ರೀಕ್ ಪದವಾದ Cheirotoneo (*to elect by stretching out the hand*) ಎಂಬುದರ ಭಾವಾರ್ಥವಾಗಿದೆ. ಇದು ಇನ್ನೂ ಸಹಾ ಸಾಮಾನ್ಯವಾದ ಆಯ್ಕೆಯ ಪದ್ಧತಿಯಾಗಿದೆ. ಈ ಅರ್ಥ ವಿವರಣೆಯನ್ನು Prof. Young's analytical Bible Concordance ನಲ್ಲಿ ನೀಡಲಾಗಿದೆ. ಅದನ್ನು ಪ್ರೆಸ್ಬಟೀರಿಯನ್ ವಿಧಾಯಕ ಎಂದು ಪರಿಗಣಿಸಬಹುದು. ನಾವು "Strong's Exhaustive Concordance'ನಲ್ಲಿ ನೀಡಿರುವ ಅರ್ಥವಿವರಣೆಯನ್ನೂ ನೀಡುತ್ತೇವೆ. ಇದನ್ನೂ ಮೆಥೊಡಿಸ್ಟ್ ವಿಧಾಯಕ ಎಂದು ಪರಿಗಣಿಸಬಹುದು. ಎರಡನೆಯ ನಿರೂಪಣೆಯು ಪದದ ಬುಡವನ್ನೇ ತೋರಿಸುತ್ತದೆ– A hand reacher or Voter (by raising the hand)– ಕೈ ಎತ್ತಿ ಮಾಡುವ ಮತದಾನ.

"ನಾನು ನಿಮ್ಮನ್ನು ಆರಿಸಿ ತೆಗೆದುಕೊಂಡು ಪ್ರತಿಷ್ಠೆಪಡಿಸಿದೆನು" (ಯೋಹಾನ 15:16 ನೋಡಿರಿ) ಎಂಬ ನಮ್ಮ ಕರ್ತನ ಹೇಳಿಕೆಯ ಬಗ್ಗೆ ಸಂಪೂರ್ಣವಾಗಿ ಬೇರೆಯದೇ ಆದ ಗ್ರೀಕ್ ಪದವನ್ನು ಬಳಸಲಾಗಿದೆ. "Tithemi" ಎಂಬ ಈ ಪದವನ್ನೇ ಅಪೋಸ್ತಲನು ತನ್ನ ಪ್ರತಿಷ್ಠೆಯ ಬಗ್ಗೆ ಉಪಯೋಗಿಸುತ್ತಾ "ನಾನು ಸಾರುವವನಾಗಿಯೂ ಅಪೋಸ್ತಲನಾಗಿಯೂ.... ನೇಮಿಸಲ್ಪಟ್ಟೆನು" (1 ತಿಮೋ : 2:7) ಎನ್ನುತ್ತಾನೆ. ಆದರೆ ಈ

ಪ್ರತಿಷ್ಠೆ ಅಥವಾ ನೇಮಕವನ್ನು ಅಪೋಸ್ತಲನು ಮನುಷ್ಯರ ಕಡೆಯಿಂದಾಗಲೀ, ಮನುಷ್ಯರ ಮುಖಾಂತರವಾಗಲೀ ಅಪೋಸ್ತಲನಾಗಿರದೆ ಯೇಸುಕ್ರಿಸ್ತನ ಮುಖಾಂತರವಾಗಿಯೂ, ಆತನನ್ನು ಸತ್ತವರೊಳಗಿಂದ ಎಬ್ಬಿಸಿದ ತಂದೆಯಾದ ದೇವರಿಂದಲೂ ಅಪೋಸ್ತಲೋದ್ಯೋಗವನ್ನು ಹೊಂದಿದೆನೆಂದು ಹೇಳಿಕೊಳ್ಳುತ್ತಾನೆ (ಗಲಾ. 1:1). ಪ್ರತಿಷ್ಠಿತ ಸಂಸ್ಥೆಯ ಎಲ್ಲಾ ಸದಸ್ಯರುಗಳೂ ಶಿರದೊಂದಿಗೆ ಒಂದುಗೂಡಿಸಲ್ಪಟ್ಟಿದ್ದಾರೆ ಮತ್ತು ಆತನ ಆತ್ಮದಲ್ಲಿ ಪಾಲುದಾರರಾಗಿದ್ದಾರೆ, ಮತ್ತು ಪ್ರತಿಷ್ಠೆ ಹೊಂದಿದ್ದಾರೆಯಾದರೂ ನಿಜವಾಗಿಯೂ ಪೌಲನಂತಲ್ಲ, ಆದರೆ ಸತ್ಯದ ಸೇವಕರುಗಳಾಗಿ, ಪ್ರತಿಯೊಬ್ಬರೂ ತಮ್ಮ ಮೇಧಾಶಕ್ತಿ ಮತ್ತು ಅವಕಾಶಗಳಿಗನುಸಾರವಾಗಿ ನೇಮಿಸಲ್ಪಟ್ಟವರು (ಯೆಶಾಯ 61:1) – ಹನ್ನೆರಡು ಮಂದಿ ಮಾತ್ರವೇ ಅಪೋಸ್ತಲರಾಗಿ ಅಥವಾ ವಿಶೇಷ ಪ್ರತಿನಿಧಿಗಳಾಗಿ, ಸರ್ವಸ್ವತಂತ್ರ ರಾಯಭಾರಿಗಳಾಗಿ ಪ್ರತಿಷ್ಠೆ ಹೊಂದಿದವರು.

ಮೇಲೆ ಹೇಳಿದಂತೆ ನೂತನ ಸೃಷ್ಟಿಯ ಸಭೆಯವರು ತಮ್ಮ ಕೈಗಳನ್ನೆತ್ತಿ ಮತದಾನ ಮಾಡುವ ಮೂಲಕ ಹಿರಿಯರ ಪ್ರತಿಷ್ಠೆ ಅಥವಾ ಮಾನ್ಯತೆಯನ್ನು ಮಾಡುವುದರಲ್ಲಿ ನಾವು ಇದೊಂದು ಸಾಂಪ್ರದಾಯಿಕ ವಿಧಿ ಎಂಬುದನ್ನು ಗಮನಿಸುತ್ತೇವೆ. ತೀತನು ಯಾವ ರೀತಿಯಲ್ಲಿ ತನ್ನ ಸಹಾಯಕನಾದನೆಂದು ಹೇಳುವಲ್ಲಿ ಅಪೋಸ್ತಲನು ಅದೇ ಗ್ರೀಕ್ ಪದವನ್ನು ಬಳಸುತ್ತಾ "ಸಭೆಗಳವರು ಈತನನ್ನು ನಮ್ಮ ಸಂಗಡ ಪ್ರಯಾಣ ಮಾಡುವುದಕ್ಕೆ ಗೊತ್ತುಮಾಡಿದ್ದಾರೆ" (2 ಕೊರಿಂಥ 8:19) ಎಂದು ಹೇಳುತ್ತಾನೆ. ದಪ್ಪ ಅಕ್ಷರಗಳಲ್ಲಿ ಕೊಟ್ಟಿರುವ ಪದಗಳೆಲ್ಲವೂ ಗ್ರೀಕ್ ಪದ Cheirotoneo ದಿಂದ ಬಂದವುಗಳಾಗಿವೆ. ಮೇಲೆ ಹೇಳಿದಂತೆ ಇದು "ಕೈ ಎತ್ತಿ ಆಯ್ಕೆಮಾಡುವುದು" ಎಂಬುದನ್ನು ಸೂಚಿಸುತ್ತದೆ. ಮುಂದುವರೆದು ಈ ಪದವು ಇಲ್ಲಿ ಅಪೋಸ್ತಲನು ಸಹಾ ಅದರಂತೆ ಆಯ್ಕೆಗೊಂಡನು ಎಂಬ ಅಭಿಪ್ರಾಯವನ್ನು ಮೂಡಿಸುತ್ತದೆ. ಆತನು ಅಪೋಸ್ತಲನಾಗಿ ಆಯ್ಕೆಗೊಳ್ಳಲಿಲ್ಲ, ಆದರೆ ಈ ಸಂಧರ್ಭದಲ್ಲಿ ಒಬ್ಬ ಮಿಷನರಿ (ಸುವಾರ್ತಾ ಸೇವಕ) ಯಾಗಿ, ಸಭೆಗಳ ಪ್ರತಿನಿಧಿಯಾಗಿ, ನಿಸ್ಸಂದೇಹವಾಗಿ ಅವರ ಖರ್ಚಿನಲ್ಲಿ ಆಯ್ಕೆಯಾದವನು.

ಸ್ಪಷ್ಟವಾಗಿ, ಹೇಗೂ, ಅಪೋಸ್ತಲನ ನಂತರದ ಕೆಲವೊಂದು ಪ್ರಯಾಣಗಳು ಅಂತಿಯೋಕ್ಯದವರ ಆಯ್ಕೆ ಅಥವಾ ಬೆಂಬಲವನ್ನು ಪಡೆದಿರಲಿಲ್ಲ. (2ತಿಮೊ.1:15), ಪ್ರಾಚೀನ ಸಭೆಗಳ ಕಾಯಿದೆಗಳು ಎಲ್ಲರೂ ತಮ್ಮ ಮೇಧಾಶಕ್ತಿಯನ್ನು, ಮನೆವಾರ್ತೆತನವನ್ನು ತಮ್ಮ ಪ್ರಜ್ಞಾನುಸಾರವಾಗಿ ಕಾರ್ಯಗತಗೊಳಿಸಲು ಮುಕ್ತ ಅವಕಾಶಗಳನ್ನು ನೀಡಿತ್ತು. ಸಭೆಗಳು ಅಪೋಸ್ತಲರ ಸೇವೆಯನ್ನು ಅಂಗೀಕರಿಸಬಹುದಿತ್ತು ಅಥವಾ ಅವರನ್ನು ವಿಶೇಷ ಪ್ರತಿನಿಧಿಗಳೆಂದು ನಿರಾಕರಿಸಲೂಬಹುದಿತ್ತು. ಅಪೋಸ್ತಲರುಗಳು ಸಹಾ ಅಂತಹ ನಿಶ್ಚಿತ ಕಾರ್ಯಗಳನ್ನು ತಮ್ಮ ಪ್ರಜ್ಞಾನುಸಾರ ಅಂಗೀಕರಿಸಬಹುದಿತ್ತು ಇಲ್ಲವೆ ನಿರಾಕರಿಸಬಹುದಿತ್ತು.

ಆದರೆ, ಈ ರೀತಿಯ ಆಯ್ಕೆಯನ್ನು ಹೊರತುಪಡಿಸಿ ಹೊಸ ಒಡಂಬಡಿಕೆಯಲ್ಲಿ ಬೇರೆ ಯಾವುದೇ ರೀತಿಯ ಪ್ರತಿಷ್ಠೆಗಳಿರಲಿಲ್ಲವೆ? ಬೋಧಿಸುವ ಅಧಿಕಾರ ಅಥವಾ ಅನುಮತಿ ನೀಡುವ, ಎಲ್ಲಾ ಪಂಥಗಳಲ್ಲಿ ಇಂದು ಬೋಧಕರ ಅನುಮತಿ ಪತ್ರ ಅಥವಾ ಹಿರಿಯರ ಅಥವಾ ಪ್ರಸಂಗಿಗಳ ಪ್ರತಿಷ್ಠೆಯ ಸಮಯದಲ್ಲಿ ಸಾಮಾನ್ಯವಾಗಿ ಉಪಯೋಗಿಸುವ ಇಂಗ್ಲಿಷ್ ಪದ Ordain ಎಂಬುದರ ಸೂಚನೆಗಳೇನಾದರೂ ಇದ್ದಿಲ್ಲವೆ ? ಈ ಪ್ರಶ್ನೆಗಳನ್ನು ನಾವೀಗ ಪರೀಕ್ಷಿಸೋಣ.

Ordain ಎಂಬ ಪದವು ಸಭಾಹಿರಿಯರ ಸಂಬಂಧದಲ್ಲಿ ಮತ್ತೊಂದು ಸ್ಥಳದಲ್ಲಿ ಮಾತ್ರವೇ ಉಪಯೋಗಿಸಲ್ಪಟ್ಟಿದೆ. ಆದರೆ ಅದು ಬೇರೊಂದು ಗ್ರೀಕ್ ಪದವಾದ Kathestemi ಎಂಬುದರ ಭಾಷಾಂತರ. ("To place down or set down-*young,* To place down - *Strong* ")ಇದು "ಕ್ರಮ ಪಡಿಸು' ಎಂಬುದನ್ನು ಸೂಚಿಸುತ್ತದೆ. ಈ ಪದವನ್ನು ತೀತ 1: 5 ರಲ್ಲಿ ಈ ರೀತಿಯಾಗಿ ನೋಡಬಹುದು "ಇನ್ನೂ ಕ್ರಮಕ್ಕೆ ಬಾರದಿರುವ ಕಾರ್ಯಗಳನ್ನು ಕ್ರಮಪಡಿಸಿ ಪಟ್ಟಣ ಪಟ್ಟಣಗಳಲ್ಲಿಯೂ ಸಭೆ ಹಿರಿಯರನ್ನು ನೇಮಿಸಬೇಕೆಂದು ನಿನಗೆ ಅಪ್ಪಣೆಕೊಟ್ಟು ನಿನ್ನನ್ನು ಅಲ್ಲೇ ಬಿಟ್ಟು ಬಂದೆನಲ್ಲಾ". ("As I gave thee charge") ಈ ವಾಕ್ಯದ ಮೇಲ್ನೋಟದಲ್ಲಿ ತೀತನು ಒಟ್ಟು ಸಭೆಯನ್ನು ಗಣನೆಗೆ ತಾರದೆ ತಾನೇ ಹಿರಿಯರನ್ನು ನೇಮಿಸುವ ಅಧಿಕಾರ ಹೊಂದಿದ ವನಾಗಿದ್ದನೆಂದು ತಿಳಿದು ಬರುತ್ತದೆ. ಈ ದೃಷ್ಟಿಕೋನದ ಮೇಲೆ ಎಪಿಸ್ಕೋಪಲ್ ಚರ್ಚ್ ವಿಚಾರಸರಣಿಯು ಆತುಕೊಂಡಿದೆ. ಕ್ಯಾಥೋಲಿಕರು, ಬಿಷೋಪಾಡಳಿತಕ್ಕೆ ಒಳಪಟ್ಟವರು ಮತ್ತು ಮೆಥೋಡಿಸ್ಟರು ಎಪಿಸ್ಕೋಪಲ್ ಚರ್ಚ್ ಇವರೆಲ್ಲರೂ ತಮ್ಮ ಬಿಷೋಪರಿಗೆ ಸಭೆಯವರು ತಮ್ಮ ಕೈಗಳನ್ನೆತ್ತಿ ಅಥವಾ ಬೇರೆ ಯಾವ ರೀತಿಯಲ್ಲಿಯಾದರೂ ಮತದಾನವನ್ನು ಮಾಡದೆ ತಾವೇ ಸಭಾ ಹಿರಿಯರನ್ನು ಆಯ್ಕೆ ಮಾಡಿಕೊಳ್ಳುವ ಅಪೋಸ್ತೋಲಿಕ ಅಧಿಕಾರವನ್ನು, ಸ್ಥಾನ ಮಾನವನ್ನು ಕೇಳುತ್ತಾರೆ.

ಈ ಮೂಲ ಪಾಠವು ಈ ರೀತಿಯ ರಕ್ಷಣಾ ವ್ಯವಸ್ಥೆಯ ಭಾವನೆಯ ಬಗ್ಗೆ ಇರುವುದಾಗಿದೆ. ಆದರೆ ನಾನು "ನಿನಗೆ ಅಪ್ಪಣೆಕೊಟ್ಟು' (ನೇಮಿಸಿ) ಎಂಬ ಕಡೇ ಭಾಗವನ್ನು ನಾವು ನೋಡುವಾಗ ಇದು ನಿಜವಾಗಿಯೂ ಒಂದು ಬಲಹೀನ ಬೆಂಬಲವೆಂಬಂತೆ ತೋರುತ್ತದೆ. ಇಲ್ಲಿ ಅಪೋಸ್ತಲನು ನಿಜವಾಗಿಯೂ ತಾನು ತೀತನಿಗೆ ಮಾಡಿದ ರೀತಿಯ ಹೊರತಾಗಿ ಬೇರೆ ಯಾವ ರೀತಿಯ "ಅಧಿಕಾರ"ವನ್ನು ಖಂಡಿತವಾಗಿಯೂ ಕೊಡಲಿಲ್ಲವೆಂದು ಕಂಡುಬರುತ್ತದೆ. ಅಪೋಸ್ತಲನ ಸ್ವಂತ ಕಾರ್ಯವಿಧಾನವನ್ನು ಇಲ್ಲಿ ಸರಿಯಾದ ರೀತಿಯಲ್ಲಿ ಅನುವಾದಿಸಲಾಗಿದ್ದು ಇದು ಬಹಳಷ್ಟು ಕೂಲಂಕಷವಾಗಿದೆ. – "ಪ್ರತಿ ಸಭೆಯಲ್ಲಿ ಸಭೆಯವರ ಸಮ್ಮತಿಯಿಂದ ಹಿರಿಯರನ್ನು ಗೊತ್ತುಮಾಡಿ ನೇಮಿಸಿ ಉಪವಾಸವಿದ್ದು ಪ್ರಾರ್ಥನೆ ಮಾಡಿ ಅವರು ನಂಬಿದ್ದ ಕರ್ತನ ಕೈಗೆ ಅವರನ್ನು ಒಪ್ಪಿಸಿದರು" (ಅಪೋಸ್ತಲರ ಕೃತ್ಯಗಳು 14:23).

ಅಪೋಸ್ತಲನ ಬುದ್ಧಿಮಾತುಗಳು ಮತ್ತು ಆತನು ಸತ್ಯದ ನಿಷ್ಠಾವಂತ ಸೇವಕನೆಂದು ತಿಳಿದು ತನ್ನ ಸಹೋದರರ ವಶಕ್ಕೆ ಒಪ್ಪಿಸಿದ್ದ ತೀತನ ಬುದ್ದಿವಾದವು ನಿಸ್ಸಂದೇಹವಾಗಿ ಸಹೋದರರಿಂದ ಬಯಸಿದವುಗಾಳಾಗಿದ್ದವು. ಅವರು ಅದನ್ನು

ಬಹಳಷ್ಟು ಸಾಮಾನ್ಯವಾಗಿ ಪಾಲಿಸಿದರಾದರೂ ಆತನ ಹೆಜ್ಜೆಗಳನ್ನು ಅನುಸರಿಸಿದ ಅಪೋಸ್ತಲನು (ಕ್ರೈಸ್ತ ಸಭೆಯ ಜವಾಬ್ದಾರಿಯನ್ನು) ದೇವರು ಇಟ್ಟಲ್ಲಿಯೇ ಇಡಬಯಸಿದನು. "ಅವರ ಚಿಂತನೆಯು ಅದು ದೇವರಿಂದ ಪ್ರೇರಿತವಾದುವುಗಳೋ ಎಂದು ಪರೀಕ್ಷಿಸುವುದಾಗಿತ್ತು" (1ಯೋಹಾನ 4:1) "ಯಾರಾದರೂ ಈ ಮಾತುಗಳಂತೆ ಮಾತನಾಡದೇ ಹೋದಲ್ಲಿ ಅವರಲ್ಲಿ ಬೆಳಕಿಲ್ಲ ಮತ್ತು ಅಂಥವರು ತಿರುಗಿ ಬೀಳುತ್ತಾರೆ; ಅಂಥವರಿಗೆ ಮತನೀಡಬೇಕಿಲ್ಲ ಮತ್ತು ಅವರನ್ನು ಯಾವ ರೀತಿಯಿಂದಲಾದರೂ ಉಪದೇಶಿಗಳು, ಸಭಾ ಹಿರಿಯರು ಮುಂತಾಗಿ ಅಂಗೀಕರಿಸಬೇಕಾಗಿಲ್ಲ" ಎಂದು ಅಪೋಸ್ತಲನು ಬುದ್ಧಿ ಹೇಳುತ್ತಾನೆ.

ಅದು ಹೇಳಿದಂತೆ ಮತದಾನದ ಮೂಲಕವಾಗಿರಲಿ, ಇಲ್ಲದಿರಲಿ ಹೇಗಾದರೂ ಸಭೆಯ ಒಪ್ಪಿಗೆ ಕೇವಲ ಅಗತ್ಯ. ಒಂದು ವೇಳೆ ತೀತನು ಹಿರಿಯರನ್ನು ಸಹೋದರರಿಗೆ ಒಗ್ಗುವ ರೀತಿಯಲ್ಲಿ ನೇಮಿಸದೇ ಹೋಗಿದ್ದರೆ ಎಷ್ಟರವರೆಗೆ ಶಾಂತಿ ಉಳಿದುಕೊಳ್ಳುತ್ತಿತ್ತು? ಸಭೆಯ ಭಾವನೆಗಳಿಗೆ ಆಕ್ಷೇಪಣೀಯರಾದ ಅಂತಹ ಹಿರಿಯರು ಎಷ್ಟರ ಮಟ್ಟಿಗೆ ಸಭಾ ಪಾಲನೆ ಮುಂತಾದ ಸಭಾಸೇವೆಯನ್ನು ಮಾಡಲು ಸಾಧ್ಯವಾಗುತ್ತಿತ್ತು?. ಪ್ರಾಯೋಗಿಕವಾಗಿ ಏನೂ ಮಾಡಲಾಗುತ್ತಿದ್ದಿಲ್ಲ

ನಮ್ಮ ಕರ್ತನ ಮತ್ತು ಆತನ ಹನ್ನೆರಡು ಮಂದಿ ಅಪೋಸ್ತಲರ ಬೋಧನೆಗಳಿಂದಲ್ಲ, ಆದರೆ ಪುರೋಹಿತ (ಪಾದ್ರಿ) ವರ್ಗದ ಲೌಕಿಕಧೋರಣೆಗಳೇ ಸಂತರುಗಳನ್ನು, ಪುರೋಹಿತರು ಮತ್ತು ಸಾಮಾನ್ಯರು ಎಂಬ ಎರಡು ವರ್ಗಗಳನ್ನಾಗಿ ವಿಭಜಿಸಲು ಕಾರಣ. ಪುರೋಹಿತ (ಪಾದ್ರಿ)ವರ್ಗದ ಮತ್ತು ಕ್ರಿಸ್ತ ವಿರೋಧಿಯ ಈ ಐಹಿಕ ಧೋರಣೆಯ ಮನಸ್ಸು ಈಗಲೂ ಸಹಾ ಕರ್ತನ ಸ್ವಾಸ್ತ್ಯದ ಮೇಲೆ ಸಾಧ್ಯವಾದ ಎಲ್ಲಾ ಅಧಿಕಾರಗಳನ್ನು ಚಲಾಯಿಸಬಯಸುತ್ತದೆ. ಇದು ಪ್ರತಿಯೊಂದು ಸಭೆಯಲ್ಲಿನ ತಿಳುವಳಿಕೆ ಇಲ್ಲದಿರುವುದಕ್ಕೆ ಅನುಪಾತವಾಗಿ ಇರುತ್ತದೆ. ಕರ್ತನಾಗಲೀ, ಅಪೋಸ್ತಲನಾಗಲೀ ಸಭಾ ಹಿರಿಯರನ್ನು ಮಾನ್ಯ ಮಾಡದೆ ಸಭೆಯನ್ನು ಮಾತ್ರವೇ ಕರ್ತನ ದೇಹವೆಂದು ಮಾನ್ಯ ಮಾಡುವವರಾಗಿದ್ದಾರೆ; ಸಭಾ ಸೇವಕರಾಗಿ ನಿಷ್ಠಾವಂತ ಹಿರಿಯರಿಗೆ ಹೊಂದಿಕೊಂಡಿರುವ ಯಾವುದೇ ಗೌರವ ಅಥವಾ ಘನತೆಯು ಕೇವಲ ತಮಗೆ ತಾವೇ ಅಥವಾ ಇತರ ಹಿರಿಯರಿಂದ ದೊರೆತ ಮಾನ್ಯತೆಯಲ್ಲ. ಅವರನ್ನು ಆರಿಸಿದ ಸಭೆಯವರು ಅವರನ್ನು ತಿಳಿದಿರಬೇಕು, ಅವರ ಕ್ರಿಸ್ತೀಯ ಕೃಪೆಯನ್ನು, ಮತ್ತು ಕರ್ತನ ಮಾತುಗಳ ಪ್ರಕಾರ ಅವರ ಯೋಗ್ಯತೆಯನ್ನು ಗ್ರಹಿಸುವವರಾಗಿರಬೇಕು. ಇಲ್ಲವಾದಲ್ಲಿ ಅವರು ಅಂಥವರಿಗೆ ಆ ರೀತಿಯ ಯಾವುದೇ ಸ್ಥಿರವಾದ ಗೌರವವನ್ನು ಕೊಡಲು ಸಾಧ್ಯವಿಲ್ಲ. ಆದುದರಿಂದ ಸಭಾಹಿರಿಯರು ಸ್ವಯಂ ನೇಮಕಾತಿಯ ಅಧಿಕಾರವನ್ನು ಹೊಂದಿರುವುದಿಲ್ಲ. ನಿಜವಾಗಿಯೂ ಕರ್ತನ ದೇಹವಾದ ಸಭೆಯನ್ನು ನಿರ್ಲಕ್ಷಿಸುವ ಮತ್ತು ಎಲ್ಲವುಗಳಿಗಿಂತ ತಮ್ಮನ್ನು ಮತ್ತು ತಮ್ಮ ನಿರ್ಣಯಗಳನ್ನು ಹೆಚ್ಚೆಂದು ಎಣಿಸುವ ಪ್ರವೃತ್ತಿಯುಳ್ಳ ಸಹೋದರನು ಸಭಾ ಹಿರಿಯನಾಗುವ ಮನೋವೃತ್ತಿಯುಳ್ಳವನಲ್ಲ ಎಂಬುದಕ್ಕೆ ಉತ್ತಮ ಸಾಕ್ಷಿ – ನಮ್ರತೆ, ಕ್ರಿಸ್ತನ ದೇಹವೆಂಬ ಸಭೆಯ ಅನ್ಯೋನ್ಯತೆಯನ್ನು ಮಾನ್ಯಮಾಡುವುದು ಇವುಗಳು ಅಂತಹ ಸೇವೆಗೆ ಇರಬೇಕಾದ ಪ್ರಮುಖ ಅಗತ್ಯತೆಗಳು.

ಯಾವುದೇ ಸಹೋದರನಿಗೆ ಅವನ ಅಂಗೀಕಾರದ ಬಗ್ಗೆ ಪ್ರಶ್ನೆಯಿಲ್ಲವೆಂಬುದು ಖಚಿತವಾಗಿದ್ದರೂ ಆತನು ಸಭೆಯಲ್ಲಿ ಸಭಾ ಹಿರಿಯ, ಪ್ರತಿನಿಧಿ ಮುಂತಾದ ಯಾವುದೇ ಸಾರ್ವಜನಿಕ ಸೇವೆಯನ್ನು ಚುನಾವಣೆಯಿಲ್ಲದೆ ನಿರ್ವಹಿಸಲಾಗದು. ಹಿರಿಯರನ್ನು ಪ್ರತಿಷ್ಠೆ ಪಡಿಸುವ ದೇವರ ವಾಕ್ಯದಲ್ಲಿನ ಕ್ರಮವು ಕೈಗಳನ್ನು ಮೇಲೆತ್ತಿ ಮಾಡುವ ಸಭೆಯ ಚುನಾವಣೆಗಳ ಮೂಲಕವೇ. ಸೇವೆಯನ್ನು ಮಾಡುವ ಮುನ್ನ ಅಂತಹ ಚುನಾವಣೆಯನ್ನು ಆಗ್ರಹಪಡಿಸುವುದು ದೇವರ ವಾಕ್ಯಕ್ಕೆ ಅನುಸಾರವಾಗಿದೆ; ಅದು ಹಿರಿಯರನ್ನು ಬಲಪಡಿಸುತ್ತದೆ. ಮತ್ತು ಇದಕ್ಕೂ ಹೆಚ್ಚಾಗಿ ಸಭೆಗೆ ದೇವರ ಹೆಸರಿನಲ್ಲಿ ಹಿರಿಯರನ್ನು ಆರಿಸುವ ಕರ್ತವ್ಯ ಮತ್ತು ಜವಾಬ್ದಾರಿಗಳು ತಮ್ಮದಾಗಿವೆ ಎಂಬುದನ್ನು ಅವರಿಗೆ ನೆನಪಿಸುತ್ತದೆ. ಈ ಮೂಲಕ ಅವರು ದೇವರ ಆಯ್ಕೆ ಮತ್ತು ದೇವರ ಚಿತ್ತವನ್ನು ನೆರವೇರಿಸುವವರಾಗಿದ್ದಾರೆ. ಇದಕ್ಕೂ ಅಧಿಕವಾಗಿ ಈ ದೇವರ ವಾಕ್ಯದಲ್ಲಿನ ವ್ಯವಸ್ಥೆಯು ಹಿರಿಯರ ಎಲ್ಲಾ ಮಾತುಗಳು ಮತ್ತು ಸೇವೆಯನ್ನು ಅವರು ತಮ್ಮ ಸೇವಕರಾಗಿ ಮತ್ತು ಪ್ರತಿನಿಧಿಗಳಾಗಿ ಮಾಡುತ್ತಾರೆಂಬ ಆಸಕ್ತಿಯನ್ನು ಅದು ಸಭೆಯ ಸದಸ್ಯರಲ್ಲಿ ಉಂಟುಮಾಡುತ್ತದೆ. ಸಭೆಯ ಹಿರಿಯರು ಸಭೆಯವರನ್ನು ಸ್ವಕೀಯರೆಂದು ಮತ್ತು ಅವರು ಅದನ್ನು ಆಳಬಲ್ಲರು ಎಂಬ ಪ್ರಚಲಿತ ಭಾವನೆಯನ್ನು ಇದು ವಿರೋಧಿಸುತ್ತದೆ. ಅವರು ಜನರನ್ನು "ನನ್ನ ಜನರು" ಎಂದು ಹೇಳುವುದನ್ನು ಕೊನೆಗಾಣಿಸಿ "ನಾನು ಸೇವೆ ಮಾಡುವ ದೇವಜನರು" ಎನ್ನುವಂತೆ ಮಾಡುತ್ತದೆ.

ದೇವರ ವಾಕ್ಯದಲ್ಲಿ ಸ್ಪಷ್ಟಪಡಿಸಿರುವ ಇಂತಹ ಸಂಗತಿಗಳು ಸಾಮಾನ್ಯವಾಗಿ ಅರ್ಥವಾಗದೆ, ಜಾರಿಯಾಗದೆ ಇರುವುದು ಯಾಕೆ? ಯಾಕೆಂದರೆ, ಮಾನವ ಸ್ವಭಾವವು ಗೌರವವನ್ನು ಮತ್ತು ತಮ್ಮ ಇಷ್ಟಾನುಸಾರವಾಗಿರುವುದನ್ನು ಆಶಿಸುತ್ತದೆ. ಬಲು ಬೇಗನೇ ಇವುಗಳಿಗೆ ಅನುಕೂಲಕರವಾದ ತಪ್ಪು ಪರಿಸ್ಥಿತಿಗೆ ಒಳಗಾಗಿ ಬಿಡುತ್ತದೆ. ಯಾಕೆಂದರೆ ಇವುಗಳು ಹದಿನೇಳು ಶತಮಾನಗಳಲ್ಲಿ ಜನಪ್ರಿಯವಾಗಿದ್ದರಿಂದ ಅನೇಕರು ಇಂಥಹ ಪರಿಸ್ಥಿತಿಗೆ ಸಿಲುಕಿಕೊಂಡಿದ್ದರು ಮತ್ತು ಇವರನ್ನು ಕ್ರಿಸ್ತನು ಕೊಡುವ ವಿಮೋಚನೆಗೆ ಆಯ್ದುಕೊಂಡಿದ್ದರು. ಆದರೂ ಸಹಾ ಅನೇಕರು ಬಾಬೇಲಿನ ಸಂಪ್ರದಾಯವು ಸರಿಯಾಗಿದ್ದಿರಬೇಕೆಂಬ ಭರವಸೆಯುಳ್ಳವರಾಗಿದ್ದು ಈ ಬಗ್ಗೆ ಇರುವ ದೇವರ ವಾಕ್ಯಗಳನ್ನು ಧ್ಯಾನಿಸಲೇ ಇಲ್ಲ.

## ಹಿರಿತನದ ಕಾಲಾವಧಿ

### The Period of Eldership

ಹಿರಿಯರನ್ನು ಯಾವ ಕಾಲಾವಧಿಗೆ ಆಯ್ಕೆ ಮಾಡಬೇಕೆಂಬುದಾಗಿ ದೈವ ಪ್ರೇರಣೆಯಿಂದ ಏನೂ ಹೇಳಿಲ್ಲ. ಆದುದರಿಂದ ನಾವು ನಮ್ಮ ವಿವೇಚನೆ ಮತ್ತು ನಿರ್ಣಯಗಳನ್ನು ಈ ವಿಷಯದಲ್ಲಿ ಕಾರ್ಯಗತಗೊಳಿಸಲು ಮುಕ್ತರಾಗಿದ್ದೇವೆ. ಹಲವು ಸದಭಿಪ್ರಾಯವುಳ್ಳ ಶ್ರೇಷ್ಠ ಹಿರಿಯರು ಅಥವಾ ಪಕ್ವಗೊಂಡ ಸಹೋದರರು ಸಭೆಯಲ್ಲಿ ಇರಬಹುದು. ಅವರು

ಉಪಯುಕ್ತರೂ, ಹೆಚ್ಚು ಮೆಚ್ಚುಗೆಯುಳ್ಳವರೂ ಆಗಿರಬಹುದು. ಆದರೆ ಇವರುಗಳು ಸಭೆಯಿಂದ ಆಯ್ಕೆಗೊಂಡ ಪ್ರತಿನಿಧಿಗಳು– ಸುವಾರ್ತಿಕರು, ಬೋಧಕರು, ಸಭಾಪಾಲಕರುಗಳು ಆಗದೇ ಇರಬಹುದು. 'ಹಿರಿಯ ಮಹಿಳೆಯರು'* (ಸಭೆಯಲ್ಲಿ ಸ್ತ್ರೀಯರ ಸ್ಥಾನ–5ನೇ ಅಧ್ಯಾಯ ನೋಡಿರಿ) ಎಂಬ ಪದವನ್ನು ಹಲವಾರು ಸಾರಿ ಗೌರವಪೂರ್ವಕವಾಗಿ ಅಪೋಸ್ತಲರು ಉಪಯೋಗಿಸಿದ್ದಾರೆ. ಆದರೆ ಇವರುಗಳಲ್ಲಿ ಯಾರಾದರೂ ಸಭೆಯ ಪ್ರತಿನಿಧಿಗಳಾಗಿ ಅಥವಾ ಬೋಧಕರುಗಳಾಗಿ ಆಯ್ಕೆಗೊಂಡ ಸೂಚನೆ ಯಿರುವುದಿಲ್ಲ. ಸಭಾಸೇವೆಗೆ ಆಯ್ಕೆಗೊಂಡ ಕೆಲವರು ಗೊತ್ತುಪಡಿಸಿದ ಅರ್ಹತೆಯ ಕೊರತೆಯುಳ್ಳವರಾಗಿದ್ದಿರಬಹುದು ಅಥವಾ ಮತ್ತೆ ಕೆಲವರು ದೇವರ ಒದಗಿಸುವಿಕೆ ಯಿಂದ ಸಭಾ ಸೇವೆಗೆ ಇನ್ನೂ ಹೆಚ್ಚಿನ ಸಾಮರ್ಥ್ಯವುಳ್ಳವರಾಗಿದ್ದಿರಬಹುದು. ಒಂದು ವರ್ಷ ಅಥವಾ ಅದರ ಭಾಗವಾದ ಅರ್ಧ ಅಥವಾ ಕಾಲು ವರ್ಷ ಇಂತಹ ಸೇವೆಗೆ ಸೂಕ್ತವಾದ ಕಾಲಾವಧಿ. ಅಂತಹವರು ಕಡಿಮೆ ಪ್ರಯತ್ನಿಸಿದರೆ ಮೊದಲನೆಯವರು ಉತ್ತಮವಾಗಿ ಪ್ರಯತ್ನಿಸಿ ಅನುಕೂಲಕರವಾಗಿ ಕಂಡುಬಂದಲ್ಲಿ, ಅವರನ್ನು ಸೇವೆಯಲ್ಲಿ ಮುಂದುವರೆಸಲಾಗುವುದು ಕಾನೂನುಗಳ ಅಥವಾ ಬುದ್ಧಿವಾದ ಅಥವಾ ಸಲಹೆಗಳ ಅನುಪಸ್ಥಿತಿಯಲ್ಲಿ ಪ್ರತಿಯೊಂದು ಸಭೆಯವರು ಪ್ರತಿ ಪ್ರಕರಣದಲ್ಲಿ ದೇವರ ಚಿತ್ತವನ್ನು ನೆರವೇರಿಸಲು ಉತ್ತಮವಾದುದೇನೆಂದು ತಾವೇ ನಿರ್ಣಯಿಸಬೇಕಾಗುತ್ತದೆ.

## ಹಿರಿಯರುಗಳ ಸಂಖ್ಯೆ
## The Number of Elders

ದೇವರ ವಾಕ್ಯದಲ್ಲಿ ಹಿರಿಯರುಗಳ ಸಂಖ್ಯೆಗೆ ಯಾವ ಮಿತಿಯೂ ಇರುವುದಿಲ್ಲ. ಆದರೆ ಸಭೆಯ ಗಾತ್ರದ ಮೇಲೆ ಮತ್ತು ಯೋಗ್ಯರುಗಳ ಲಭ್ಯತೆಯ ಮೇಲೆ ಹೆಚ್ಚಾಗಿ ಇದು ಆತುಕೊಂಡಿದೆ. (ಯಾರೂ ಸಹಾ ತಾವು ವಿಶ್ವಾಸಿಗಳು, ಸಂಪೂರ್ಣವಾಗಿ ಅಭಿಷೇಕ ಹೊಂದಿದವರು ಎಂದು ಭಾವಿಸಬಾರದು; ತಮ್ಮ ಮಾತು ಮತ್ತು ಕ್ರಿಯೆಯ ಮೂಲಕ ತಮ್ಮ ವಿಶ್ವಾಸ ಮತ್ತು ಪ್ರತಿಷ್ಠೆಯ ಬಗ್ಗೆ ಹಿರಿಯನಾಗಿ ಅಯ್ಕೆಗೊಳ್ಳುವ ಬಹಳಷ್ಟು ಮುಂಚೆಯೇ ತಪ್ಪಿಲ್ಲದ ನಿದರ್ಶನವನ್ನು ನೀಡಬೇಕಾಗುತ್ತದೆ.) ಸಾಧ್ಯವಾದಷ್ಟು ಜನರು ಅರ್ಹತೆಯ ಮುಖ್ಯ ಲಕ್ಷಣವನ್ನು ಹೊಂದಿರಬೇಕೆಂಬುದನ್ನು ಮತ್ತು ಸೇವೆಯನ್ನು ತಮ್ಮೊಳಗೆ ಹಂಚಿಕೊಳ್ಳುವುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಸರಿಯಾದ ಉತ್ಸಾಹವು ಅವರನ್ನು ಪ್ರೇರಿಸುವುದಾದಲ್ಲಿ ಯಾವುದಾದರೂ ರೀತಿಯ ಮಿಷನರಿ ಅಥವಾ ಸುವಾರ್ತಿಕ ಸೇವೆಯು ಅವರಲ್ಲಿ ಕೆಲವರನ್ನು ಅಥವಾ ಹೆಚ್ಚಿನವರ ಸಮಯದ ಕೆಲವು ಭಾಗವನ್ನು ಪಡಕೊಳ್ಳುತ್ತದೆ. ಪ್ರತಿಯೊಂದು ಸಭೆಯು ಒಂದು ರೀತಿಯಲ್ಲಿ ದೈವಜ್ಞಾನ ವಿದ್ಯಾಲಯದಂತಾಗಿ ಅಲ್ಲಿಂದ ಸಮರ್ಥರಾದ ಬೋಧಕರುಗಳು ವಿಶಾಲವಾದ ಸೇವಾ ಕ್ಷೇತ್ರಕ್ಕೆ ಹೊರಬೀಳುತ್ತಾರೆ. ಇತರರ ಬಗ್ಗೆ ಅಸೂಯೆಯನ್ನು ಪ್ರಕಟಿಸುವ ಮತ್ತು ಸೇವೆಮಾಡಲು ಅವರನ್ನು ಅಡ್ಡಿಪಡಿಸುವ ಮನಸ್ಸುಳ್ಳ ಹಿರಿಯರನ್ನು ಆ ಸ್ಥಾನದಲ್ಲಿ ಮುಂದುವರೆಯಲು ಅಯೋಗ್ಯರೆಂದು ಪರಿಗಣಿಸಬೇಕು. ಆದಾಗ್ಯೂ, ಅಸಮರ್ಥರಾದವರನ್ನಾಗಲೀ, ಅನುಭವ ಇಲ್ಲದವರನ್ನಾಗಲೀ ಅವರ ಒಣಹೆಮ್ಮೆಯನ್ನು ತೃಪ್ತಿಗೊಳಿಸುವ ಸಲುವಾಗಿ ಆಯ್ಕೆ ಮಾಡಲಾಗದು. ಕ್ರಿಸ್ತನ ದೇಹದ ಅಂಗವಾಗಿರುವ ಸಭೆಯವರು ತಮ್ಮ ಶಿರಸ್ಸಾದಾತನು ತಾವು ಮತದಾನ ಮಾಡುವಂತೆ ಬಯಸುತ್ತಾನೆಂದು ತಿಳಿದು ಮತದಾನ ಮಾಡಬೇಕು.

ಅಪೋಸ್ತಲರು ಹಾಕಿದ ಅರ್ಹತೆಯಂತೆ ಆ ಸೇವೆಗೆ ಯೋಗ್ಯರಾದವರು ಸಿಗದೆ ಇರುವ ಸಂದರ್ಭದಲ್ಲಿ ಹಿರಿಯರನ್ನು ಆಯ್ಕೆ ಮಾಡುವ ಬಗ್ಗೆ ಎಚ್ಚರಿಕೆ ವಹಿಸಬೇಕು. ಅಸಮರ್ಥ ಹಿರಿಯರುಗಳಿಗಿಂತ ಹಿರಿಯರೇ ಇಲ್ಲದಿರುವುದು ಒಳಿತು. ನಡುಗಾಲದಲ್ಲಿ, ಅಂದರೆ ಸಹೋದರನೊಬ್ಬ ಸಮರ್ಥ ನಾಗುವವರೆಗೆ ನಡೆಯುವ ಕೂಟಗಳು ವಿದ್ಯುಕ್ತ ವಲ್ಲವಾದುದಾಗಿರಲಿ. ಸತ್ಯವೇದವು ಮೂಲ ಪಠ್ಯಗ್ರಂಥವಾಗಿದ್ದು, ಸಹೋದರ ರಸ್ಸೆಲ್ ಸತ್ಯವೇದಾಧ್ಯಯನದ ಬೋಧಕ ನಾಗಿರುವಾಗ ನೀವು ಇಷ್ಟಪಟ್ಟಲ್ಲಿ ಆತನೇ ನಿಮ್ಮ ಆಯ್ಕೆಯ ನಾಯಕನಾಗುತ್ತಾನೆ. (ಯಾವುದಾದರೂ ನಿಮ್ಮ ಏಳಿಗೆಯ ವಿಚಾರಕ್ಕೆ ಸಂಬಂದಿಸಿದಂತೆ ಪ್ರಶ್ನೆಯು ಉದ್ಭವಿಸಿದಲ್ಲಿ ಮತ್ತು ಅದಕ್ಕೆ ದೈವೋಕ್ತಿಗಳ ಆಧಾರದ ಮೇಲೆ ಉತ್ತರವು ಬೇಕಾಗುವುದಾದರೆ ನೀವು ಆತನನ್ನು ಅಂಚೆ ಮೂಲಕ ಸಂಪರ್ಕಿಸಬಹುದು.)

## ಹಿರಿಯರನ್ನು ಯಾರು ಮತ್ತು ಹೇಗೆ ಆಯ್ಕೆಮಾಡಬಹುದು?
## Who May Elect Elders and How?

ನೂತನ ಸೃಷ್ಟಿಗಳಾದ ಸ್ತ್ರೀ ಮತ್ತು ಪುರುಷರನ್ನೊಳಗೊಂಡ ದೇಹವಾದ ಸಭೆಯು ಮಾತ್ರವೇ ಮತದಾರರು. ಸಾಮಾನ್ಯರಾದ "ನಂಬಿಗಸ್ತ ಮನೆವಾರ್ತೆ"ಯವರಿಗೆ ಪ್ರತಿಷ್ಠೆಪಡಿಸಿಕೊಳ್ಳದ ಅಂಥಹ ವಿಶ್ವಾಸಿಗಳ ಆಯ್ಕೆಯಲ್ಲಿ ಮಾಡುವುದೇನೂ ಇಲ್ಲ. ಯಾಕೆಂದರೆ, ಇದು ದೇವರ ಆಯ್ಕೆ, ಆತನು ತನ್ನ ದೇಹದ ಮೂಲಕವಾಗಿ ಆತ್ಮವನ್ನು ಹೊಂದಿದವರನ್ನು ಮಾತ್ರವೇ ಬಯಸುತ್ತಾನೆ. ಪ್ರತಿಷ್ಠೆ ಹೊಂದಿದವರೆಲ್ಲರೂ ಮತದಾನ ಮಾಡಲೇ ಬೇಕು. ಈ ಉದ್ದೇಶಕ್ಕಾಗಿ ಕರೆದ ಸಾಧಾರಣ ಕೂಟದಲ್ಲಿ ಅವರಲ್ಲಿ ಯಾರಾದರೂ ನಾಮಕರಣ ಮಾಡಬಹುದು ಪರಿಗಣನೆಗೆ ಸಾಕಷ್ಟು ಸಮಯ ನೀಡುವಂತೆ ಮತದಾನದ ಒಂದು ವಾರದ ಮೊದಲೇ ಮಾಡಬಹುದು.

ಎಲ್ಲರೂ ಮುಕ್ತವಾಗಿ ತಮ್ಮ ಆಯ್ಕೆಗಳನ್ನು ಮಾಡಬಹುದೆಂಬ ಕಾರಣಕ್ಕಾಗಿ ಕೆಲವರು ಮತದಾನವು ಮತಪತ್ರಗಳ ಮೂಲಕ ನಡೆಯಬೇಕೆಂದು ಒತ್ತಾಯಿಸುತ್ತಾರೆ. ಇದರಲ್ಲಿ ಎಷ್ಟು ಅನುಕೂಲಗಳಿವೆಯೋ ಅಪೋಸ್ತಲರ "ಕೈ ಎತ್ತುವ' ಪದ್ಧತಿಯಲ್ಲಿರುವ ಶಿಸ್ತು ಮತ್ತು ಗುಣನಡತೆ ಬೆಳವಣಿಗೆಯ ಅನುಪಸ್ಥಿತಿಯಲ್ಲಿ ಅಷ್ಟೇ ಅನಾನುಕೂಲತೆಗಳು ಸಹಾ ಇವೆ ಎಂದು ನಾವು ಇದಕ್ಕೆ ಉತ್ತರಿಸುತ್ತೇವೆ. ಪ್ರತಿಯೊಬ್ಬರೂ ನಿಷ್ಕಪಟರೂ, ಮುಚ್ಚುಮರೆ ಇಲ್ಲದವರಾಗಲು ಕಲಿತುಕೊಳ್ಳಬೇಕು. ಅದೇ ಸಮಯದಲ್ಲಿ ಪ್ರೀತಿಸುವವರೂ, ಮೃದು ಹೃದಯಿಗಳೂ ಆಗಿರತಕ್ಕದ್ದು. ಆಯ್ಕೆ ದೇವರದೆಂದು ನೆನಪಿನಲ್ಲಿಟ್ಟುಕೊಳ್ಳಬೇಕು. ಇದನ್ನು ಆತನ ದೇಹವಾದ ಸಭೆಯವರ ಮೂಲಕ ಅವರ ಯೋಗ್ಯತಾನುಸಾರವಾಗಿ ವ್ಯಕ್ತಪಡಿಸಲಾಗಿದೆ ಎಂದು ಗ್ರಹಿಸಿಕೊಳ್ಳ ಬೇಕು. ಒಬ್ಬನು ದೇವರ ಮನಸ್ಸನ್ನು ಹೊಂದಿ ವ್ಯಕ್ತಪಡಿಸುತ್ತಿದ್ದಾನೆ ಎಂಬದಾಗಿ

ನಂಬಿರುವುದರ ಹೊರತಾಗಿ ತನ್ನ ಕರ್ತವ್ಯ ಸ್ವಾತಂತ್ರ್ಯವನ್ನು ನಿರ್ಲಕ್ಷಿಸಿ ಒಬ್ಬರ ಪರವಾಗಿಯಾಗಲೀ ಅಥವಾ ವಿರುದ್ಧವಾಗಿಯಾಗಲೀ ವರ್ತಿಸಬಾರದು.

## ಬಹುಮತಸಂಖ್ಯೆ ಸಾಲದು
## Majorities Not Sufficient

ಪ್ರಾಪಂಚಿಕ ಸಂಗತಿಗಳಲ್ಲಿ ಕೇವಲ ಬಹುಸಂಖ್ಯಾತರ ಮಾತುಗಳು ನಿರ್ಧಾರವನ್ನು ತೆಗೆದುಕೊಳ್ಳುತ್ತವೆ. ಆದರೆ ಸ್ಪಷ್ಟವಾಗಿ ದೇವರ ದೇಹ ಅಥವಾ ಸಭೆಗಳಲ್ಲಿ ಹೀಗಾಗಬಾರದು. ಬದಲಾಗಿ, ಪ್ರಾಯೋಗಿಕವಾಗಿ ಸಾಧ್ಯವಾದ ಮಟ್ಟಿಗೆ ಪಂಚಾಯಿತರ ಕ್ರಮ ಜಾರಿಯಲ್ಲಿರಬೇಕು ಮತ್ತು ಸರ್ವಾನುಮತದ ತೀರ್ಪು ಅಥವಾ ನಿರ್ಣಯವನ್ನು ಬಯಸಬೇಕು. ಕೇವಲ ಬಹುಸಂಖ್ಯೆ ಮತ ಪಡೆಯುವ ಸಹೋದರನಿಗೆ ಅದನ್ನು ಸಭೆಯವರಿಗಿಂತ ಹೆಚ್ಚಾಗಿ "ದೇವರ ಆಯ್ಕೆ" ಎಂದು ಒಪ್ಪಿಕೊಳ್ಳಲು ಅಪರೂಪವಾಗಿ ಹಿತವೆನಿಸುತ್ತದೆ. ಹೆಚ್ಚು ಕಡಿಮೆ ಎಲ್ಲಾ ಜನರ ಬೆಂಬಲವನ್ನೂ ಸೆಳೆಯುವ ಸಾಮರ್ಥ್ಯವುಳ್ಳ ಮತ್ತೊಬ್ಬ ಅಭ್ಯರ್ಥಿಯನ್ನು ವಾರದ ನಂತರ ವಾರಗಳಲ್ಲಿ ಮತದ ನಂತರ ಮತ ಪಡೆದು ಪ್ರಕರಣವನ್ನು ಕಂಡುಕೊಳ್ಳುವವರೆಗೆ ಅಥವಾ ತೊರೆಯುವವರೆಗೆ ಬಯಸಬೇಕಾಗುತ್ತದೆ. ಅಥವಾ ಎಲ್ಲರೂ ಎರಡು ಅಥವಾ ಮೂರು ಅಥವಾ ಇನ್ನೂ ಹೆಚ್ಚು ಮಂದಿ ಸರದಿಯಂತೆ ಸೇವೆ ಮಾಡಿ ಎಲ್ಲರ ಭಾವನೆಗಳನ್ನೂ ಪಾಲಿಸಬೇಕು. ಆದರೆ ಕರ್ತನ ಮತ್ತು ಸತ್ಯದ ಬಗ್ಗೆ ಉದ್ಯುಕ್ತವಾದ ಪ್ರೀತಿ ಇರುವುದಾದಲ್ಲಿ, ಮಾರ್ಗದರ್ಶನಕ್ಕಾಗಿ ಪ್ರಾರ್ಥಿಸುತ್ತಾ, ಸಮವಾದ ಮೇಧಾಶಕ್ತಿ ಇರುವುದಾದಲ್ಲಿ ಒಬ್ಬರು ಮತ್ತೊಬ್ಬರನ್ನು ಗೌರವಪೂರ್ವಕವಾಗಿ ಆಯ್ದುಕೊಳ್ಳುವ ಪ್ರವೃತ್ತಿಯುಳ್ಳವರಾದಲ್ಲಿ ಸಾಮಾನ್ಯವಾಗಿ ದೇವರ ಚಿತ್ತದ ಬಗ್ಗೆ ಒಮ್ಮತದ ನಿರ್ಣಯ ತೆಗೆದುಕೊಳ್ಳಲು ಸುಲಭವಾಗುತ್ತದೆ. "ಪಕ್ಷಪಾತದಿಂದಾಗಲೀ, ಒಣಹೆಮ್ಮೆಯಿಂದಾಗಲೀ ಯಾವುದನ್ನೂ ಮಾಡದೆ ಪ್ರತಿಯೊಬ್ಬನೂ ದೀನಭಾವದಿಂದ ಮತ್ತೊಬ್ಬರನ್ನು ತನಗಿಂತ ಶ್ರೇಷ್ಠರೆಂದು ಎಣಿಸಲಿ" (ಫಿಲಿಪ್ಪಿ 2:3) "ಸಮಾಧಾನವೆಂಬ ಬಂಧನದಿಂದ ಕಟ್ಟಲ್ಪಟ್ಟವರಾಗಿದ್ದು ಪವಿತ್ರಾತ್ಮನಿಂದ ಉಂಟಾಗುವ ಐಕ್ಯವನ್ನು ಕಾಪಾಡಿಕೊಳ್ಳುವುದಕ್ಕೆ ಆಸಕ್ತರಾಗಿರಿ" (ಎಫೆಸ4:3).

ಸಹಾಯಕರು ಎಂದು ಕರೆಯಲ್ಪಡುವ ಡೀಕನ್‌ಗಳನ್ನಾಗಲೀ, ಮಹಿಳಾ ಡೀಕನ್‌ಗಳನ್ನಾಗಲೀ ಆಯ್ಕೆ ಮಾಡುವಾಗ ಇದೇ ಕ್ರಮವನ್ನು ಅನುಸರಿಸಬೇಕು ಅವರ ಒಳ್ಳೆಯ ವರದಿಯನ್ನು ಅರ್ಹತೆಯನ್ನಾಗಿ ಪರಿಗಣಿಸಬೇಕು (1ತಿಮೋಥೆ.3:8–13) ಇವರುಗಳು ಅಗತ್ಯವಾದ ಯಾವ ಸೇವೆಯನ್ನಾದರೂ ಮಾಡಬೇಕು. ಇವರಲ್ಲಿ ಬೋಧಿಸುವ ಸಾಮರ್ಥ್ಯ ಮತ್ತು ಪವಿತ್ರಾತ್ಮನ ಕೃಪೆ ಇವುಗಳನ್ನು ಒಳಗೊಂಡಂತೆ ಹಿರಿಯರಿಗಿರಬೇಕಾದ ಎಷ್ಟು ಸಾಧ್ಯವೋ ಅಷ್ಟರ ಮಟ್ಟಿನ ಅರ್ಹತೆಗಳು ಇರಬೇಕು.

## ವಿಧವಿಧವಾದ ಸೇವಾ ಕಾರ್ಯಗಳು
## Variety of Ministries

ನಾವು ಈಗಾಗಲೇ ನೋಡಿರುವಂತೆ ಹಿರಿಯರುಗಳಲ್ಲಿ ಕೆಲವರು ಬೋಧಿಸುವುದರಲ್ಲಿ, ಮತ್ತೆ ಕೆಲವರು ಶಿಕ್ಷಣ ನೀಡುವುದರಲ್ಲಿ, ಕೆಲವರು ಸೌವಾರ್ತಿಕರಾಗಿ, ಅವಿಶ್ವಾಸಿಗಳಲ್ಲಿ ಕುತೂಹಲವನ್ನು ಹುಟ್ಟಿಸುವವರಾಗಿ, ಮತ್ತು ಹಿಂಡಿನ ಸ್ಥಳೀಯ ಮತ್ತು ಸಾಮಾನ್ಯವಾದ ವಿವಿಧ ಆಸಕ್ತಿಗಳ ಮೇಲ್ವಿಚಾರಣೆ ಮಾಡುವ ಸಭಾಪಾಲಕರುಗಳಾಗಿ ಒಂದಲ್ಲಾ ಒಂದು ವಿಶೇಷ ಅರ್ಹತೆಯನ್ನು ಹೊಂದಿದವರಾಗಿರುತ್ತಾರೆ. ಅಪೊಸ್ತಲನಾದ ಪೌಲನು ಎಫೆಸದಲ್ಲಿನ ಕ್ರೈಸ್ತ ಸಭೆಯ ಹಿರಿಯರನ್ನು ಕರೇಕಳುಹಿಸಿ ಅವರಿಗೆ ಪ್ರತಿಯೊಬ್ಬರೂ ತಮ್ಮ ಮೇಧಾಶಕ್ತಿಯನ್ನು ಸಭೆಯ ಒಬ್ಬ ಮನೆವಾರ್ತೆಯವನಾಗಿ ಯಾವ ರೀತಿಯಲ್ಲಿ ಅಳವಡಿಸಿಕೊಳ್ಳಬೇಕೆಂಬುದರ ಬಗ್ಗೆ ಹೇಳುತ್ತಾನೆ. ಆತನ ಮಾತುಗಳು ಕಾರ್ಯದ ಯಾವ ಕ್ಷೇತ್ರದಲ್ಲಿಯಾದರೂ ತಮ್ಮ ಹಿರಿತನವನ್ನು ಅಂಗೀಕರಿಸಿಕೊಳ್ಳುವವರೆಲ್ಲರೂ ಪ್ರಾರ್ಥನಾಪೂರ್ವಕವಾಗಿ ಪರಿಗಣಿಸಲು ಯೋಗ್ಯವಾಗಿವೆ. ಆ ಮಾತುಗಳೇನೆಂದರೆ "ದೇವರು ಸ್ವರಕ್ತದಿಂದ ಸಂಪಾದಿಸಿಕೊಂಡ ಸಭೆಯನ್ನು ಪರಿಪಾಲಿಸುವುದಕ್ಕಾಗಿ ಪವಿತ್ರಾತ್ಮನು ನಿಮ್ಮನ್ನೇ ಆ ಹಿಂಡಿನಲ್ಲಿ ಮೇಲ್ವಿಚಾರಕರಾಗಿ (ಕೆಲವೆಡೆ ಬಿಷೊಪರೆಂದು ತಪ್ಪಾಗಿಕೊಡಲಾಗಿದೆ) ಇಟ್ಟಿರುವುದರಿಂದ ನಿಮ್ಮ ವಿಷಯದಲ್ಲಿಯೂ ಎಲ್ಲಾ ಹಿಂಡಿನ ವಿಷಯದಲ್ಲಿಯೂ ಎಚ್ಚರಿಕೆಯಾಗಿರಿ" (ಅಪೊಸ್ತಲರಕೃತ್ಯಗಳು 20:28). ಹಾ, ಹೌದು! ಹಿರಿಯರುಗಳು ಎಲ್ಲಾದಕ್ಕಿಂತ ಮೊದಲು ತನ್ನ ಸ್ಥಾನದ ಸ್ವಲ್ಪ ಗೌರವದಿಂದ ಅವರು ಹೆಮ್ಮೆಪಡುವಂತೆ. ಒಡೆಯರೆಂದು ಭಾವಿಸಿಕೊಳ್ಳದಂತಾಗಲಿ. ಅವರು ಹಿರೀ ಕುರುಬನಿಗೆ ಸಲ್ಲಬೇಕಾದ ಅಧಿಕಾರ ಮತ್ತು ಗೌರವಗಳನ್ನು ತಮ್ಮದಾಗಿಸಿಕೊಳ್ಳುವಂತೆ ಊಹಿಸಿಕೊಳ್ಳುವ ವಿಷಯದಲ್ಲೂ ಎಚ್ಚರಿಕೆಯಿಂದಿರಬೇಕು. ಹಿಂಡಿಗೆ ಉಣಿಸುವುದು ದೇವರ ಕಾರ್ಯಕ್ಷೇತ್ರ "ಆತನು ಕುರುಬನಂತೆ ತನ್ನ ಮಂದೆಯನ್ನು ಮೇಯಿಸುವನು" (ಯೆಶಾಯ 40:11) ಎಂದು ಬರೆದದೆ. ಆದುದರಿಂದ ಒಬ್ಬನು ಹಿರಿಯನಾಗಿ ಆಯ್ಕೆಗೊಂಡಾಗ ಆತನು ಹಿರಿ ಕುರುಬನ ಪ್ರತಿನಿಧಿಯಾಗಿರಬಹುದು – ಆತನು ಒಬ್ಬ ಸಾಧನ ಅಥವಾ ಮಾರ್ಗದರ್ಶಕನಂತಿದ್ದು ಆತನ ಮೂಲಕವಾಗಿ ಹಿರಿ ಕುರುಬನು "ಹೊತ್ತುಹೊತ್ತಿಗೆ ಆಹಾರವನ್ನು" ಸೂಕ್ತ ಸಮಯದಲ್ಲಿ ಒದಗಿಸಿಕೊಡುವನು – "ಹಳೆಯ ಮತ್ತು ನೂತನ ಸಂಗತಿಗಳನ್ನು"

"ನನ್ನ ಕಾವಲಿನ ಕುರಿಗಳನ್ನು ಚದುರಿಸಿ ಹಾಳುಮಾಡುವ ಕುರುಬರ ಗತಿಯನ್ನು ಏನೆಂದು ಹೇಳಲಿ ಎಂಬುದು ಯೆಹೋವನ ನುಡಿ. ಇಸ್ರಾಯೇಲ್ಯರ ದೇವರಾದ ಯೆಹೋವನು ತನ್ನ ಜನರೆಂಬ ಕುರಿಗಳನ್ನು ಮೇಯಿಸುವ ಕುರುಬರ ದ್ರೋಹವನ್ನು ಕಂಡು ಇಂತೆನ್ನುತ್ತಾನೆ– ನೀವು ನನ್ನ ಮಂದೆಯನ್ನು ಚದುರಿಸಿ ಅಟ್ಟಿಬಿಟ್ಟಿದ್ದೀರಿ ವಿಚಾರಿಸಲೇ ಇಲ್ಲ; ಅಹಾ, ನಿಮ್ಮ ದುಷ್ಕೃತ್ಯಗಳ ನಿಮಿತ್ತ ನಾನು ನಿಮ್ಮನ್ನು ವಿಚಾರಿಸುವೆನು ನಾನು ನನ್ನ ಮಂದೆಯನ್ನು ಯಾವ ದೇಶಗಳಿಗೆ ಅಟ್ಟಿಬಿಟ್ಟೆನೋ ಆ ಸಕಲ ದೇಶಗಳಿಂದ ಉಳಿದ ಕುರಿಗಳನ್ನು ಕೂಡಿಸಿ ತಮ್ಮ ತಮ್ಮ ಹಟ್ಟಿಗಳಿಗೆ ತಿರುಗಿ ಬರಮಾಡುವೆನು. ನಾನು ಅವುಗಳ ಮೇಲೆ ಕುರುಬರನ್ನು ನೇಮಿಸುವೆನು, ಅವರು ಅವುಗಳನ್ನು ಮೇಯಿಸುವರು; ಅವು ಇನ್ನು ಭಯಪಡವು, ಬೆದರವು, ಅವುಗಳಲ್ಲಿ ಒಂದೂ ಕಡಿಮೆಯಾಗದು; ಇದು ಯೆಹೋವನ ನುಡಿ" (ಯೆರೆಮೀಯ 23:1,2,4)

## ಸಭಾಪಾಲಕರುಗಳ ಹಸ್ತಾರ್ಪಣೆ.

## Laying On of Hands of the Presbytery

(1) "ನಿನ್ನಲ್ಲಿರುವ ವರವನ್ನು ಅಲಕ್ಷ್ಯಮಾಡಬೇಡ; ಸಭೆಯ ಹಿರಿಯರು ಪ್ರವಾದನೆ ಸಹಿತವಾಗಿ ನಿನ್ನ ಮೇಲೆ ಹಸ್ತಗಳನ್ನಿಟ್ಟಾಗ ಅದು ನಿನಗೆ ಕೊಡಲ್ಪಟ್ಟಿತಲ್ಲಾ" (1 ತಿಮೋಥೆ 4:14)

(2) "ಅವರು ಆರಿಸಿಕೊಂಡವರನ್ನು ಅಪೋಸ್ತಲರ ಮುಂದೆ ನಿಲ್ಲಿಸಿದರು. ಅಪೋಸ್ತಲರು ಪ್ರಾರ್ಥನೆ ಮಾಡಿ ಅವರ ಮೇಲೆ ಕೈಗಳನ್ನಿಟ್ಟು ನೇಮಿಸಿದರು" (ಅಪೋಸ್ತಲರ ಕೃತ್ಯಗಳು 6:6 ನೋಡಿರಿ)

(3) "ಅಂತಿಯೋಕ್ಯದಲ್ಲಿದ್ದ ಸಭೆಯೊಳಗೆ ಪ್ರವಾದಿಗಳೂ, ಬೋಧಕರುಗಳೂ ಇದ್ದರು... ಇವರು ಕರ್ತನನ್ನು ಸೇವಿಸುತ್ತಾ ಉಪವಾಸ ಮಾಡುತ್ತಾ ಇದ್ದಾಗ ಪವಿತ್ರಾತ್ಮನು – ನಾನು ಬಾರ್ನಬ ಸೌಲರನ್ನು ಕರೆದ ಕೆಲಸಕ್ಕಾಗಿ ಅವರನ್ನು ಪ್ರತ್ಯೇಕಿಸಿರಿ ಎಂದು ಹೇಳಿದನು. ಆಗ ಅವರು ಉಪವಾಸವಿದ್ದು ಪ್ರಾರ್ಥನೆ ಮಾಡಿ ಆ ಇಬ್ಬರ ಮೇಲೆ ಹಸ್ತಾರ್ಪಣೆ ಮಾಡಿ ಕಳುಹಿಸಿಕೊಟ್ಟರು" (ಅಪೋಸ್ತಲರ ಕೃತ್ಯಗಳು 13:1–3)

(4) "ಅವಸರದಿಂದ ಯಾರ ತಲೆಯ ಮೇಲೆಯಾದರೂ ಹಸ್ತವನ್ನಿಟ್ಟು ಸಭೆಯ ಉದ್ಯೋಗಕ್ಕೆ ನೇಮಿಸ ಬೇಡ. ಹಾಗೆ ನೇಮಿಸಿದರೆ ಮತ್ತೊಬ್ಬರು ಮಾಡಿದ ಪಾಪದಲ್ಲಿ ನೀನು ಪಾಲುಗಾರನೆಂದು ತೋರಿ ಬಂದೀತು" (1 ತಿಮೋಥೆ 5:22)

(5) "ಪೌಲನು ಅವರ ಮೇಲೆ ಕೈಗಳನ್ನಿಡಲು ಪವಿತ್ರಾತ್ಮವರವು ಅವರ ಮೇಲೆ ಬಂತು: ಅವರು ನಾನಾ ಭಾಷೆಗಳನ್ನಾಡಿದರು, ಪ್ರವಾದಿಸಿದರು" (ಅಪೋಸ್ತಲರ ಕೃತ್ಯಗಳು 19:6)

(6) "ಅಪೋಸ್ತಲರು ಅವರ ಮೇಲೆ ಕೈಗಳನ್ನಿಡಲು ಅವರು ಪವಿತ್ರಾತ್ಮ ವರವನ್ನು ಹೊಂದಿದರು"(ಅಪೋಸ್ತಲರ ಕೃತ್ಯಗಳು 8:17–19)

(7) "ಆದಕಾರಣ ನಾನು ನಿನ್ನ ತಲೆಯ ಮೇಲೆ ಹಸ್ತವನ್ನಿಟ್ಟಿದರ ಮೂಲಕ ನಿನಗೆ ದೊರಕಿದ ದೇವರ ಕೃಪಾವರವು ಪ್ರಜ್ವಲಿಸುವಂತೆ ಮಾಡಬೇಕೆಂದು ನಿನಗೆ ಜ್ಞಾಪಕಕೊಡುತ್ತೇನೆ" (2 ತಿಮೋಥೆ 1:6)

ಈ ರೀತಿಯಾಗಿ ನಾವು ನೂತನ ಸೃಷ್ಟಿಯ ಸಭೆಯಲ್ಲಿ ಹಸ್ತಾರ್ಪಣೆ ಬಗ್ಗೆ ಇರುವ ಎಲ್ಲಾ ಹೇಳಿಕೆಗಳನ್ನು ಒಂದುಗೂಡಿಸುತ್ತೇವೆ. ಕಡೆಯ ಮೂರು ಹೇಳಿಕೆ (5,6 ಮತ್ತು 7)ಗಳಲ್ಲಿ ವರದಾನದ ಬಗ್ಗೆ ನೀಡಿರುವ ಉಲ್ಲೇಖಗಳು ಆದಿ ಸಭೆಯಲ್ಲಿ ಸಾಮಾನ್ಯವಾದುದೆಂಬುದು ಸ್ಪಷ್ಟವಾಗಿದೆ. ಅಪೊಸ್ತಲರ ಹಸ್ತಗಳು ಆ ರೀತಿಯಾಗಿ ಎಲ್ಲಾ ಪ್ರತಿಷ್ಠೆ ಹೊಂದಿದ ವಿಶ್ವಾಸಿಗಳ ಮೇಲೆ ಇಡಲಾಗುತ್ತಿತ್ತು ಮತ್ತು ವಾಣಿ ಗಳನ್ನಾಡುವುದು ಮುಂತಾದ ಒಂದು ಅಥವಾ ಹೆಚ್ಚು ವರಗಳು ಅವರಿಗೆ ಲಭಿಸುತ್ತಿದ್ದವು. "ಅದೇ ಪ್ರಕಾರದ ಲಾಭವಾಗುವಂತೆ ಒಂದು ಅಳತೆಯಲ್ಲಿ ಆತ್ಮನನ್ನು ಪ್ರತಿಯೊಬ್ಬರಿಗೂ ಹಂಚಲಾಗುತ್ತಿತ್ತು" (ಸಂಪುಟ V ಅಧ್ಯಾಯ viii ನೋಡಿರಿ). ಮೊದಲನೆಯ ನಾಲ್ಕು ವಚನಗಳನ್ನು (ಮೂಲ ವಾಕ್ಯಗಳು 1,2,3,4) ಒಂದು ಸಾಮಾನ್ಯ ಬೋಧನೆಯ ಗುಂಪನ್ನಾಗಿ ಮಾಡಬಹುದಾದರೂ ಅದು ಅನುಮತಿ ಅಥವಾ ಅಧಿಕಾರದಾಯಕ ಸೂಚಕವಾಗಿ ಅಲ್ಲ.

(1) ಪೌಲನ ಸೇವೆಯಲ್ಲಿ ದತ್ತು ಪುತ್ರನಾದ ತಿಮೋಥೆಗೆ ಈ ಮೊದಲೇ ಅಂದರೆ ಆತನು ಪೌಲನೊಂದಿಗೆ ಯೆರೂಸಲೇಮಿಗೆ ಹೋದಾಗ ಅಪೋಸ್ತಲನಾದ ಪೌಲನ ಕೈಯಿಂದ ದೀಕ್ಷಾಸ್ನಾನ ನೀಡಲಾಗಿತ್ತು ಮತ್ತು ಆತನು ಪವಿತ್ರಾತ್ಮ ವರವನ್ನು ಹೊಂದಿಕೊಂಡಿದ್ದನು (7ನೇ ವಾಕ್ಯ ಮತ್ತು ಅ.ಕೃ. 21:15–19 ನೋಡಿರಿ). ನಿಸ್ಸಂದೇಹವಾಗಿ ಯಾಕೋಬ ಮತ್ತು ಎಲ್ಲಾ ಅಪೋಸ್ತಲಿಕ ಹಿರಿಯರು ಅಲ್ಲಿಯೇ ತಿಮೋಥೆಯನ ಭಕ್ತಿ ಮತ್ತು ಪೌಲನ ದತ್ತು ಸ್ವೀಕಾರವನ್ನು ಒಪ್ಪಿಕೊಂಡು ಅದನ್ನು ದೃಢೀಕರಿಸುವಂತೆ ಒಟ್ಟಾಗಿ ಆತನ ತಲೆಯ ಮೇಲೆ ತಮ್ಮ ಕೈಗಳನ್ನಿರಿಸಿ ಆಶೀರ್ವದಿಸಿದರು. ಅವರು ಇದನ್ನು ಸಾಮಾನ್ಯ ವಾಡಿಕೆಯಂತೆ ಮಾಡದೆ ಅಥವಾ ಇತರ ಎಲ್ಲಾ ಪೌಲನ ಸಂಗಡಿಗರಿಗೂ ಮಾಡದೆ ಪ್ರವಾದನಾ ರೂಪದಲ್ಲಿ ದೇವರ ಸೂಚನೆಯ ಮೇರೆಗೆ ಮಾಡಿದರೆಂದು ಗ್ರಹಿಸಬಹುದು.

(2) ಈ ಡೀಕನರುಗಳಿಗೆ ಅಪೋಸ್ತಲರು ತಮ್ಮ ಕೈಗಳನ್ನಿಡುವುದರ ಮೂಲಕ ಬೋಧಿಸುವ ಅಧಿಕಾರ ನೀಡಲಿಲ್ಲ. ಯಾಕೆಂದರೆ ಅವರನ್ನು ಬೋಧಕರನ್ನಾಗಿ ಆಯ್ಕೆ ಮಾಡದೆ ಮೇಜಿನ ಸೇವೆಯನ್ನು ಮಾಡುವಂತೆ ಆರಿಸಿಕೊಳ್ಳಲಾಗಿತ್ತು. ಹೇಗೂ ಅವರು ಈಗಾಗಲೇ ಪರಿಶುದ್ಧಾತ್ಮನಿಂದ ಅಭಿಷೇಕ ಹೊಂದಿದ್ದರಿಂದ ಅವರಿಗೆ ತಮ್ಮ ಮೇಧಾಶಕ್ತಿಗನುಸಾರ ಮತ್ತು ಅವಕಾಶಗಳಿಗನುಗುಣವಾಗಿ ಬೋಧಿಸುವ ಸಂಪೂರ್ಣ ಅಧಿಕಾರವಿತ್ತು. ಯಾವ ಪರವಾನಿಗೆಯ ಬಗ್ಗೆಯಾಗಲೀ, ಅನುಮತಿಯ ಬಗ್ಗೆಯಾಗಲೀ ಅಥವಾ ಅವರು ಯಾರಿಂದಾದರೂ ಅಭಿಷೇಕ ಪಡೆದ ಬಗ್ಗೆಯಾದರೂ ಹೇಳದೆ, ಇವರಲ್ಲಿ ಒಬ್ಬನಾದ ಸ್ತೆಫನನು ಆವೇಶಪೂರ್ವಕವಾದ ಪ್ರಸಂಗವನ್ನು ಮಾಡಿ ಕರ್ತನ ನಂತರದ ಮೊದಲನೆಯ ರಕ್ತಸಾಕ್ಷಿಯಾದನು. ಇಲ್ಲಿ ಹಸ್ತಾರ್ಪಣೆಯು ಕೇವಲ ಅಪೋಸ್ತಲರ ಅಂಗೀಕಾರ ಮತ್ತು ಆಶೀರ್ವಾದವನ್ನು ಮಾತ್ರವೇ ಸೂಚಿಸುವುದಾಗಿದೆ.

(3) ಪೌಲ ಮತ್ತು ಬಾರ್ನಬರ ಹಸ್ತಾರ್ಪಣೆಯು ಅವರಿಗೆ ಪ್ರಸಂಗಿಸುವ ಅನುಮತಿ ನೀಡುವುದಾಗಿರಲಿಕ್ಕಿಲ್ಲ. ಯಾಕೆಂದರೆ, ಅವರು ಈ ಮೊದಲೇ ಹಿರಿಯರೆಂದು ಮಾನ್ಯತೆ ಪಡೆದಿದ್ದು ಅಂತಿಯೋಕ್ಯ ಸಭೆಯಲ್ಲಿ ಸುಮಾರು ಒಂದು ವರ್ಷಗಳಿಂದ ಬೋಧಿಸುತ್ತಿದ್ದರು. ಇದಲ್ಲದೆ ಅವರಿಬ್ಬರೂ ಬೇರೆಡೆಗಳಲ್ಲಿಯೂ ಪ್ರಸಂಗಿಸುತ್ತಿದ್ದರು (ಅಪೋಸ್ತಲರ ಕೃತ್ಯಗಳು 9:20–29; 11–26 ಇವುಗಳನ್ನು ಹೋಲಿಸಿ ನೋಡಿರಿ). ಪೂರ್ವದಲ್ಲಿಯೂ ಈ ಹಸ್ತಾರ್ಪಣೆಯು ಕೇವಲ ಪೌಲ ಬಾರ್ನಬರು ಕೈಗೊಳ್ಳಲಿರುವ ಕರ್ತನ ಸೇವೆಯನ್ನು ಅನುಮೋದಿಸುವುದಾಗಿತ್ತು. ಇದರಿಂದ ಅಂತಿಯೋಕ್ಯ ಸಭೆಯವರು ಇವರ ಸೇವಾಕಾರ್ಯದಲ್ಲಿ ಪಾಲ್ಗೊಂಡು ಬಹುಶಃ ಅವರ ಖರ್ಚು ವೆಚ್ಚಗಳನ್ನು ವಹಿಸಿಕೊಂಡರು.

(4) ಇಲ್ಲಿ ಅಪೋಸ್ತಲನು ದ್ರಾಕ್ಷೆ ತೋಟದಲ್ಲಿ ತನ್ನ ಜೊತೆ ಕೂಲಿ ಆಳಿಗೆ ತಿಮೋಥೆಯನು ಮಾಡುವ ಹಸ್ತಾರ್ಪಣೆಯು ಆತನ ಒಪ್ಪಿಗೆಯನ್ನು ಸೂಚಿಸುತ್ತದೆಂದು ಹೇಳುತ್ತಾನೆ. ಒಬ್ಬ ಮನುಷ್ಯನು ಯಾವ ರೀತಿಯಿಂದಲಾದರೂ ಅಲ್ಪನಾಗಿ ಕಂಡು ಬಂದಲ್ಲಿ ತಿಮೋಥೆಯನು ಸಹಾ ಆತನ ಈ ಅವಗುಣದಲ್ಲಿ ಪಾಲುದಾರನಾಗಬೇಕೆಂದು ಹೇಳುತ್ತಾನೆ. ಆದುದರಿಂದ ಸಾಧ್ಯವಾದ ಮಟ್ಟಿಗೆ ಕರ್ತನ ಕುರಿಗಳಿಗೆ ನೈತಿಕವಾಗಿ ಅಥವಾ ಸೈದ್ಧಾಂತಿಕವಾಗಿ ಹಾನಿಯನ್ನುಂಟುಮಾಡುವವರನ್ನು

ಪರಿಚಯಿಸಲು ತನ್ನ ಪ್ರಭಾವವನ್ನು ಬಳಸಬಾರದೆಂದು ಎಚ್ಚರಿಸುತ್ತಾನೆ.

ಯಾವುದೇ ನಷ್ಟಕ್ಕೆ ಈಡಾಗಬಾರದು; ಶಿಫಾರಸ್ಸು ಪತ್ರ ನೀಡುವಲ್ಲಿ ಅಥವಾ ಸಾರ್ವಜನಿಕವಾದ ಅನುಮೋದನೆಯನ್ನು ನೀಡುವಲ್ಲಿ ಎಚ್ಚರಿಕೆ ವಹಿಸಬೇಕು. ಶುಭ ಸಂದೇಶದೊಡನೆ ಇದೇ ಬುದ್ದಿವಾದಗಳು ಈಗಲೂ ಎಲ್ಲಾ ದೇವಜನರಿಗೆ ಅವರ ಪ್ರಭಾವದ ಪ್ರಮಾಣಕ್ಕನುಸಾರವಾಗಿ ಪ್ರಸ್ತುತವಾಗಿದೆ. ಯಾರೂ ಪ್ರಸಂಗಿಸುವ ಅಧಿಕಾರವನ್ನು ಹೊಂದುವ ತನಕ ತಿಮೋಥೆಯನ ಅನುಮೋದನೆಗೆ ಕಾಯುತ್ತಿದ್ದರೆಂಬ ಅಭಿಪ್ರಾಯವನ್ನು ಇದು ಮೂಡಿಸುವುದಿಲ್ಲ; ಆ ಅಧಿಕಾರವು ಪರಿಶುದ್ಧಾತ್ಮನಿಂದ ಅಭಿಷೇಕ ಹೊಂದಿದ ಎಲ್ಲರಿಗೂ ಅವರವರ ಯೋಗ್ಯತೆಗೆ ಅನುಸಾರವಾಗಿ ದೇವರಿಂದ ದಯಪಾಲಿಸಲ್ಪಟ್ಟಿದೆ.

## ಸಂಬಳ ಪಡೆಯುವ ಸೇವೆಯೋ?

## A Paid Ministry?

ಈಗ ಸರ್ವೇಸಾಮಾನ್ಯವಾಗಿರುವ ಮತ್ತು ಅನೇಕರಿಂದ ಅನಿವಾರ್ಯ ಮತ್ತು ಬಿಡಲಾಗದುದೆಂದು ಪರಿಗಣಿಸಿರುವ ಸಂಬಳ ಪಡೆವ ಸೇವಾ ಸಂಪ್ರದಾಯವು ಆದಿ ಸಭೆಯಲ್ಲಿ ಚಾಲ್ತಿಯಲ್ಲಿರಲಿಲ್ಲ. ನಾವು ಸ್ಫೂರ್ತಿದಾಯಕ ದಾಖಲೆಗಳಿಂದ ನಿರ್ಣಯಿಸುವಂತೆ ನಮ್ಮ ಕರ್ತನು ಮತ್ತು ಆತನು ಆರಿಸಿಕೊಂಡಿದ್ದ ಹನ್ನೆರಡು ಮಂದಿ ಶಿಷ್ಯರಲ್ಲಿ ಬಹುಶಃ ಯಾಕೋಬ, ಯೋಹಾನ ಮತ್ತು ಮತ್ತಾಯರನ್ನು ಹೊರತುಪಡಿಸಿ ಉಳಿದವರೆಲ್ಲಾ ಬಡವರಾಗಿದ್ದರು. ಲೇವಿಯರಿಗೆ ಸ್ವಂತ ಇಚ್ಛೆಯಿಂದ ನೀಡುವ ಪದ್ಧತಿಗೆ ರೂಢಿಸಿಕೊಂಡಿದ್ದ ಯೆಹೂದ್ಯರು ಈ ಪದ್ಧತಿಯನ್ನು ಅವರಿಗೆ ಧಾರ್ಮಿಕ, ದೇವರಿಗೆ ಸಂಬಂಧಿಸಿದ್ದು ಎಂದು ಕಂಡುಬರುವ ಎಲ್ಲವುಗಳಿಗೂ ಅನ್ವಯಿಸುತ್ತಿದ್ದರು. ಈ ಶಿಷ್ಯರಲ್ಲಿ ಯೂದನೆಂಬ ಒಬ್ಬ ಸರ್ವ ಸಾಮಾನ್ಯ ಖಜಾಂಚಿಯೂ ಇದ್ದನು (ಯೋಹಾನ 12:6: 13:29 ನೋಡಿರಿ). ಸ್ಪಷ್ಟವಾಗಿ ಯಾವ ಕೊರತೆಯೂ ಅವರಿಗೆ ಇದ್ದಿಲ್ಲ ಮತ್ತು ಅವರು ಎಂದೂ ಭಿಕ್ಷೆ ಬೇಡಲಿಲ್ಲ. ಈ ಬಗ್ಗೆ ಕಿಂಚಿತ್ತಾದರೂ ಕರ್ತನ ಮಾತುಗಳಲ್ಲಿ ಸೂಚನೆ ಕಂಡುಬರುವುದಿಲ್ಲ. ತಂದೆಯು ಒದಗಿಸಿಕೊಡುವನೆಂದು ಆತನು ನಂಬಿದ್ದನು. ಕೆಲವೊಂದು ಗೌರವ ಮಹಿಳೆಯರು ತಮ್ಮ ಆಸ್ತಿಯಿಂದ ಅವನಿಗೆ ಕೊಟ್ಟು ಉಪಚರಿಸುತ್ತಿದ್ದರು (ಮತ್ತಾಯ 27:55,56 ; ಲೂಕ 8:2,3 ನೋಡಿರಿ).

ನಮ್ಮ ಕರ್ತನ ಪ್ರಸಂಗಗಳು ಮತ್ತು ಸಾಮ್ಯಗಳಲ್ಲಿ ಹಣ ಕೋರಿಕೆಯ ಮಾತುಗಳು ಇರುತ್ತಿದ್ದರೆ ಅದು ಅವರ ಜೀವನವನ್ನೆ ಹೀರಿಕೊಳ್ಳುತ್ತಿತ್ತು. ಇದು ನಮ್ಮ ಕರ್ತನ ಮತ್ತು ಆತನು ವಿಶೇಷವಾಗಿ ಆರಿಸಿಕೊಂಡ ಆತನ ಶಿಷ್ಯರ ನಿಸ್ವಾರ್ಥತೆ ಇದಾಗಿದೆ ಎನ್ನುವುದಕ್ಕಿಂತ ಹೆಚ್ಚಿನದೇನೂ ನಮಗೆ ಇದರಲ್ಲಿ ಕಂಡುಬರುವುದಿಲ್ಲ. ಯೂದನು ಮಾತ್ರವೇ ಒಂದು ಅಪವಾದವಾಗಿದ್ದು ಆತನ ಧನಲೋಭವು ಆತನಿಗೆ ಮುಳುವಾಯಿತು (ಯೋಹಾನ 12:5,6). ಬಾಬೇಲಿನ ಹಣದಾಸೆ, ಪ್ರದರ್ಶನ ಮತ್ತು ಭಿಕ್ಷಾ ಪದ್ಧತಿ ಇವುಗಳು ಇಂದು ಅದರ ಪ್ರಬಲವಾದ ಪ್ರಭಾವಕ್ಕೆ ಬಹಳಷ್ಟು ವಿರೋಧವಾಗಿದ್ದವು; ಕರ್ತನ ಮೊದಲ ಬರೋಣದಲ್ಲಿದ್ದಂತೆ ಇಂದಿನ ಆತನ ನಂಬಿಗಸ್ತರ ಮಧ್ಯೆ, ಬೋಧನೆಯನ್ನು ಪೂರ್ಣವಾಗಿ ಮೆಚ್ಚಿಕೊಳ್ಳದ ಪವಿತ್ರಾತ್ಮನ ಅನುಪಸ್ಥಿತಿಯನ್ನು ಜೀವಿಸುವ ಪತ್ರಿಕೆಯನ್ನು ಅಧ್ಯಯನ ಮಾಡಿದವರಿಗೆ ತೋರಿಬರುತ್ತದೆ. ಗಣನೀಯವಾದ ರೀತಿಯಲ್ಲಿ ನಮ್ಮ ಕರ್ತನು ಆತನ "ಸುಗ್ಗಿಯ" ಕಾರ್ಯಕ್ಕೆ ಒಂದೇ ಒಂದು ಹಣದ ಕೋರಿಕೆಯನ್ನು ಮಾಡದೆ ಬಹಳಷ್ಟು ಒದಗಿಸಿದ್ದಾನೆ. ಇದು ಬೇರೆ ರೀತಿಯಾಗಲು ಸಾಧ್ಯವೇ ಇಲ್ಲವೆಂದು ನಾವು ನಂಬುತ್ತೇವೆ. ಯಾಕೆಂದರೆ ಇದು ಕರ್ತನ ಮನಸ್ಸು.

ಈ ಲೋಕದ ವೈಭವ ಮತ್ತು ಧನೈಶ್ವರ್ಯಗಳಲ್ಲಿ ಆಕಾಂಕ್ಷೆಯುಳ್ಳವರು ಅವನ್ನು ವ್ಯಾಪಾರ ಇಲ್ಲವೆ ಬೇರೆ ಲಾಭದಾಯಕ ಉದ್ಯೋಗಗಳ ಮೂಲಕ ಪಡೆದುಕೊಳ್ಳಲಿ; ಆದರೆ ಕ್ರಿಸ್ತನ ಸುವಾರ್ತೆಯ ಸೇವಕರಾಗ ಬಯಸುವವ ಯಾರೂ ದೇವರ, ಸತ್ಯದ ಮತ್ತು ಸಹೋದರರ ಮೇಲಿನ ಪ್ರೀತಿ ಇವುಗಳ ಹೊರತಾಗಿ ಮತ್ಯಾವ ಉದ್ದೇಶವನ್ನೂ ಹೊಂದಿರದೇ ಇರಲಿ; ಈ ಪ್ರೀತಿಯು ಸುಖ, ಐಶ್ವರ್ಯಗಳನ್ನು, ಮಾನವ ಗೌರವಗಳನ್ನು ಅಸಂತೋಷವಾಗಿ ಅಲ್ಲ ಮನಃಪೂರ್ವಕವಾಗಿ ತ್ಯಾಗ ಮಾಡುವುದಾಗಿದೆ. ಆದರೆ, ಅಯ್ಯೋ! ನಾಮಾಂಕಿತ ಕ್ರೈಸ್ತತ್ವವು ಪ್ರಾಪಂಚಿಕವಾಗಿ ಬಹಳಷ್ಟು ಬೆಳೆದಿದೆ. ಅದರ ಸೇವಕರಿಗೆ ರೆವರೆಂಡ್, ವೆರಿ ರೆವರೆಂಡ್, ಮೋಸ್ಟ್ ರೆವರೆಂಡ್, ಡಾಕ್ಟರ್ ಆಫ್ ಡಿವಿನಿಟಿ ಮುಂತಾದ ಅನೇಕ ಬಿರುದುಗಳಿವೆ; ಆ ಗೌರವ ಮತ್ತು ಬಿರುದುಗಳ ಮೇಲೆ ಅವರ ಸಂಬಳ ನಿಗದಿಯಾಗುತ್ತದೆ. ಸೇವಕರುಗಳ ಅಗತ್ಯಗಳಿಗನುಸಾರವಾಗಿ ಅಲ್ಲ, ಆದರೆ ಜನ ಸಮೂಹ ಮತ್ತು ಧನಿಕರನ್ನು ಆಕರ್ಷಿಸುವ ಅವರ ಸಾಮರ್ಥ್ಯದ ಮೇಲೆ ಆತುಕೊಂಡ ಅವರ ವಾಣಿಜ್ಯ ಅಧಾರದ ಮೇರೆಗೆ. ಇದರ ಸ್ವಾಭಾವಿಕ ಪರಿಣಾಮ –

"ಮುಖಂಡರು ಲಂಚಕ್ಕೆ ನ್ಯಾಯ ತೀರಿಸುತ್ತಾರೆ, ಯಾಜಕರು ಸಂಬಳಕ್ಕಾಗಿ ಉಪದೇಶಿಸುತ್ತಾರೆ, ಪ್ರವಾದಿಗಳು ಹಣಕ್ಕೋಸ್ಕರ ಕಣಿ ಹೇಳುತ್ತಾರೆ; ಆದರೂ ಯೆಹೋವನ ಮೇಲೆ ಭಾರ ಹಾಕಿ ಯೆಹೋವನು ನಮ್ಮ ಮಧ್ಯದಲ್ಲಿ ಇದ್ದಾನಲ್ಲಾ ನಮಗೇನೂ ಸಂಭವಿಸದು ಅಂದುಕೊಳ್ಳುತ್ತಾರೆ" (ಮೀಕ 3:11)

"ಇವರ ಕಾವಲುಗಾರರು ಕುರುಡರು, ಇವರಲ್ಲಿ ಯಾರಿಗೂ ತಿಳುವಳಿಕೆ ಇಲ್ಲ; ಇವರೆಲ್ಲರೂ ಬೊಗಳಲಾರದ ಮೂಗ ನಾಯಿಗಳು, ನಿದ್ರೆಯನ್ನಾಶಿಸಿ ಮಲಗಿಕೊಂಡು ಕನವರಿಸುವ ನಾಯಿಗಳು. ಇವುಗಳಿಗೆ ಎಂದಿಗೂ ಸಾಕು ಎನಿಸದು ಇಂಥವರು ಕುರಿಗಳನ್ನು ಕಾಯತಕ್ಕವರೋ! ಬುದ್ಧಿಹೀನರಾಗಿದ್ದಾರೆ, ಇವರಲ್ಲಿ ಯಾರೂ ತಪ್ಪದೆ ಪ್ರತಿಯೊಬ್ಬನೂ ಕೊಳ್ಳೆ ಹೊಡೆಯಬೇಕೆಂದು ತನ್ನ ತನ್ನ ಮಾರ್ಗಕ್ಕೆ ತಿರುಗಿಕೊಂಡಿದ್ದಾನೆ" (ಯೆಶಾಯ 56:9–11) "ಆ ನಾಯಿಗಳಿಗೆ ಎಚ್ಚರಿಕೆಯಾಗಿರಿ; ದುರ್ಮನಸ್ಸಿನಿಂದ ಕೆಲಸ ಮಾಡುವವರಿಗೆ ಎಚ್ಚರಿಕೆಯಾಗಿರಿ" (ಫಿಲಿಪ್ಪಿ 3:2)"ಯಾಕೆಂದರೆ ಜನರು ಸ್ವಸ್ಥಬೋಧನೆಯನ್ನು ಸಹಿಸದ ಕಾಲವು ಬರುತ್ತದೆ; ಅದರಲ್ಲಿ ಅವರು ತೀಟೇ ಕಿವಿಗಳುಳ್ಳವರಾಗಿ ತಮ್ಮ ದುರಾಸೆಗಳಿಗೆ ಅನುಕೂಲಕರವಾದ ಅನೇಕ ಉಪದೇಶಕರನ್ನು ಇಟ್ಟುಕೊಳ್ಳುವರು. ಅವರು ಸತ್ಯಬೋಧನೆಗೆ ಕಿವಿಗೊಡದೆ ಕಲ್ಪನಾ ಕಥೆಗಳನ್ನು ಕೇಳುವುದಕ್ಕೆ ಹೋಗುವರು. ಆದರೆ ನೀನು ಎಲ್ಲಾ ವಿಷಯಗಳಲ್ಲಿ ಸ್ವಸ್ಥ ಚಿತ್ತನಾಗಿರು" (2 ತಿಮೋ. 4: 3–4)

"ಸಂಬಳವಿಲ್ಲದಿರುವಿಕೆ" ಮತ್ತು "ಅತಿಯಾದ ಸಂಬಳ" ಈ ಎರಡೂ ವೈಪರೀತ್ಯವನ್ನು ತಡೆಗಟ್ಟಬೇಕೆಂದು ಕೆಲವರು ತರ್ಕಿಸುತ್ತಾರೆ ಮತ್ತು ತಮ್ಮ ಮನಸ್ಸುಗಳಿಗೆ " ಆಳು ತನ್ನ ಕೂಲಿಗೆ ಯೋಗ್ಯನಷ್ಟೆ" (ಲೂಕ 10:7) ಎಂಬ ಕರ್ತನ ಮಾತುಗಳನ್ನು

ಮತ್ತು "ನಾವು ನಿಮಗೋಸ್ಕರ ಆತ್ಮ ಸಂಬಂಧವಾದ ಬೀಜವನ್ನು ಬಿತ್ತಿದ ಮೇಲೆ ನಿಮ್ಮಿಂದ ಶರೀರ ಸಂಬಂಧವಾದ ಪೈರನ್ನು ಕೊಯ್ಯುವುದು ದೊಡ್ಡದೋ? ... ಸುವಾರ್ತೆಯನ್ನು ಸಾರುವವನು ಸುವಾರ್ತೆಯಿಂದಲೇ ಜೀವನ ಮಾಡಬೇಕು" (1ಕೊರಿ. 9:11,14) ಎಂಬ ಅಪೋಸ್ತಲನ ಮಾತುಗಳನ್ನು ನೆನಪಿಗೆ ತರುತ್ತಾರೆ. ಆದರೆ ಈ ಪ್ರಬಲವಾದ ದೇವರ ವಾಕ್ಯದ ಹೇಳಿಕೆಗಳು ಸಹಾ ಭವ್ಯವಾದ ಸಂಬಳದ ಬಗ್ಗೆ ಹೇಳುವುದಿಲ್ಲ ಆದರೆ ಕೇವಲ ಅಗತ್ಯತೆಗಳನ್ನು ಮಾತ್ರವೇ ಪೂರೈಸಿಕೊಳ್ಳುವ ಬಗ್ಗೆ ಹೇಳುತ್ತವೆ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಇದನ್ನು ಅಪೋಸ್ತಲನು "ಕಣತುಳಿಯುವ ಎತ್ತಿನ ಬಾಯಿ ಕಟ್ಟಬಾರದು" (2 ಕೊರಿ. 9:9) ಎಂಬ ಮಾತುಗಳಿಂದ ಉದಾಹರಿಸುತ್ತಾನೆ. ಎತ್ತನ್ನು ತನ್ನ ಅಗತ್ಯತೆಗಳನ್ನು ಪೂರೈಸಿಕೊಳ್ಳುವ ಮಟ್ಟಿಗಷ್ಟೇ ಬಿಚ್ಚಬಹುದು ಹೊರತು, ಇನ್ನೂ ಹೆಚ್ಚಿಗೆ ಅಲ್ಲ. ಅಪೋಸ್ತಲನು ತನ್ನ ಯಶಸ್ವಿ ಸೇವೆಯ ಬಗ್ಗೆ "ನಾನು ನಿಮಗೆ ಭಾರವಾಗಿರುವುದಿಲ್ಲ; ನಾನು ನಿಮ್ಮ ಸ್ವತ್ತನ್ನು ಆಶಿಸದೆ ನಿಮ್ಮನ್ನೇ ಆಶಿಸುತ್ತೇನೆ... ನಾನಂತೂ ನಮಗಿರುವುದನ್ನು ನಿಮ್ಮ ಆತ್ಮಸಂರಕ್ಷಣೆಗೋಸ್ಕರ ಅತಿ ಸಂತೋಷದಿಂದ ವೆಚ್ಚವಾಡುತ್ತೇನೆ. ನನ್ನನ್ನೇ ವೆಚ್ಚಮಾಡಿಕೊಳ್ಳುತ್ತೇನೆ ನಾನು ನಿಮ್ಮನ್ನು ಹೆಚ್ಚಾಗಿ ಪ್ರೀತಿಸಿದರೆ ನೀವು ನನ್ನನ್ನು ಕಡಿಮೆಯಾಗಿ ಪ್ರೀತಿಸುತ್ತೀರೋ?" (2 ಕೊರಿ. 12: 14–15 )

ಯೇಸುವಿನ ಹೆಜ್ಜೆಜಾಡಿನಲ್ಲಿ ನಡೆದರೆ ಅದು ನಮ್ಮನ್ನು ಸಂಬಳದ ದಿಕ್ಕಿಗೆ ನಡಿಸುವುದಿಲ್ಲ. ಮುಖ್ಯ ಅಪೋಸ್ತಲನಾದ ಪೌಲನ ಹೆಜ್ಜೆಜಾಡಿನಲ್ಲಿ ನಡೆದರೂ ಸಹಾ. ಎರಡನೆಯವನು ಆತ್ಮೀಕ ಸೇವೆಗೆ ಲೌಕಿಕ ಸಂಭಾವನೆ ಕೇಳುವುದನ್ನು ತೋರಿಸಿಕೊಟ್ಟರೂ ಯಾವ ರೀತಿಯಲ್ಲಿಯೂ ನ್ಯಾಯವನ್ನು ಉಲ್ಲಂಘಿಸಲಿಲ್ಲ. ಈ ಬಗ್ಗೆ ಆತನು ತನ್ನ ಸ್ವಂತ ಕ್ರಮವನ್ನು ಈ ರೀತಿಯಾಗಿ ಮುಂದಿಟ್ಟಿದ್ದಾನೆ –

**"ನಾನು ಯಾರ ಬೆಳ್ಳಿ ಬಂಗಾರವನ್ನಾಗಲೀ ಉಡಿಗೆತೊಡಿಗೆಯನ್ನಾಗಲೀ ಬಯಸಲಿಲ್ಲ. ಈ ಕೈಗಳೇ ಕೆಲಸಮಾಡಿ ನನ್ನ ಕೊರತೆಗಳನ್ನೂ ನನ್ನ ಜೊತೆಯಲ್ಲಿದ್ದವರ ಕೊರತೆಗಳನ್ನೂ ನೀಗಿದ್ದನ್ನು ನೀವೇ ಬಲ್ಲಿರಿ. ಎಲ್ಲಾ ವಿಷಯಗಳಲ್ಲಿ ನಾನು ನಿಮಗೆ ಮಾದರಿ ತೋರಿದ್ದೇನೆ. ನೀವೂ ಹಾಗೆಯೇ ದುಡಿದು ಬಲವಿಲ್ಲದವರಿಗೆ ಉಪಕಾರ ಮಾಡಬೇಕು ಮತ್ತು – ತೆಗೆದುಕೊಳ್ಳುವುದಕ್ಕಿಂತ ಕೊಡುವುದೇ ಹೆಚ್ಚಿನ ಭಾಗ್ಯವೆಂಬುದಾಗಿ ಕರ್ತನಾದ ಯೇಸು ತಾನೇ ಹೇಳಿದ ಮಾತುಗಳನ್ನು ನೆನಪಿನಲ್ಲಿಟ್ಟುಕೊಂಡಿರಬೇಕು" ( ಅ.ಕೃ.20:33–35)**

**"ನಾವು ಈ ಹಕ್ಕನ್ನು ನಡಿಸದೆ [ಆತ್ಮೀಕ ವಿಷಯಗಳಿಗೆ ಬದಲಾಗಿ ನಿಮ್ಮ ಮೇಲೆ ನಮ್ಮ ಲೌಕಿಕ ಅವಶ್ಯಕತೆಗಳ ಭಾರವನ್ನು ನಿಮ್ಮ ಮೇಲೆ ಹಾಕಲಿಲ್ಲ.] ಕ್ರಿಸ್ತನ ಸುವಾರ್ತೆಗೆ ಅಡ್ಡಿಮಾಡಬಾರದೆಂದು ಎಲ್ಲವನ್ನೂ ಸಹಿಸಿಕೊಂಡೆವು" ( 1 ಕೊರಿ. 9:12)ನಾನು ನಿಮ್ಮಲ್ಲಿದ್ದಾಗ ಖರ್ಚಿಗೆ ಏನೂ ಇಲ್ಲದ ಸಮಯದಲ್ಲಿ ಯಾರ ಮೇಲೆಯೂ ಭಾರ ಹಾಕಲಿಲ್ಲ; ಮೆಕದೋನ್ಯದಿಂದ ಬಂದ ಸಹೋದರರು ನನಗೆ ಬೇಕಾದದ್ದೆಲ್ಲವನ್ನೂ (ಸ್ವಮನಸ್ಸಿನಿಂದ) ಕೊಟ್ಟರು (2 ಕೊರಿ. 11:9)**

ನಮ್ಮ ಸ್ವತಂತ್ರಗಳು ಅಪೋಸ್ತಲರಿಗೆ ಈ ವಿಷಯದಲ್ಲಿ ನೀಡಲ್ಪಟ್ಟವುಗಳೇ ಆಗಿವೆ. ಕಾರಣಗಳ ಬಗ್ಗೆ ಇರುವ ನಮ್ಮ ಸ್ವಾಮಿಭಕ್ತಿಯು ಎಲ್ಲಾ ವಿಷಯಗಳಲ್ಲಿ ಅವರ ಹೆಜ್ಜೆಜಾಡನ್ನೇ ಅನುಸರಿಸುವಂತೆ ಮಾಡುತ್ತದೆ. ಕರ್ತನು, ಅಪೋಸ್ತಲನು ಮತ್ತು ಅವರ ಸಂಗಡಿಗರು ಶ್ರಮಪಟ್ಟು ತಮ್ಮ ಸಂಪೂರ್ಣ ಸಮಯವನ್ನು ಸತ್ಯದ ಸೇವೆಯಲ್ಲಿ ಕಳೆದಾಗ ಸಹೋದರರು ತಮ್ಮ ಖರ್ಚಿಗಾಗಿ ಸ್ವಯಿಚ್ಛೆಯಿಂದ ನೀಡಿದ ದಾನಗಳನ್ನು ಸ್ವೀಕರಿಸಿದರು; ಮತ್ತು ಈಗಾಗಲೇ ತಿಳಿಸಿದಂತೆ ಅಂತಿಯೋಕ್ಯ ಸಭೆಯವರು ಪೌಲ ಬಾರ್ನಬರು ತಮ್ಮ ಮೊದಲ ಸುವಾರ್ತಾ ಪ್ರಯಾಣವನ್ನು ಪ್ರಾರಂಭಿಸಲಿದ್ದಾಗ ಅವರ ಮೇಲೆ ತಮ್ಮ ಕೈಗಳನ್ನಿಟ್ಟದ್ದು ಆ ಸಭೆಯು ಅವರ ಖರ್ಚು ವೆಚ್ಚಗಳ ಜವಾಬ್ದಾರಿ ವಹಿಸುವುದು ಮತ್ತು ಅದೇ ಸಮಯದಲ್ಲಿ ಅವರ ಕಾರ್ಯದಲ್ಲಿ ಭಾಗವಹಿಸುವುದೆಂಬ ಅರ್ಥ ನೀಡುವುದಾಗಿದೆ.

ಮನೆಯಲ್ಲೇ ಕುಳಿತು ಸೇವೆಮಾಡುತ್ತಿದ್ದ ಹಿರಿಯರುಗಳು ನೇರವಾಗಿಯಾಗಲೀ,ಪರೋಕ್ಷವಾಗಿಯಾಗಲೀ ಸಂಬಳ ಅಥವಾ ತಮ್ಮ ಖರ್ಚುವೆಚ್ಚಗಳನ್ನು ಪಡೆಯುತ್ತಿದ್ದರು ಎಂಬುದಕ್ಕೆ ಯಾವುದೇ ಮಾಹಿತಿ ಇರುವುದಿಲ್ಲ. ಸಾಮಾನ್ಯವಾಗಿ ಪ್ರತಿಯೊಂದು ಸ್ಥಳೀಯ ಸಭೆಗೆ ತಮ್ಮ ಸ್ವಂತ ಸದಸ್ಯರ ಹೆಚ್ಚು ಅಥವಾ ಕಡಿಮೆ, ದೊಡ್ಡ ಅಥವಾ ಅಲ್ಪವಾದ ಸ್ವಯಿಚ್ಛಾ ಸೇವೆಯನ್ನು ಬಳಸಿಕೊಳ್ಳುವುದು ಸಾಮಾನ್ಯವಾಗಿ ಅನುಕೂಲಕರವಾಗಿದೆ ಎಂದು ನಾವು ನಂಬುತ್ತೇವೆ. ದೇವರ ವಾಕ್ಯದಲ್ಲಿನ ಈ ರೀತಿಯು ಅರೋಗ್ಯಕರವಾಗಿದೆ. ಕ್ರಯದ ಪದ್ದತಿಗಿಂತ ಹೆಚ್ಚಾಗಿ ಇದು ಎಲ್ಲಾ ವಿವಿಧ ಸದಸ್ಯರುಗಳಿಗೆ ತಮ್ಮ ಆತ್ಮೀಕ ವರಗಳನ್ನು ಕಾರ್ಯಗತಗೊಳಿಸಲು ಮತ್ತು ಎಲ್ಲರೂ ಕರ್ತನನ್ನು ತಮ್ಮ ನಿಜವಾದ ಕುರುಬನೆಂಬಂತೆ ಕಾಣಲು ಆಶಯನೀಡುತ್ತದೆ. ಅರ್ಹತೆ ಪಡೆದ ಬೋಧಕರುಗಳು ಈಗ ಹೆಚ್ಚುತ್ತಿರುವಾಗ ಅಂತಿಯೋಕ್ಯ ಸಭೆಯ ಉದಾಹರಣೆಯನ್ನು ಅನುಸರಿಸೋಣ –ಕೆಲವರನ್ನು ಮಿಷನರಿಗಳನ್ನಾಗಿ, ಕೆಲವರನ್ನು ಕ್ರೈಸ್ತ ಸಾಹಿತ್ಯಗಳನ್ನು ಮಾರುವವರನ್ನಾಗಿ, ಮತ್ತೆ ಕೆಲವರನ್ನು ಯಾತ್ರಿಗಳನ್ನಾಗಿ ಕಳುಹಿಸಿ ಕೊಡೋಣ. ಆದ್ದರಿಂದ ಯಾವುದೇ ಸಭೆಯವರು ತಮ್ಮ ಕ್ಷೇತ್ರವು ಹೆಚ್ಚು ಪ್ರಯೋಜನಕಾರಿ, ಸಹೋದರನು ಇಲ್ಲಿ ಉಪಯುಕ್ತವಾಗಿ ತನ್ನ ಪೂರ್ಣ ಸಮಯವನ್ನು ಸುವಾರ್ತಾಸೇವೆಯಲ್ಲಿ ಕಳೆಯಬಹುದು ಎಂದು ಪರಿಗಣಿಸಿದಲ್ಲಿ ಮತ್ತು ಅವರು ಆತನ ಖರ್ಚಿಗೆ ಬೇಕಾಗುವಷ್ಟು ಹಣವನ್ನು ಸ್ವಯಿಚ್ಛೆಯಿಂದ ನೀಡ ಬಯಸಿದಲ್ಲಿ ಯಾವುದೇ ದೇವರ ವಾಕ್ಯವು ಇದನ್ನು ಅಡ್ಡಿಪಡಿಸುವುದಿಲ್ಲ ಎಂಬುದು ನಮಗೆ ತಿಳಿದಿದೆ. ಆದರೆ ಸೇವೆ ಮಾಡುವ ಹಿರಿಯರು ಮತ್ತು ಅವರನ್ನು ಬೆಂಬಲಿಸುವ ಸಭೆಯು ನೀಡಲಿರುವ ಮೊತ್ತವು ಸೇವಕರ ಮತ್ತು ಅವರ ಮೇಲೆ ಆತುಕೊಂಡಿರುವವರ ಜೀವಾನಾವಶ್ಯಗಳಿಗೆ ಬೇಕಾಗುವುದಕ್ಕಿಂತ ಅಧಿಕವಾಗಿರದಂತೆ ನೋಡಿಕೊಳ್ಳಬೇಕು. ಇವರಿಬ್ಬರೂ ಹಾಗೂ ಸಭೆಯಲ್ಲಿ ಎಲ್ಲರೂ ಮುಖ್ಯವಾಗಿ ಹಿರಿಯರಾಗುವ ಅರ್ಹತೆಯುಳ್ಳವರು ಕಾರ್ಯ ತತ್ಪರರಾಗಿರಬೇಕೆಂದು ನೋಡಿಕೊಳ್ಳಬೇಕು; ಇಲ್ಲವಾದಲ್ಲಿ ಬಾಬೇಲಿನ ಉತ್ಸಾಹ ಮತ್ತು ನಾಮಾಂಕಿತ ಸಭೆಗಳ ಪದ್ಧತಿ ಖಂಡಿತವಾಗಿ ಇಲ್ಲಿಯೂ ವೃದ್ಧಿಗೊಳ್ಳುತ್ತದೆ.

## **ಸಭೆಯಲ್ಲಿರಬೇಕಾದ ಶಿಸ್ತು** (ಮತ್ತಾಯ18:15–18)

## **Discipline in the Ecclesia -**Matt. 18:15-18

ಸಭೆಯ ಶಿಸ್ತಿನ ಆಡಳಿತ ಕೇವಲ ಹಿರಿಯರುಗಳಿಗೆ ಮಾತ್ರವೇ ಸೇರಿದ್ದಲ್ಲ, ಅದು ಸಮಗ್ರ ಸಭೆಗೆ ಸೇರಿದ್ದು. ಯಾವನಾದರೂ ತಪ್ಪು ಮಾಡಿದ್ದಾನೆ ಇಲ್ಲವೆ ಪಾಪ ಮಾಡಿದ್ದಾನೆ ಎಂದು ಕಂಡುಬಂದಲ್ಲಿ, ಆತನು ಮಾಡಿದ ಈ ತಪ್ಪನ್ನು ಆತನಿಂದ ಹಾನಿ ಹೊಂದಿದವನೇ ಅದನ್ನು ಆತನಿಗೆ ತಿಳಿಸಬೇಕು ಅಥವಾ ಆ ತಪ್ಪನ್ನು ಮೊದಲು ಕಂಡು ಹಿಡಿದವರು ಇದನ್ನು ಮಾಡಬಹುದು. ತಪ್ಪು ಮಾಡಿದವನು ತನ್ನನ್ನು ಸರಿಪಡಿಸಿಕೊಳ್ಳದೇ ಹೋದಲ್ಲಿ, ಆತನು ಅದೇ ತಪ್ಪಿನಲ್ಲಿ ಅಥವಾ ಪಾಪದಲ್ಲಿ ಮುಂದುವರಿದಲ್ಲಿ ಆಗ ಆತನೊಡನೆ ಯಾವುದೇ ಮತ್ಸರವಿಲ್ಲದ ಎರಡು ಅಥವಾ ಮೂರು ಮಂದಿ ಸಹೋದರರನ್ನು ನಡೆದ ಸಂಗತಿಗಳನ್ನು ವಿಚಾರಿಸಿ ವ್ಯಾಜ್ಯಮಾಡುವವರಿಗೆ ತಕ್ಕ ಬುದ್ಧಿವಾದ ಹೇಳುವಂತೆ ಮಾಡಬೇಕು (ಹಿರಿಯರು ಮಾಡಬಹುದು, ಇಲ್ಲವೆ ಮಾಡದಿರಬಹುದು, ಆದರೆ ಅವರ ತೀರ್ಮಾನವು ಪಕ್ವವಾಗಿರಬೇಕು ಮತ್ತು ಪ್ರಭಾವವು ಹೆಚ್ಚು ಪ್ರಭಲವುಳ್ಳದ್ದಾಗಿರಬೇಕೇ ಹೊರತು ಅವರ ಹಿರಿಯತನವು ಯಾವುದೇ ಬಲತ್ಕಾರವನ್ನಾಗಲೀ, ಅಧಿಕಾರವನ್ನಾಗಲೀ ಪ್ರಯೋಗಿಸಬಾರದು). ಸಮಿತಿಯವರು ಯಾವುದೇ ಒಂದು ಪಕ್ಷದ ಪರವಾಗಿ ಅವಿರೋಧವಾಗಿ ತೀರ್ಮಾನಿಸಿದರೆ ಮತ್ತೊಬ್ಬರು ಅದನ್ನು ಒಪ್ಪಿಕೊಳ್ಳಬೇಕು ಮತ್ತು ಪ್ರಕರಣವು ತಡವಿಲ್ಲದೆ ಬೇಕಾದ ಸಾಧ್ಯವಾದ ತಿದ್ದುಪಡಿ ಮತ್ತು ನಷ್ಟಪರಿಹಾರಗಳೊಡನೆ ಸಂಪೂರ್ಣವಾಗಿ ಅಂತ್ಯಗೊಳ್ಳಬೇಕು. ಎರಡು ಪಕ್ಷಗಳಲ್ಲಿ ಯಾರಾದರೂ ಹಠಹಡಿದು ಇನ್ನೂ ತಪ್ಪು ಮಾರ್ಗದಲ್ಲೇ ನಡೆಯುವುದಾದರೆ, ಮೂಲದಲ್ಲಿ ಆರೋಪಮಾಡಿದವನು ಅಥವಾ ಸಮತಿಗೆ ಕರೆಯಲ್ಪಟ್ಟವನು ಅಥವಾ ಇಬ್ಬರೂ ಕೂಡಿಕೊಂಡು ನಂತರದಲ್ಲಿ (ಕೂಡಲೇ ಅಲ್ಲ) ಪ್ರಕರಣವನ್ನು ಸಭೆಯ ಮುಂದೆ ತರಬಹುದು. ಈ ರೀತಿಯಲ್ಲಿ ಹಿರಿಯರುಗಳು ಯಾವ ರೀತಿಯಲ್ಲೂ ಸದಸ್ಯರ ತೀರ್ಪುಗಾರರಲ್ಲ –ಆಲಿಸುವಿಕೆ ಮತ್ತು ಅಂತಿಮ ತೀರ್ಮಾನವು ಸ್ಥಳೀಯ ಸಭೆಗೆ ಸೇರಿದ್ದು ಎಂಬುದು ಸ್ಪಷ್ಟವಾಗುತ್ತದೆ.

ಮೇಲೆ ಹೇಳಿದ ಎರಡು ಪೂರ್ವಭಾವಿ ಹೆಜ್ಜೆಗಳನ್ನು ತೆಗೆದುಕೊಂಡು ಸತ್ಯಸಂಗತಿಗಳು ಹಿರಿಯರಿಗೆ ದೃಢಪಟ್ಟ ಮೇಲೆ ಸಭೆಯ ಪ್ರತಿಷ್ಠಿಸಲ್ಪಟ್ಟ ಸರ್ವಸದಸ್ಯರ ಕೂಟವನ್ನು ನ್ಯಾಯಸಭೆಯಾಗಿ ಕೂಡಿಸುವುದು ಅವರ ಕರ್ತವ್ಯ. ಅವರು ಈ ಪ್ರಕರಣದ ಎಲ್ಲಾ ವಿವರಗಳನ್ನು ಸಭಾ ಶಿರಸ್ಸಿನ ನಾಮದಲ್ಲಿ ಮತ್ತು ಆತನ ಗೌರವಾರ್ಥವಾಗಿ ತಮ್ಮ ತೀರ್ಮಾನವನ್ನು ನೀಡುವ ಸಲುವಾಗಿ ವಿಚಾರಿಸುತ್ತಾರೆ. ಎಲ್ಲಾ ವಿಷಯಗಳು ಸ್ಪಷ್ಟವಾಗಿರಬೇಕು ಮತ್ತು ತಪ್ಪಿತಸ್ಥರನ್ನು ಉದಾರವಾದ ರೀತಿಯಲ್ಲಿ ನೋಡಿಕೊಳ್ಳಬೇಕು ಮತ್ತು ತೀರ್ಮಾನವು ಅವಿರೋಧ ಅಥವಾ ಅದಕ್ಕೆ ಸಮೀಪವಾಗಿರಬೇಕು. ಈ ರೀತಿಯಲ್ಲಿ ಸಭೆಯ ಐಕ್ಯತೆ ಮತ್ತು ಶಾಂತಿಯನ್ನು ಕಾಪಾಡಿಕೊಳ್ಳಬೇಕು. ಸಭೆಯ ತೀರ್ಮಾನ ಹೊರ ಬೀಳುವವರೆಗೂ ಪಶ್ಚಾತ್ತಾಪಕ್ಕೆ ಅವಕಾಶವಿರಬೇಕು. ತಪ್ಪಿತಸ್ಥರನ್ನು ಮರಳಿ ಪಡೆಯುವ ಸಲುವಾಗಿ ಪಶ್ಚಾತ್ತಾಪ ಮತ್ತು ಸುಧಾರಣೆಗಳೇ ಈ ಸಭಾ ಕಾರ್ಯದ ಪ್ರತಿಯೊಂದು ಹೆಜ್ಜೆಯ ಉದ್ದೇಶವಾಗಿದೆಯೇ ಹೊರತು ಆತನಿಗೆ ಶಿಕ್ಷೆ ವಿಧಿಸುವುದಲ್ಲವೇ ಅಲ್ಲ. ಶಿಕ್ಷಿಸುವುದು ದೇವರ ಕೆಲಸ ನಮ್ಮದಲ್ಲ –"ನೀವೇ ಮುಯ್ಯಿಗೆ ಮುಯ್ಯಿ ತೀರಿಸದೆ ಶಿಕ್ಷಿಸುವುದನ್ನು ದೇವರಿಗೆ ಬಿಡಿರಿ" (ರೋಮಾ.12:19). ಸಭಾ ಕಾರ್ಯದ ಯಾವ ಸಮಯದಲ್ಲಿಯಾದರೂ ತಪ್ಪು ಮಾಡಿದವನು ಅದಕ್ಕಾಗಿ ಪಶ್ಚಾತ್ತಾಪ ಪಟ್ಟಲ್ಲಿ ದೇವರಾತ್ಮನನ್ನು ಹೊಂದಿರುವವರೆಲ್ಲರಿಗೂ ಇದು ಸ್ತೋತ್ರವರ್ಪಿಸಲು ಮತ್ತು ಆನಂದಪಡಲು ಕಾರಣವಾಗಬೇಕು. ಉಳಿದವರು ಆತನ ದೇಹದ ಸದಸ್ಯರಲ್ಲ – "ನೀವಾದರೋ ನಿಮ್ಮಲ್ಲಿ ದೇವರ ಆತ್ಮನು ವಾಸ ವಾಗಿರುವುದಾದರೆ ಶರೀರಭಾವಾಧೀನರಲ್ಲ. ದೇವರಾತ್ಮನಿಗೆ ಅಧೀನರಾಗಿದ್ದೀರಿ. ಯಾವನಿಗಾದರೂ ಕ್ರಿಸ್ತನ ಆತ್ಮನು ಇಲ್ಲದಿದ್ದರೆ ಅವನು ಕ್ರಿಸ್ತನವನಲ್ಲ" (ರೋಮಾ.8:9).

ನಿಜವಾಗಿ ತಪ್ಪಿತಸ್ತನು ಸಮಗ್ರಸಭೆಯ ತೀರ್ಮಾನವನ್ನು ಒಪ್ಪದಿದ್ದಲ್ಲಿ ಅಥವಾ ಅದಕ್ಕೆ ಅವಿಧೇಯನಾದಲ್ಲಿ, ಆತನಿಗೆ ಯಾವ ಶಿಕ್ಷೆಯನ್ನೂ ನೀಡಬಾರದು ಅಥವಾ ಅದಕ್ಕೆ ಪ್ರಯತ್ನಿಸಲೂಬಾರದು. ಹಾಗಾದರೆ ಮುಂದೇನು? ಸಭೆಯು ಆತನಿಂದ ತನ್ನ ಸಾಂಗತ್ಯವನ್ನು ಮತ್ತು ಅದರ ಎಲ್ಲಾ ಕುರುಹು ಗಳನ್ನೂ ಮತ್ತು ಸಹೋದರತ್ವದ ಪ್ರಕಟನೆಗಳನ್ನು ವಾಪಸ್ಸು ಪಡೆಯಬೇಕು. ನಂತರದಲ್ಲಿ ಆತನನ್ನು ಅನ್ಯನೆಂದು ಗುರುತಿಸಲಾಗುವುದು– "ಅವನು ಸಭೆಯ ಮಾತನ್ನೂ ಕೇಳದೆ ಹೋದರೆ ಅವನು ನಿನಗೆ ಅಜ್ಞಾನಿಯಂತೆಯೂ ಭ್ರಷ್ಟನಂತೆಯೂ ಇರಲಿ" (ಮತ್ತಾ 18:17).

ಈ ಸಭಾಕಾರ್ಯದ ಯಾವ ಸಮಯದಲ್ಲಿಯೂ ತಪ್ಪಿತಸ್ತನ ತಪ್ಪು ಅಥವಾ ವಿಫಲತೆಗಳನ್ನು ಆತನ ಮತ್ತು ಸಭೆಯನ್ನು ಹಾಗೂ ಸಭೆಯ ಶಿರಸ್ಸಾಗಿರುವ ಕರ್ತನನ್ನು ಕಳಂಕಕ್ಕೆ ಗುರಿಪಡಿಸುವುದರ ಮೂಲಕ ಸಾರ್ವಜನಿಕ ಸ್ವತ್ತನ್ನಾಗಿ ಮಾಡಿ ಕೊಳ್ಳಬಾರದು. ಆತನನ್ನು ಬೇರ್ಪಡಿಸಿದ ನಂತರವೂ ಆತನ ಬಗ್ಗೆ ಕಟುವಾಗಿ ಮಾತನಾಡಬಾರದು. ನಾವು ಅನ್ಯಜನರನ್ನೂ ಬಯ್ಯುವಂತಿಲ್ಲ, ದೂಷಣೆಮಾಡುವಂತಿಲ್ಲ – "ಯಾರನ್ನೂ ದೂಷಿಸದೆ, ಕುತರ್ಕಮಾಡದೆ...(ತೀತ3:2) "ಸಮಯವಿರಲಾಗಿ ಎಲ್ಲರಿಗೂ ಒಳ್ಳೇದನ್ನು ಮಾಡೋಣ" (ಗಲಾ. 6:10). ಈ ಎರಡೂ ಅಗತ್ಯತೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಎಲ್ಲಾ ಮನುಷ್ಯರಿಗೂ ಪ್ರೀತಿಯೊಂದೇ ನಿಜವಾದ ಗುಣಧರ್ಮವಾಗಿದೆ. ಯಾವುದೇ ತಪ್ಪಾದ, ಹೇಳಿಕೆಗಳಿಂದ ಸಭೆಯಲ್ಲಿ ತನ್ನ ಸಹಚರನಾದ ಸಹೋದರನಿಗೆ ಹಾನಿಯನ್ನುಂಟು ಮಾಡಬಾರದೆಂದು ಪ್ರೀತಿಯು ನಮ್ಮನ್ನು ಎಷ್ಟೋ ಒತ್ತಾಯಪಡಿಸುತ್ತದೆ. ಇದಕ್ಕೂ ಹೆಚ್ಚಾಗಿ ಆತನ ಬಲಹೀನತೆಗಳನ್ನು ದೊಡ್ಡ ತಪ್ಪುಗಳನ್ನು ಮತ್ತು ಪಾಪಗಳನ್ನು ಅದನ್ನು ಹೇಳುವ ಸಮಯವು ನಿರಪೇಕ್ಷವಾಗಿ ಉಂಟಾಗುವವರೆಗೆ ಅನುಕಂಪದ ಪ್ರಪಂಚದಿಂದ ಮಾತ್ರವಲ್ಲ, ನಂಬಿಗಸ್ತ ಮನೆವಾರ್ತೆಯವರಿಂದಲೂ, ಸಭೆಯಿಂದಲೂ ಜಾಗರೂಕತೆಯಿಂದ ಮುಚ್ಚಿಹಾಕಬೇಕಾಗುತ್ತದೆ. ಪ್ರತಿಯೊಂದು ಹೆಜ್ಜೆಯಲ್ಲಿಯೂ ಪ್ರೀತಿಯ ಸ್ಫೂರ್ತಿಯು ತಪ್ಪಿತಸ್ಥನು ಅದನ್ನು ಯಾವುದೋ ತಪ್ಪುಗ್ರಹಿಕೆಯ ದೆಸೆಯಿಂದ ಮಾಡುತ್ತಿದ್ದಾನೆಂಬ ನಿರೀಕ್ಷೆಯನ್ನು ಹುಟ್ಟಿಸುತ್ತದೆ ಮತ್ತು ಆತನಿಗೆ ವಿವೇಕ ಹಾಗೂ ಕೃಪೆಯು ಉಂಟಾಗಿ ಆತನ ಆತ್ಮವು ಮರಣಕ್ಕೆ ಗುರಿಯಾಗದಂತೆ ಪ್ರಾರ್ಥಿಸುತ್ತದೆ –"ಒಬ್ಬ ಪಾಪಿಯನ್ನು ತಪ್ಪಾದ ಮಾರ್ಗದಿಂದ

ತಿರುಗಿಸಿದವನು ಅವನ ಪ್ರಾಣವನ್ನು ಮರಣಕ್ಕೆ ತಪ್ಪಿಸಿ ಬಹುಪಾಪಗಳನ್ನು ಮುಚ್ಚಿದವನಾದನೆಂದು ತಿಳುಕೊಳ್ಳಿರಿ" (ಯಾಕೋಬ 5:20) .

ಅಹಾ! ಪವಿತ್ರಾತ್ಮವು, ಪ್ರೀತಿಮಯವಾದುದು, ಇದು ಸಭೆಯ ಪ್ರತಿಯೊಬ್ಬ ಸದಸ್ಯರಲ್ಲಿಯೂ ಶ್ರೀಮಂತವಾಗಿ ವಾಸಮಾಡುತ್ತಿರುವಾಗ ಯಾರೊಬ್ಬರ ಬಗ್ಗೆಯೂ ಮುಖ್ಯವಾಗಿ ಸಹ ಸದಸ್ಯರ ಬಗ್ಗೆ ಮಾನನಷ್ಟಕರ ಅಪವಾದಗಳನ್ನು ಕೇಳುವುದು ಎಷ್ಟೋ ನೋವಿನ ಸಂಗತಿ! ಇದು ಘರ್ಷಣೆಯ ಅರ್ಧಭಾಗ ಅಥವಾ ಇನ್ನೂ ಹೆಚ್ಚಿನದನ್ನು ಕೂಡಲೇ ತೊಡೆದುಹಾಕುತ್ತದೆ. ನಮ್ಮ ಕರ್ತನಿಂದ ಸೂಕ್ಷ್ಮವಾಗಿ ನೀಡಲ್ಪಟ್ಟ ಮೇಲ್ಕಂಡ ವಿಧಾನವನ್ನು ಅನುಸರಿಸುವುದು ಮೇಲಿಂದ ಮೇಲೆ ಬರುವ ಸಭಾ ನ್ಯಾಯವಿಚಾರಣೆಗೆ ನಡಿಸುವುದಿಲ್ಲ. ಸುಮಾರಾಗಿ, ಕಡುವೈರತ್ವದ ಮೂಲಕಾರಣವನ್ನು ತೆಗೆದು ಹಾಕುತ್ತಿರುವಾಗಲೇ ಅದು ಸಭೆಯ ನಿರ್ಣಯವನ್ನು ಕರ್ತನ ನಿರ್ಣಯವೆಂಬ ಗೌರವಕ್ಕೆ ಪದೇ ಪದೇ ನಾಟಿಸುವುದಾಗಿದೆ ಹಾಗೂ ಸಭೆಯ ಸ್ವರವನ್ನು ಅದೇ ರೀತಿ ಕೇಳಿ ಅದಕ್ಕೆ ವಿಧೇಯತ್ವ ತೋರಲಾಗುವುದು. ಇದಕ್ಕೂ ಹೆಚ್ಚಾಗಿ, ಹೀಗೆ ಪ್ರಬಲವಾಗಿರುವ ಕ್ರಮ ಮತ್ತು ಪ್ರೀತಿಯಿಂದ ಪ್ರತಿಯೊಬ್ಬರೂ ತಮ್ಮದನ್ನು ತಾವು ನೋಡಿಕೊಳ್ಳಬಯಸುತ್ತಾರೆ ಮತ್ತು ತಮ್ಮ ಸಹೋದರನನ್ನು ತೆಗಳುವುದೂ ಅಥವಾ ಸರಿಪಡಿಸುವುದೂ ಇಲ್ಲ. ಸಂಗತಿಯು ತನಗೆ ಅಥವಾ ಸಭೆಗೆ ಅಥವಾ ಸತ್ಯಕ್ಕೆ ಸಂಬಂಧಿಸಿದಂತೆ ಬಹು ಮುಖ್ಯವಾಗಿರದ ಹೊರತು ಅದನ್ನು ಸಭಾ ಸಮಿತಿಯ ಗಣನೆಗೂ ತರುವುದಿಲ್ಲ.

ಸಭೆಯ ಹೆಚ್ಚಿನ ತೊಂದರೆಗಳು (ಸಮಾಜ ಹಾಗೂ ಕೌಟುಂಬಿಕ) ಪ್ರಶ್ನಾತೀತವಾಗಿ ತಪ್ಪು ಮಾಡುವ ಅಪೇಕ್ಷೆಯಿಂದ ಉದ್ಭವಿಸದೆ ಅಥವಾ ತಿಳಿಯದೇ ಮಾಡಿದ ತಪ್ಪುಗಳಿಂದ ಉದ್ಭವಿಸದೆ ತಪ್ಪು ತಿಳುವಳಿಕೆಗಳ ಕಾರಣ ಅಥವಾ ಕನಿಷ್ಟ ಉದ್ದೇಶಗಳನ್ನು ಕೆಲಮಟ್ಟಿಗೆ ತಪ್ಪಾಗಿ ಅರ್ಥಮಾಡಿ ಕೊಳ್ಳುವುದರಿಂದ ಉದ್ಭವಿಸುತ್ತವೆ. ನಾಲಿಗೆಯು ಸಾಮಾನ್ಯವಾಗಿ ಹಾವಳಿಯನ್ನು ಉಂಟುಮಾಡುವುದು. ಅದು ಸುಶಾಂತ ಮನಸ್ಸಿನ ಚೈತನ್ಯದ ಒಂದು ಭಾಗವಾಗಿದೆ. ಆದುದರಿಂದ ಉದಾರವಲ್ಲದ ಭಾವನೆಗಳನ್ನು ಹೊರಡಿಸುವ ತುಟಿಗಳ ಮತ್ತು ಹೃದಯದ ಬಗ್ಗೆ ಜಾಗರೂಕತೆ ವಹಿಸಬೇಕು. ತುಟಿಯ ಹೇಳಿಕೆಗಳು ಕೆಟ್ಟದಾದ ಭಾವೋದ್ರೇಕದ ಅಗ್ನಿಯನ್ನು ಹೊತ್ತಿಸುತ್ತದೆ ಮತ್ತು ಹಲವುಬಾರಿ ಹಾನಿಯನ್ನು ಉಂಟುಮಾಡುತ್ತದೆ. ನೂತನ ಸೃಷ್ಟಿಯಾದ ಕ್ರೈಸ್ತ ಸಭೆಗೆ ಈ ಮುಖ್ಯವಾದ ಪ್ರಸ್ತಾಪದ ಬಗ್ಗೆ ಅದರ ಶಿರಸ್ಸಾಗಿರುವ ಕರ್ತನ ಸೂಕ್ತ ರೀತಿಯ ನಿರ್ದೇಶನಗಳಿವೆ. ಅವರು ಏಕಾಂತವಾಗಿ, ಖಾಸಗಿಯಾಗಿ ಯಾವುದೇ ಪೂರ್ವಭಾವಿ ಸಮಾಲೋಚನೆಯಿಲ್ಲದೆ ಅಥವಾ ಯಾರೊಂದಿಗೂ ಮಾತನಾಡದೆ ಹಾನಿಮಾಡುವ ವ್ಯಕ್ತಿಯ ಬಳಿಗೆ ಹೋಗುವಾಗ ದೇವರ ಪ್ರೀತಿಯ ಆತ್ಮ ಅವರನ್ನು ಆವರಿಸಿಕೊಂಡಿರುತ್ತದೆ. ಅವರು ಆ ವ್ಯಕ್ತಿಯು ತನ್ನ ನಡತೆಗಾಗಿ ನಾಚಿಕೆಪಟ್ಟುಕೊಳ್ಳಬೇಕೆಂದಾಗಲೀ, ಆತನನ್ನು ನಿಂದಿಸಲಿಕ್ಕಾಗಲೀ ಅಥವಾ ಆತನನ್ನು /ಆಕೆಯನ್ನು ಬೇರೆ ರೀತಿಯಾಗಿ ಶಿಕ್ಷಿಸಲಿಕ್ಕಾಗಲೀ ಹೋಗದೆ ತಪ್ಪಿನ ನಿಲುಗಡೆಯನ್ನು ಹಾಗೂ ಸಾಧ್ಯವಾದಲ್ಲಿ ಈಗಾಗಲೇ ಉಂಟಾಗಿರುವ ಹಾನಿಗೆ ಪರಿಹಾರ ಪಡಕೊಳ್ಳುವ ಸಲುವಾಗಿ ಹೋಗುತ್ತಾರೆ. ತಪ್ಪಿನ ಬಗ್ಗೆ ಇತರರಿಗೆ ಮೊದಲು ಅಥವಾ ನಂತರ ಹೇಳುವುದು ನಮ್ಮ ಶಿರಸ್ಸಾಗಿರುವ ಕರ್ತನ ಮಾತು ಮತ್ತು ಚೈತನ್ಯಕ್ಕೆ ವಿರೋಧವಾಗಿ ನಿರ್ದಯವೆನಿಸುತ್ತದೆ, ಅಪ್ರಿಯವಾಗುತ್ತದೆ. ಬುದ್ಧಿವಾದ ಕೇಳುವುದಕ್ಕಾದರೂ ವಿಷಯವನ್ನು ಹೇಳಲಾಗದು; ನಮಗೆ ಕರ್ತನ ಬುದ್ಧಿಮಾತುಗಳಿವೆ, ನಾವು ಅವನ್ನು ಅನುಸರಿಸಬೇಕು. ಪ್ರಕರಣವು ವಿಚಿತ್ರವಾದುದಾದಲ್ಲಿ ಹಿರಿಯರಲ್ಲಿ ಅತಿ ಬುದ್ಧಿವಂತರಿಂದ ಬುದ್ಧಿಮಾತುಗಳನ್ನು ಪೂರ್ವಕಲ್ಪಿತ ಪ್ರಕರಣವೆಂಬಂತೆ ನಿಜವಾದ ತೊಂದರೆ ಮತ್ತು ತಪ್ಪಿತಸ್ಥನ ಬಗ್ಗೆ ಹೇಳದೆ ಪಡೆಯಬಹುದು.

ತೊಂದರೆಯು ಕಠಿಣತರವಾದುದಾಗದೇ ಇದ್ದಲ್ಲಿ ತಪ್ಪಿತಸ್ತನಿಗೆ ವೈಯುಕ್ತಿಕ ಮನವಿ ಮಾಡಿ ಅದನ್ನು ಆತನು ಕೇಳಲಿ, ಅಥವಾ ಶರಣಾಗಲು ನಿರಾಕರಿಸಲಿ ಸಂಗತಿಯನ್ನು ಅಲ್ಲಿಗೇ ನಿಲ್ಲಿಸಬೇಕು. ಆದರೆ ಎರಡನೆಯ ಹಂತದ ಅಗತ್ಯತೆ ಕಂಡುಬಂದಲ್ಲಿ ಸಭೆ ಕೂಡಲು ಕರೆದವರಿಗೆ ಅವರು ಆರೋಪಿಯ ಮತ್ತು ಆರೋಪಿಸಿದವರ ಮುಂದೆ ಕೂಡಿ ಬರುವವರೆಗೆ ತೊಂದರೆಯ ಯಾವುದೇ ವಿವರಣೆಯನ್ನು ನೀಡಬಾರದು. ಈ ರೀತಿಯಲ್ಲಿ ತಪ್ಪು ವರದಿಯ ಮಾತುಗಳನ್ನು ತಪ್ಪಿಸಬಹುದು ಮತ್ತು ಸಮಿತಿಯ ಸದಸ್ಯರು ಯಾವುದೇ ಪಕ್ಷಪಾತವಿಲ್ಲದೆ ಬಂದು ಎರಡು ಪಕ್ಷದವರೊಂದಿಗೆ ಸೂಕ್ತ ಸಮಾಲೋಚನೆಗಳನ್ನು ವಿವೇಕ ಪೂರ್ವಕವಾಗಿ ನಡೆಸಬಹುದು. ಯಾಕೆಂದರೆ ತೊಂದರೆಯು ಎರಡೂ ಕಡೆಯೂ ಅಥವಾ ಬಹುಮಟ್ಟಿಗೆ ಆರೋಪ ಮಾಡಿದವರಿಗೆ ಇರಬಹುದು. ಎಲ್ಲಾ ಘಟನೆಗಳಲ್ಲಿ ಅಂತಹ ಹಿತಕರವಾದ ನಡವಳಿಕೆಯಿಂದ ಆರೋಪಿಯು ಸಂಪ್ರೀತಿಗೊಳ್ಳುತ್ತಾನೆ ಮತ್ತು ಸಮಾಲೋಚಕರಿಗೆ ಆತನ ಕ್ರಮವು ತಪ್ಪು ಎಂದು ಕಂಡು ಬಂದಲ್ಲಿ ಆತನು ಬೇಗನೇ ಶರಣಾಗುವ ಸಾಧ್ಯತೆಗಳಿರುತ್ತವೆ. ಆದರೆ ಸಮಿತಿಯವರಿಂದ ತಪ್ಪಿತಸ್ತನೆಂದು ಕಂಡುಬಂದಾತನು ಶರಣಾಗಲೀ, ಆಗದಿರಲಿ ಇಡೀಸಂಗತಿಯು ಇನ್ನೂ ಕಟುವಾಗಿ ಖಾಸಗಿಯಾದುದು ಮತ್ತು ಸಾಕಷ್ಟು ಮುಖ್ಯವಾದುದೆನಿಸುವ ವರೆಗೂ ಯಾರಿಗೂ ಈ ಬಗ್ಗೆ ಏನೂ ಹೇಳಬಾರದು. ಇದನ್ನು ಸಭೆಯ ಮುಂದೆ ತಂದು ಅಂತಿಮವಾಗಿ ನಿರ್ಣಯಿಸತಕ್ಕದ್ದು. ಆಗ ಮೊದಲ ಬಾರಿಗೆ ಎಲ್ಲಾ ಸಂತರುಗಳಿಗೆ ಮಾತ್ರವೇ ಇದು ಖಾಸಗಿ ಸ್ವತ್ತಾಗುತ್ತದೆ. ಅವರು ಸಂತರುಗಳು ಆಗಿರುವುದರಿಂದ ಯಾರೊಬ್ಬರ ಬಲಹೀನತೆ ಮತ್ತು ಪಾಪವನ್ನು ಮಾನ್ಯಮಾಡಿ ಅನುಪಾತವಾಗಿ ಅವರು ಅಗತ್ಯಕ್ಕಿಂತ ಹೆಚ್ಚೇನನ್ನೂ ಯಾರಿಗೂ ಹೇಳುವುದಿಲ್ಲ.

ಸಭಾ ನ್ಯಾಯಾಲಯದ ಕಂಡುಹಿಡಿಯುವಿಕೆ ಜಾರಿಯಲ್ಲಿರುವಾಗ ಸಂಗತಿಯು ಪ್ರತಿಯೊಬ್ಬ ವ್ಯಕ್ತಿಯ ಬಳಿ ಇರುತ್ತದೆ. ಈ ಕಾರಣದಿಂದ ಪ್ರತಿಯೊಬ್ಬನೂ ನಿರ್ಣಯದ ನ್ಯಾಯವನ್ನು ತನ್ನ ಮಟ್ಟಿಗೆ ಗ್ರಹಿಸಿಕೊಳ್ಳಲು ಸಾಧ್ಯ. ಸಾಂಗತ್ಯವನ್ನು ತೊರೆಯುವ ಶಿಕ್ಷೆಯು ನೀತಿವಂತಿಕೆಯನ್ನು ಸರಿಪಡಿಸುವ ದೆಸೆಯಲ್ಲಿ ವಿನ್ಯಾಸಗೊಂಡಿದೆ ಮತ್ತು ಇದು ಕರ್ತನಿಂದ ನಿರ್ದೇಶಿಸಲ್ಪಟ್ಟಿದೆ. ಇದು ಪ್ರೀತಿಯಿಂದ ಅಕ್ರಮವಾಗಿ ನಡೆಯುವವರನ್ನು ಪ್ರತ್ಯೇಕಗೊಳಿಸಿ ಸಭೆಯ ರಕ್ಷೆಯನ್ನು ಜಾರಿಗೊಳಿಸುತ್ತದೆ. ಇದೊಂದು ಶಾಶ್ವತವಾದ ಪ್ರತ್ಯೇಕತೆ ಎಂದು ಪರಿಗಣಿಸದೆ, ದೋಷಿಯು ತನ್ನ ತಪ್ಪನ್ನು ಒಪ್ಪಿಕೊಂಡು ಅವುಗಳನ್ನು ತಿದ್ದುಕೊಳ್ಳುವವರೆಗೆ ಮಾತ್ರವೇ ಇರತಕ್ಕದ್ದು ಎಂದು ತಿಳಿಯತಕ್ಕದ್ದು.

## ಹಿರಿಯರ ವಿರುದ್ಧ ದೋಷಾರೋಪಣೆ
## Accusations Against Elders

**"ಸಭೆಯ ಹಿರಿಯನ ಮೇಲೆ ಯಾರಾದರೂ ದೂರು ಹೇಳಿದರೆ ಇಬ್ಬರು ಮೂವರು ಸಾಕ್ಷಿಗಳಿದ್ದ ಹೊರತಾಗಿ ಅದನ್ನು ಮನಸ್ಸಿಗೆ ತೆಗೆದುಕೊಳ್ಳಬೇಡ " (1 ತಿಮೋ. 5: 19)**

**ಅಪೋಸ್ತಲನು ಈ ಹೇಳಿಕೆಯಲ್ಲಿ ಎರಡು ತತ್ವಗಳನ್ನು ಮಾನ್ಯಮಾಡುತ್ತಾನೆ:–**

(1) ಹಿರಿಯನು ಈಗಾಗಲೇ ಉತ್ತಮ ಮತ್ತು ಕುಲೀನ ಗುಣನಡತೆಯುಳ್ಳವನೆಂದು, ವಿಶೇಷವಾಗಿ ಸತ್ಯನಿಷ್ಠೆ ಮತ್ತು ದೈವಭಕ್ತಿಯುಳ್ಳವನೆಂದು ಸಭೆಯವರಿಂದ ಗುರುತಿಸಲ್ಪಟ್ಟಿದ್ದಾನೆ.

(2) ಅಂತಹ ವ್ಯಕ್ತಿಗಳು ಸಭೆಯಲ್ಲಿ ಪ್ರಾಮುಖ್ಯತೆ ಹೊಂದಿರುವ ಕಾರಣ ವಿರೋಧಿಯು ಅವರ ಮೇಲೆರಗಲು ಅವರನ್ನು ತನ್ನ ವಿಶೇಷ ವಸ್ತುವನ್ನಾಗಿ ಅಂದರೆ, ಮತ್ಸರ, ದ್ವೇಷ, ಹಗೆತನ ಮತ್ತು ಯಾವುದೋ ಕಲಹದ ಭಾಗವನ್ನಾಗಿ ಬಳಸಿಕೊಳ್ಳಬಹುದು.

ಕರ್ತನು ಸಹಾ ಈ ವಿಷಯದಲ್ಲಿ ಮುನ್ನೆಚ್ಚೆರಿಸುತ್ತಾ "ಲೋಕವು ನಿಮ್ಮ ಮೇಲೆ ದ್ವೇಷಮಾಡುವುದಾದರೆ ಆಶ್ಚರ್ಯ ಪಡಬೇಡಿರಿ, ಅದು ಮೊದಲು ನನ್ನ ಮೇಲೆ ದ್ವೇಷ ಮಾಡಿತೆಂದು ತಿಳಿಯಿರಿ" (ಯೋಹಾನ 15: 18 ಮತ್ತು 1 ಯೋಹಾನ 3:13) "ಅವರು ಮನೆಯ ಯಜಮಾನನಿಗೆ ಬೆಲ್ಜಬೂಲನೆಂದು ಹೆಸರಿಟ್ಟ ಮೇಲೆ ಆತನ ಮನೆಯವರನ್ನು ಏನೆಂದಾರು?" (ಮತ್ತಾಯ 10:25) ಎಂದಿದ್ದಾನೆ. ಸಹೋದರನು ಹೆಚ್ಚು ಪ್ರಾಮಾಣಿಕನೂ ಶಕ್ತನೂ ಆದಷ್ಟೂ ಆತನು ತನ್ನ ಒಡೆಯನ ಪ್ರತಿರೂಪಕ್ಕೆ ಹತ್ತಿರವಾಗಿದ್ದಾನೆ ಮತ್ತು ಹಿರಿತನದ ಆಯ್ಕೆಗೆ ಯೋಗ್ಯನಾಗಿದ್ದಾನೆ ಹಾಗೂ ಪ್ರಾಮಾಣಿಕ ಹಿರಿಯನಾಗಿದ್ದಾನೆ. ಆತನಿಗೆ ಶತ್ರುಗಳಿರುವುದು ನಿಶ್ಚಯ – ಸೈತಾನನು ಮತ್ತು ಆತನ ದೂತರುಗಳು ಮಾತ್ರವಲ್ಲ, ಇನ್ನೂ ಅನೇಕರನ್ನು ಸೈತಾನನು ಆತನ ವಿರುದ್ಧ ಎತ್ತಿಕಟ್ಟಬಹುದು.

ಯಾವುದೇ ವ್ಯಕ್ತಿಯ ಮಾತುಗಳನ್ನು ಖಂಡಿಸಲು ಈ ಕಾರಣಗಳು ಒಬ್ಬ ಹಿರಿಯನಿಗೆ ಖಾತರಿಯಾಗಬಹುದು ಇಲ್ಲವಾದಲ್ಲಿ ಆತನ ಜೀವಿತವು ಏಕರೂಪವಾಗಿ ಕಂಡುಬರಬಹುದು. ಕೇಳಿಕೆಯ ಮಾತು ಅಥವಾ ವದಂತಿಗಳನ್ನು ಪರಿಗಣಿಸಲೇಬಾರದು ಯಾಕೆಂದರೆ ಕರ್ತನ ನಿಯಮಗಳ ಸರಿಯಾದ ತಿಳಿವಳಿಕೆ ಇರುವ ಯಾವ ಜೊತೆಗಾರನೂ ವದಂತಿಗಳನ್ನು ಹಬ್ಬಿಸುವುದಿಲ್ಲ (ಮತ್ತಾಯ 18:15 ನೋಡಿರಿ) ಮತ್ತು ಒಡೆಯನ ನಿರ್ದೇಶನಗಳನ್ನು ಅಪಮಾನಗೊಳಿಸುವವನ ಮಾತುಗಳ ಮೇಲೆ ಭರವಸ ವಿಡುವುದಿಲ್ಲ. ಕೇಳಲೇಬೇಕೆಂದಿದ್ದರೆ ಅಪವಾದ ಮಾಡುವವರು ತಕ್ಕ ಸಾಕ್ಷಿಗಳನ್ನು ಹೊಂದಿರಬೇಕು. ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳು ಅಪವಾದ ಹೊರಿಸಿದರೂ ಈಗಾಗಲೇ ಹೇಳಿದಂತೆ ಪ್ರಕರಣವನ್ನು ಆಲಿಸುವ ಮಾರ್ಗವಲ್ಲದೆ ಬೇರೆ ಮಾರ್ಗವಿರುವುದಿಲ್ಲ. ಹಿರಿಯನ ಮೇಲೆ ತಪ್ಪು ಹೊರಿಸುವ ಯಾವ ಒಬ್ಬ ವ್ಯಕ್ತಿಯೂ ವೈಯುಕ್ತಿಕ ಸಮಾಲೋಚನೆಯು ವಿಫಲವಾದ ಮೇಲೆ ಇಬ್ಬರು ಅಥವಾ ಮೂವರನ್ನು ಕರಕೊಂಡುಹೋದಾಗ ಆ ಮೂಲಕ ಅವರು ಮೊಂಡತನಕ್ಕೆ ಸಾಕ್ಷಿಗಳಾಗುತ್ತಾರೆ. ನಂತರ ಸಂಗತಿಯು ಇನ್ನೂ ಸುಧಾರಿಸಲ್ಪಡದೆ ಇರುವಾಗ ತಿಮೋಥೆಯನಾಗಲೀ ಅಥವಾ ಬೇರೆಯವರ ಮೂಲಕವಾಗಿ ಸಭೆ ಮುಂತಾದವುಗಳ ಮುಂದೆ ತರಬಹುದು.

ನಿಜವಾಗಿಯೂ, ಎರಡು ಅಥವಾ ಮೂರು ಸಾಕ್ಷಿಗಳ ಸಮ್ಮುಖದಲ್ಲಿ ಮಾಡುವ ಆಪಾದನೆಯು ಎಲ್ಲ ಸದಸ್ಯರ ಸಂಬಂಧದಲ್ಲಿನ ಅವಶ್ಯಕತೆಯಾಗಿದ್ದು ಇದು ಯಾವ ಸಹೋದರನಿಗೂ ನಿಖರವಾಗಿರುವ ಎಲ್ಲಾ ಹಕ್ಕುಗಳೂ ಸವಲತ್ತುಗಳೂ ಹಿರಿಯರಿಗೂ ಇರಬೇಕೆಂದು, ಅಪೋಸ್ತಲರು ಕೇವಲ ಹೇಳುತ್ತಾರೆಂಬ ಗ್ರಹಿಕೆಗೆ ಎಡೆಮಾಡಿ ಕೊಡಬಹುದು. ಒಬ್ಬ ಹಿರಿಯನು ಸಭೆಯಲ್ಲಿ ಮಾತ್ರವಲ್ಲ ಸಭೆಯ ಹೊರಗೂ ಉತ್ತಮ ಹೆಸರನ್ನು ಹೊಂದಿರಬೇಕೆಂಬ ಮತ್ತು ಒಬ್ಬ ಹಿರಿಯನ ಪ್ರಭಾವಶಾಲಿ ಸ್ಥಾನಮಾನದ ನಿಮಿತ್ತ ಆತನ ಮೇಲೆ ಸಣ್ಣ ಪುಟ್ಟ ಅಪವಾದಗಳನ್ನು ಮಾತ್ರವೇ ಮಾಡಬೇಕೆಂಬ ಕಾರಣದಿಂದ ಕೆಲವರು ಇದನ್ನು ಪಟ್ಟಾಗಿ ಹಿಡಿಯಲು ಒಲವು ತೋರಿಸುತ್ತಾರೆ. ಆದರೆ ಅಪೋಸ್ತಲರ ಮಾತುಗಳು ಒಬ್ಬ ಹಿರಿಯನ ಅವಕಾಶಗಳು ಇತರರಿಗೆ ಸಮಾನವಾಗಿಯೇ ಇರಬೇಕು ಎಂದು ನಿರ್ಧರಿಸುತ್ತವೆ.

ಸಾಕ್ಷಿಗಳೆಂಬ ಈ ವಿಚಾರವನ್ನು ಪ್ರತಿಯೊಬ್ಬ ನೂತನ ಸೃಷ್ಟಿಯ ಮನಸ್ಸಿನ ಮೇಲೆ ಆಳವಾಗಿ ಮೂಡಿಸಬೇಕು. ಬೇರೆಯವರು ಏನನ್ನು ಕೇಳ ಬಯಸುತ್ತಾರೆ, ಅವರು ಚಾಡಿಯಾಗಿ ಏನನ್ನು ಹೇಳುತ್ತಾರೆ ಎಂಬುದನ್ನು ಲಕ್ಷಿಸಲೂಬಾರದು ಮತ್ತು ಅವನ್ನು ಅಂಗೀಕರಿಸಲೂಬಾರದು. ಇಬ್ಬರಾಗಲೀ, ಮೂವರಾಗಲೀ ಕರ್ತನ ನಿರ್ದೇಶನವನ್ನು ಅನುಸರಿಸಿ ಅದು ಹಿಂದಿನಿಂದ ಮಾಡಿದ ದೂರು ಅಥವಾ ಚಾಡಿಯಾಗಿರದೆ ಯಾರ ಮೇಲಾದರೂ ಅಪವಾದವನ್ನು ಹೊರಿಸಿದಲ್ಲಿ ಅದು ಸಭೆಯ ಸೂಚನೆಯಂತೆ ಇರುವುದಾದಲ್ಲಿ ಆಗ ಅದನ್ನು ನಂಬಲಾಗದಿದ್ದರೂ ಅದನ್ನು ಸಭೆಯು ಆಲಿಸುವ ಯೋಗ್ಯ ಸಮಯವಾಗಿದೆ. ಎರಡು ಪಕ್ಷದವರನ್ನು ಪರಸ್ಪರರ ಸಮ್ಮುಖದಲ್ಲಿಯೇ ಆಲಿಸಬೇಕು ಮತ್ತು ಒಂದು ದೈವಿಕ ನಿರ್ಣಯವನ್ನು ಮತ್ತು ತಪ್ಪಿತಸ್ಥನು ಪುನಃ ನೀತಿವಂತನಾಗುವಂತೆ ಆತನನ್ನು ಹೊರಗಿನ ಕತ್ತಲೆಗೆ ದೊಬ್ಬದಂತಹ ಮಾತುಗಳಿಂದ ಎಚ್ಚರಿಕೆಯನ್ನು ನೀಡಬೇಕು.

## ಪ್ರಸಂಗಿಸಬೇಕೆಂದು ತಪ್ಪಾಗಿ ತಿಳಿದ ಕರೆ
## Mistaken Calls to Preach

ಗಣನೀಯ ಸಂಖ್ಯೆಯ ವ್ಯಕ್ತಿಗಳು ತಮಗೆ ಸುವಾರ್ತೆಯನ್ನು ಪ್ರಸಂಗಿಸಬೇಕೆಂಬ ಕರ್ತನ ಕರೆ ಬಂದಿದೆಯೆಂದು ಹೇಳಿಕೊಳ್ಳುತ್ತಾರೆ. ಬಹುಶಃ ಅವರು ಮುಂದಿನ ಗಳಿಗೆಯಲ್ಲಿ ಯಾಕೆಂದು ತಮಗೆ ತಿಳಿದಿರುವುದಿಲ್ಲ ಮತ್ತು ತಮಗೆ ಸೇವೆಯ ಯಾವುದೇ ವಿಶೇಷ ಅರ್ಹತೆಗಳಿರುವುದಿಲ್ಲ ಮತ್ತು ಆ ಪರಿಸ್ಥಿತಿಗಳು ತಮ್ಮನ್ನು ಈ "ಕರೆಗೆ" ಓಗೊಡಲು ಸದಾ ಅಡ್ಡಿಪಡಿಸುತ್ತಿವೆ ಎಂಬುದನ್ನೂ ಸೇರಿಸುತ್ತಾರೆ. ಕರೆಯ ಸ್ವಭಾವದ ಬಗ್ಗೆ ಪ್ರಶ್ನಿಸಿದಾಗ ಅದು ಕೇವಲ ಕಲ್ಪನೆ ಅಥವಾ ಊಹೆ ಎಂಬ ಸತ್ಯವು ಹೊರಬೀಳುತ್ತದೆ. ಕೆಲವರು ಕೆಲವೊಮ್ಮೆ ತಮ್ಮ ಅನುಭವದಲ್ಲಿ ಸಂಪ್ರೀತರಾದಂತೆ ಭಾವಿಸುತ್ತಾರೆ (ಬಹುಶಃ ಕ್ರೈಸ್ತರಾಗುವ ಮೊದಲೇ) ಮತ್ತು

ತಮ್ಮನ್ನು ದೇವರಿಗೆ ಮತ್ತು ಆತನ ಸೇವೆಗೆ ಒಪ್ಪಿಸಿಕೊಡಬೇಕೆಂದು ನಿರ್ಧರಿಸಿಬಿಡುತ್ತಾರೆ. ಕ್ರಿಸ್ತನ ಸೇವೆಯ ಆದರ್ಶವು ಅವರ ನಾಮಾಂಕಿತ ಸಭೆಯ ಅನುಭವ ಮತ್ತು ಆತನ ಕುಟುಂಬದವರು ಹಾಜರಾದ ಪ್ರಸಂಗಿಯ (Preacher) ಕೂಟವನ್ನು ಪ್ರತಿನಿಧಿಸುತ್ತದೆ. ಮತ್ತೊಬ್ಬರು ತಮ್ಮ ಸಮ್ಮತಿಸುವ ಶರೀರವು ಪ್ರಭಾವಗೊಂಡಿದೆ ಎಂದು ಭಾವಿಸಿಕೊಂಡು – ನಾನು ಆ ನಿಲುವಂಗಿಗಳನ್ನು ಧರಿಸಿ ಗೌರವ, ಬಿರುದು ಮತ್ತು ಸಂಬಳವನ್ನು ಅದು ಎರಡನೆಯ ಅಥವಾ ಮೂರನೆಯ ದರ್ಜೆಯದಾದರೂ ಆಗಿದ್ದಿರಬಹುದು ಅದನ್ನು ಸ್ವೀಕರಿಸಲು ಎಷ್ಟೋ ಇಷ್ಟ ಪಡುತ್ತೇನೆ ಎಂದು ಹೇಳಿಕೊಳ್ಳುತ್ತಾರೆ. ಹೆಚ್ಚಾದ ಸ್ವಗೌರವವನ್ನು ಹೊಂದಿದ್ದರೂ ಆತನು ಇನ್ನೂ ಹೆಚ್ಚು ಪ್ರಭಾವಗೊಂಡಿದ್ದೇನೆ ಎಂದು ಭಾವಿಸುತ್ತಾ ಆಯ್ದುಕೊಂಡ ಅಪೋಸ್ತಲರುಗಳು ಯಾವ ಮೇಧಾಶಕ್ತಿಯನ್ನಾಗಲೀ ಹೊಂದಿರದೆ ಹೆಚ್ಚಿನ ತಿಳುವಳಿಕೆಯೂ ಇಲ್ಲದವರಾಗಿದ್ದಂತೆ ತನಗೂ ಹೆಚ್ಚಿನ ಅರ್ಹತೆ ಇಲ್ಲವಾದರೂ ದೇವರು ತನ್ನನ್ನು ಮನದಲ್ಲಿ ವಿಶೇಷವಾಗಿಟ್ಟುಕೊಂಡು ಆರಿಸಿಕೊಂಡಿದ್ದಾನೆ ಎಂದು ನೆನಸುತ್ತಾರೆ. ದೇವರು ಅಂಥಹ ಎಷ್ಟೊ ಮಂದಿಗೆ ಕೃಪೆತೋರಿಸಿ ತನ್ನ ಉದ್ಧೇಶಗಳಿಗೆ ಬಳಸಿಕೊಂಡಿರಬಹುದು. ಆದರೆ ಆತನು ಅವರ ಅಭಿಲಾಶೆಗಳಿಗೆ ತನ್ನ ಮಾರ್ಗವನ್ನು ತೆರೆಯದೆ ಇದ್ದರೂ ತಮಗೆ ಪ್ರಸಂಗಿಸುವ ಕರೆ ದೊರೆತಿದೆ ಎಂಬ ತಪ್ಪು ಗ್ರಹಿಕೆಯನ್ನು ಅವರು ಹೊಂದಿದ್ದಾರೆ .

ಈಗಾಗಲೇ ನಿಮ್ಮ ಗಮನಕ್ಕೆ ತಂದಿರುವಂತೆ ನೂತನ ಸೃಷ್ಟಿಯ ಪ್ರತಿಯೊಬ್ಬರೂ ಪ್ರಸಂಗಿಸಲು ಕರೆ ಹೊಂದಿದ್ದಾರೆ. ಅದು ಅವರ ಅಭಿಲಾಶೆ ಅಥವಾ ಕಲ್ಪನೆಗಳಿಗನುಸಾರವಾದುದಲ್ಲ. ಆದರೆ " ನೀವಾದರೋ ನಿಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು ಪ್ರಚಾರ ಮಾಡುವವರಾಗುವಂತೆ ದೇವರಾದುಕೊಂಡ ಜನಾಂಗವೂ ರಾಜವಂಶಸ್ಥರಾದ ಯಾಜಕರೂ ಮೀಸಲಾದ ಜನವೂ ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ" (1 ಪೇತ್ರ 2:9) ಎಂಬ ವಾಕ್ಯಕ್ಕನುಸಾರ. ಈ ಕರೆಯು ಸತ್ಯದ ಆತ್ಮನಿಂದ ಹುಟ್ಟಿರುವ ಸ್ತ್ರೀ–ಪುರುಷರು, ದಾಸತ್ವ–ಸ್ವತಂತರರು, ಬಡವ–ಶ್ರೀಮಂತರು, ವಿದ್ಯಾವಂತ–ಅವಿದ್ಯಾವಂತರು, ಕಪ್ಪು, ಕಂದು, ಕೆಂಪು, ಹಳದಿ ಮತ್ತು ಬಿಳಿ ವರ್ಣದವರು ಎಲ್ಲರಿಗೂ ಅನ್ವಯ. ಇದಕ್ಕಿಂತಾ ಹೆಚ್ಚಿನ ಅಧಿಕಾರಾದೇಶದ ಅಗತ್ಯತೆ ಇದೆಯೋ? "ಆತನು ತನ್ನ ಬಾಯಲ್ಲಿ ನೂತನ ಕೀರ್ತನೆಯನ್ನು ಹುಟ್ಟಿಸಿದ್ದಾನೆ ಕೀರ್ತನೆ 40:3 "ಜ್ಞಾನಿಗಳು ಈ ಸಂಗತಿಗಳನ್ನು ಗಮನಿಸಿ ಯೆಹೋವನ ಕೃಪಾಕಾರ್ಯಗಳನ್ನು ಗ್ರಹಿಸಿಕೊಳ್ಳಲಿ" (ಕೀರ್ತನೆ 107:43).

ಕರ್ತನು ತನ್ನ ವಿಶೇಷ ಕಾರ್ಯಗಳಿಗಾಗಿ ಹನ್ನೆರಡು ಮಂದಿ ಅಪೋಸ್ತಲರನ್ನು ವಿಶೇಷವಾದ ರೀತಿಯಲ್ಲಿ ಆರಿಸಿಕೊಂಡನು ಎಂಬುದು ಸತ್ಯ. ಆತನು ತನ್ನ ಜನರು ತನ್ನ ಮಾತನ್ನು ಕೇಳುವವರಿಗೆ ತನ್ನ ದೇಹದ ವಿವಿಧ ಅಂಗಗಳಿಗೆ ತಕ್ಕಹಾಗೆ ತನ್ನ ಇಚ್ಛಾನುಸಾರವಾಗಿ ಕೆಲವರನ್ನು ಒಂದು ಸೇವೆಗೆ, ಮತ್ತೆ ಕೆಲವರನ್ನು ಬೇರೊಂದು ಸೇವೆಗೆ "ಅವರವರ ಸಾಮರ್ಥ್ಯದ ಪ್ರಕಾರ" (ಮತ್ತಾಯ 25:15) ನೇಮಿಸುವ ಉದ್ದೇಶವುಳ್ಳವನಾಗಿದ್ದಾನೆ. ಆದರೆ ಅನೇಕರು ತಮ್ಮಷ್ಟಕ್ಕೇ ತಾವೇ ತಮ್ಮನ್ನು ಬೋಧಕರನ್ನಾಗಿ ಮಾಡಿಕೊಳ್ಳುತ್ತಾರೆ ಎಂದು ಆತನು ಸ್ಪಷ್ಟವಾಗಿ ತೋರಿಸಿಕೊಡುತ್ತಾನೆ. ಆದರೆ ಸಭೆಯು ಆತನನ್ನು ತಮ್ಮ ನಿಜವಾದ ಶಿರಸ್ಸೆಂದು, ನಾಯಕನೆಂದು ನಿರಂತರವಾಗಿ ಆತನನ್ನು ದೃಷ್ಟಿಸುತ್ತಿರಬೇಕೆಂತಲು ಮತ್ತು ಸ್ವಯಂ ಬಯಕೆಯುಳ್ಳ ಸಹೋದರರ ಪರವಹಿಸದೇ ಇರುವುದು ಸಭೆಯ ಕರ್ತವ್ಯವೆಂದು ತೋರಿಸಿದ್ದಾನೆ. ಈ ಕರ್ತವ್ಯವನ್ನು ನಿರ್ಲಕ್ಷಿಸುವುದು ಆತನ ಮಾತುಗಳನ್ನು ನಿರ್ಲಕ್ಷಿಸಿದಂತೆ. ಆದಕಾರಣ ಇದು ಪ್ರೀತಿ ಮತ್ತು ವಿಧೇಯತೆಗಳ ಕೊರತೆಯಾಗಿದ್ದು ಅಂಥಹ ಸಭೆಯು ಆತ್ಮೀಕ ಅನಾನುಕೂಲತೆಗೂ ಸ್ವಯಂ ಸ್ಥಾಪಿತ ಬೋಧಕನ ಪ್ರತಿಕೂಲತೆಗೂ ಕಾರಣವಾಗಿದೆ.

ಇದರ ಬಗ್ಗೆ ಕರ್ತನ ನಿಯಮವು "ತನ್ನನ್ನು ಹೆಚ್ಚಿಸಿಕೊಳ್ಳುವ ಪ್ರತಿಯೊಬ್ಬನೂ ತಗ್ಗಿಸಲ್ಪಡುವನು; ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು" (ಲೂಕ 14:11)ಎಂಬ ಮಾತುಗಳಲ್ಲಿ ಸ್ಪಷ್ಟವಾಗಿದೆ. ಸಭೆಯು ಈ ನಿಯಮವನ್ನು, ಆತ್ಮನ ಈ ಚೈತನ್ಯವನ್ನು ತನ್ನ ಕರ್ತನನ್ನು ಹುಡುಕಿ ತಿಳಿಯ ಬಯಸುವ ಎಲ್ಲಾ ವಿಷಯಗಳಲ್ಲಿ ಪಾಲಿಸಬೇಕು. ಕರ್ತನ ಪದ್ದತಿಯು ಉತ್ಸಾಹ ಮತ್ತು ಪ್ರಾಮಾಣಿಕತೆಯನ್ನು ಚಿಕ್ಕ ಪುಟ್ಟ ಸಂಗತಿಗಳಲ್ಲಿ ಸಾವಧಾನವಾಗಿ ಕಾಪಾಡಿಕೊಂಡಿರುವವರನ್ನು ಮುಂದಕ್ಕೆ ತರುವುದಾಗಿದೆ.–"ಸ್ವಲ್ಪವಾದುದರಲ್ಲಿ ನಂಬಿಗಸ್ತನಾದವನು ಬಹಳವಾದದ್ದರಲ್ಲಿಯೂ ನಂಬಿಗಸ್ತನಾಗುವನು"(ಲೂಕ 16:10) "ಸ್ವಲ್ಪ ಕೆಲಸದಲ್ಲಿ ನಂಬಿಗಸ್ತನಾಗಿದ್ದಿ, ದೊಡ್ಡ ಕೆಲಸದಲ್ಲಿ ನಿನ್ನನ್ನು ಇಡುತ್ತೇನೆ; ನಿನ್ನ ಧಣಿಯ ಸೌಭಾಗ್ಯದಲ್ಲಿ ಸೇರು" (ಮತ್ತಾಯ 25: 21, 23). ಗೌರವದ ಏಣಿಯ ಅಡಿಯಲ್ಲಿ ಬಹಳಷ್ಟು ಸ್ಥಳಾವಕಾಶವಿರುತ್ತದೆ. ಇಚ್ಛೆಯುಳ್ಳವರು ಹೆಚ್ಚುಕಾಲ ಕರ್ತನ, ಸತ್ಯದ ಮತ್ತು ಸಹೋದರರ ನಮ್ರ ಸೇವೆಯ ಅವಕಾಶಗಳಿಗಾಗಿ ಕಾಯಬೇಕಾಗಿಲ್ಲ. ಆದರೆ ಇದನ್ನು ಸೊಕ್ಕಿನ ಸ್ಫೂರ್ತಿಯುಳ್ಳವರು ಉದಾಸೀನ ಮತ್ತು ನಿರ್ಲಕ್ಷ್ಯ ಮಾಡುತ್ತಾರೆ ಮತ್ತು ಮಾನವ ದೃಷ್ಟಿಯಲ್ಲಿ ಗೌರವ ತರುವಂತ ಸೇವೆಯನ್ನು ನೋಡುತ್ತಿರುತ್ತಾರೆ. ನಿಷ್ಟೆಯುಳ್ಳವರು ಯಾವುದೇ ಸೇವೆಯಲ್ಲಿ ಸಂತೋಷಿಸುತ್ತಾರೆ. ಅವರಿಗೆ ಕರ್ತನು ಅವಕಾಶಗಳ ದ್ವಾರವನ್ನೇ ತೆರೆದಿಡುತ್ತಾನೆ. ಈ ರೀತಿಯಲ್ಲಿ ನೂತನ ಸೃಷ್ಟಿಯ ಸದಸ್ಯರು ವಿಶೇಷವಾಗಿ ಮತದಾನ ನೀಡುವಾಗ, ಸಭೆಯೆಂಬ ಕ್ರಿಸ್ತನ ದೇಹದ ಅಂಗಗಳಾಗಿದ್ದು ತಮ್ಮ ಶಿರಸ್ಸಿನ ಚಿತ್ತವನ್ನು ಪ್ರಕಟಿಸುವಾಗ ಮೇಲಿನಿಂದ ಆದರ್ಶವಾಗಿರುವ ಆತನ ಚಿತ್ತವನ್ನು ಜಾಗರೂಕತೆಯಿಂದ ಪಾಲಿಸಬೇಕು.

ಸ್ವಾರ್ಥತೆಯುಳ್ಳ ಸಹೋದರನನ್ನು ಆತನು ಎಷ್ಟೇ ಸಮರ್ಥನಾಗಿದ್ದರೂ ಅಲಕ್ಷಿಸಬೇಕು. ಕಡಿಮೆ ಸಾಮರ್ಥ್ಯವಿದ್ದರೂ ನಮ್ರನಾಗಿರುವ ಸಹೋದರನನ್ನು ಹಿರಿಯನನ್ನಾಗಿ ಆಯ್ದುಕೊಳ್ಳಬೇಕು. ಗದರಿಕೆಯು ಸೌಮ್ಯವಾಗಿದ್ದಷ್ಟೂ ಆಳ್ವಿಕೆಯ ಕಾರಣದ ಬಗ್ಗೆ ಒಂದೇ ಒಂದು ಮಾತು ಹೇಳದೇ ಇದ್ದರೂ ಅದು ಎಲ್ಲರಿಗೂ

ಪ್ರಯೋಜನಕಾರಿಯಾಗಿದೆ. ಸಮರ್ಥನಾದ ಹಿರಿಯನು ಸರ್ವಾಧಿಕಾರದ ಹುಮ್ಮನಸ್ಸಿನ ನಿದರ್ಶನವನ್ನು ನೀಡುವಾಗ, ತಾನು ಸಭೆಗಿಂತ ಹೆಚ್ಚಿನವನು, ಪ್ರತ್ಯೇಕ ವರ್ಗಕ್ಕೆ ಸೇರಿದವನು ಎಂಬ ಒಲವು ತೋರುವಾಗ, ಬೋಧಿಸುವ ಹಕ್ಕು ಸಭೆಯ ಮೂಲಕವಲ್ಲ ದೈವಿಕವಾಗಿಯೇ ತನಗಿದೆ ಎಂಬ ಅಭಿಪ್ರಾಯ ನೀಡುವಾಗ ಆತನನ್ನು ಕಡಿಮೆ ಮುಖ್ಯವಾದ ಸ್ಥಾನಕ್ಕೆ ಇಳಿಸುವುದು ಅಥವಾ ಆತನು ಈ ಗದರಿಕೆಯನ್ನು ಸ್ವೀಕರಿಸಿ ಕೆಡುಕನ ಬಲೆಯಿಂದ ಪಾರಾಗುವವರೆಗೆ ಸ್ವಲ್ಪ ಕಾಲ ಎಲ್ಲಾ ವಿಶೇಷ ಸ್ಥಾನಗಳಿಂದ ಆತನನ್ನು ತೆಗೆದು ಹಾಕುವುದು ಸೂಕ್ತವೂ ಕರ್ತವ್ಯವೂ ಆಗಿದೆ.

ಇತರ ಸಾಮರ್ಥ್ಯಗಳಂತೆ ಹೆಬ್ಬಯಕೆಯು ಸಭೆಯಲ್ಲಿ ಹಾಗೂ ಈ ಪ್ರಪಂಚದಲ್ಲಿ ಅವಶ್ಯ ಎಂಬುದನ್ನು ಎಲ್ಲರೂ ನೆನಪಿನಲ್ಲಿಟ್ಟುಕೊಳ್ಳಬೇಕು. ಆದರೆ ನೂತನ ಸೃಷ್ಟಿಗಳಲ್ಲಿ ಇದು ಯಾವುದಾದರೂ ಹೆಚ್ಚಿನ ಮತ್ತು ಮಹತ್ವಾಕಾಂಕ್ಷೆಯ ಸ್ವಾರ್ಥ ಹೆಬ್ಬಯಕೆಯಾಗಬಾರದು. ಆದರೆ ಇದು ಕರ್ತನನ್ನು ಮತ್ತು ಬಹು ದೀನರನ್ನೂ ಒಳಗೊಂಡಂತೆ ಆತನ ಎಲ್ಲಾ ಜನರ ಸೇವೆ ಮಾಡುವ ಸೇವಿಸುವ ಪ್ರೀತಿಯ ಹೆಬ್ಬಯಕೆಯಾಗಿರಬೇಕು. ಸ್ವಾರ್ಥವಾದ ಹೆಬ್ಬಯಕೆಯು ಸೈತಾನನ ಪತನಕ್ಕೆ ಹೇಗೆ ಕಾರಣವಾಯಿತೆಂದು ನಾವೆಲ್ಲರೂ ಬಲ್ಲೆವು – ದೇವರ ಕೃಪೆ ಮತ್ತು ಸೇವೆಯಿಂದ ಆತನು ತನ್ನ ಸೃಷ್ಟಿಕರ್ತನ ಶತ್ರುಸ್ಥಾನಕ್ಕೆ ಮತ್ತು ದೇವರ ಎಲ್ಲಾ ನೀತಿಕೃತ್ಯಗಳ ವಿರೋಧಿ ಸ್ಥಾನಕ್ಕೆ ದೊಬ್ಬಲ್ಪಟ್ಟನು. ಅದೇ ರೀತಿಯಲ್ಲಿ ಯಾರು ಈ ಮಾರ್ಗವನ್ನು ಅನುಸರಿಸಿ "ನಾನು ದೇವರ ನಕ್ಷತ್ರಗಳಿಗಿಂತ ಎತ್ತರದ ಸ್ಥಾನಕ್ಕೆ ಏರುತ್ತೇನೆ" (ನಾನು ನನ್ನನ್ನು ದೇವರ ಮಕ್ಕಳ ಮೇಲೆ ಉನ್ನತಸ್ಥಾನದಲ್ಲಿರಿಸಿಕೊಳ್ಳುತ್ತೇನೆ) ಎಂದು ಹೇಳಿಕೊಳ್ಳುತ್ತಾ ಮಹೋನ್ನತನಂತೆ ಅವನು ದೇವರ ಅಸಮ್ಮತಿ ಮತ್ತು ಅದಕ್ಕನುಗುಣವಾಗಿ ದೇವರಿಂದ ಪರಾಧೀನತೆ ಹೊಂದುವುದು ನಿಶ್ಚಯ. ಅಂಥವರ ಪ್ರಭಾವವು ಸೈತಾನನ ಪ್ರಭಾವದಂತೆ ಹಾನಿಕರವಾದುದು. ಸೈತಾನನು ಸುರಕ್ಷಿತವಲ್ಲದ ಬೋಧಕನಾಗಿರುವಂತೆ ಆತನ ಪ್ರಭಾವದಲ್ಲಿರುವವರೆಲ್ಲರೂ ಬೆಳಕಿನಿಂದ ಕತ್ತಲೆಯೆಡೆಗೆ ನಡಿಸುವವರಾಗಿದ್ದಾರೆ. ಯಾಕೆಂದರೆ ಅವರಲ್ಲಿ ಬೆಳಕನ್ನು ಅಂಗೀಕರಿಸುವ ಮತ್ತು ಅದರ ದೂತರಾಗಿ ಉಪಯೋಗಿಸಲ್ಪಡುವ ಯೋಗ್ಯವಾದ ಮನೋವೃತ್ತಿ ಇರುವುದಿಲ್ಲ.

ಯಾವುದೇ ಸಹೋದರನಿಗೆ ನೇಮಕವಾದ ಯಾವುದೇ ದ್ವಾರವೂ ತೆರೆದಿಲ್ಲವಾದರೂ ತನಗೆ ಸಾರ್ವಜನಿಕವಾಗಿ ಪ್ರಸಂಗಿಸುವ ಕರೆ ಉಂಟೆಂದು ಯಾವಾಗಲಾದರೂ ನಿಶ್ಚಿತವಾಗಿ ಭಾವಿಸಿಕೊಂಡು ಅದನ್ನು ಆತನು ಸಭೆಯ ಸರ್ವಾನುಮತದ ಕೋರಿಕೆಯಿಲ್ಲದೆ ಅದರ ಮೇಲೆ ಹೇರಲು ಒಲವು ತೋರಿಸಿದಲ್ಲಿ ಅಥವಾ ಹಿರಿಯ ಅಥವಾ ನಾಯಕ ಸ್ಥಾನಕ್ಕೆ ಆಯ್ಕೆಗೊಂಡಲ್ಲಿ ಆ ಸ್ಥಾನವನ್ನು ಪಡಕೊಳ್ಳಲು ಬಯಸಿ ಕಾಲಕಾಲಕ್ಕೆ ಕ್ರಮಬದ್ಧವಾದ ಮತಗಳಿಲ್ಲದೆ ಅದರಲ್ಲಿ ಮುಂದುವರೆಯುವುದು ತನ್ನ ಹಕ್ಕು ಎಂದು ಭಾವಿಸಿದಲ್ಲಿ ನಾವು ಆ ಸಹೋದರನ ಪ್ರಕರಣದ ಗುಣಲಕ್ಷಣಗಳನ್ನು ಗಮನಿಸಿಲ್ಲ ಅಥವಾ ಆತನಲ್ಲಿ ತಪ್ಪಾದ ಸ್ವಯಂ ಬಯಕೆಯ ಹುಮ್ಮನಸ್ಸಿದೆ ಮತ್ತು ಆತನು ಸಭೆಯ ಯಾವ ಸೇವೆಗೂ ಯೋಗ್ಯನಲ್ಲ ಎಂದು ತಿಳಿದುಕೊಳ್ಳಬಹುದು. ಇವೆರಡರಲ್ಲಿ ಒಂದು ಘಟನೆಯಲ್ಲೂ ಪ್ರಥಮ ಅವಕಾಶದಲ್ಲಿ ಚುನಾವಣೆ ನಡೆಸುವ ಬದಲಾವಣೆ ಮಾಡುವುದು ಸೂಕ್ತ; ಈಗಾಗಲೇ ಸಲಹೆ ನೀಡಿರುವಂತೆ ವರ್ಷದ ಅಥವಾ ಕಾಲು ವರ್ಷದ ಪ್ರಥಮ ಭಾನುವಾರವು ಸುಲಭವಾಗಿ ನೆನಪಿನಲ್ಲಿಟ್ಟುಕೊಳ್ಳಬಹುದಾದ ಸರಿಯಾದ ದಿನವಾಗಿದೆ.

## "ಆಳಲಾಗದವರನ್ನು (ಸ್ವೇಚ್ಚಾಪರರನ್ನು) ಎಚ್ಚರಿಸಿ"

## "Warn Them That Are Unruly"

**"ಅಕ್ರಮವಾಗಿ ನಡೆಯುವವರಿಗೆ ಬುದ್ದಿ ಹೇಳಿರಿ, ಮನಗುಂದಿದವರನ್ನು ಧೈರ್ಯಪಡಿಸಿರಿ, ಬಲಹೀನರಿಗೆ ಆಧಾರವಾಗಿರಿ ಎಲ್ಲರಲ್ಲಿಯೂ ದೀರ್ಘಶಾಂತರಾಗಿರಿ . ಯಾರೂ ಅಪಕಾರಕ್ಕೆ ಅಪಕಾರವನ್ನು ಮಾಡದಂತೆ ನೋಡಿಕೊಳ್ಳಿರಿ; ಯಾವಾಗಲೂ ನೀವು ಒಬ್ಬರಿಗೊಬ್ಬರು ಹಿತವನ್ನು ಮಾಡುವುದಲ್ಲದೆ ಎಲ್ಲರಿಗೂ ಹಿತವನ್ನು ಮಾಡುವವರಾಗಿರಿ. (1 ಥೆಸಲೋನಿಕ 5: 14,15).**

ಈ ಎಚ್ಚರಿಕೆಯು ಹಿರಿಯರಿಗಾಗಿ ಅಲ್ಲ, ಹಿರಿಯರನ್ನೂ ಒಳಗೊಂಡಂತೆ ಸಮಗ್ರ ಸಭೆಗೆ. ಸಮಗ್ರ ಸಭೆಯು ಕರ್ತನ ನೂತನ ಸೃಷ್ಟಿಯಾಗಿ ಆತನ ಮುಂದೆ ಯೇಸುಕ್ರಿಸ್ತನ ನೂತನ ಸೃಷ್ಟಿಗಳಾಗಿ ಸಮರ್ಪಕವಾಗಿ ನಿಲ್ಲುವುದೆಂಬ ಸತ್ಯದ ಅರಿವನ್ನು ಇದು ತೆಗೆದುಕೊಳ್ಳುತ್ತದೆ. ಆದಾಗ್ಯೂ ಪ್ರತಿಯೊಬ್ಬರೂ ಮತ್ತು ಎಲ್ಲರೂ ಶಾರೀರಿಕವಾಗಿ ಅಸಂಪೂರ್ಣರಾಗಿದ್ದಾರೆ. ನಾವೆಲ್ಲರೂ ಗ್ರಹಿಸುವುದನ್ನು ಅಂದರೆ ನಮ್ಮ ಶಾರೀರಿಕ ಅಪರಿಪೂರ್ಣ ಮಟ್ಟದಲ್ಲಿ ಮತ್ತು ರೀತಿಯಲ್ಲಿ ಬದಲಾವಣೆಗಳಿವೆ ಎಂಬುದನ್ನು ಇದು ಮುಂದಕ್ಕೆ ತೋರಿಸುತ್ತದೆ. ಆದುದರಿಂದ ಈ ಲೋಕದ ಮಕ್ಕಳಲ್ಲಿರುವಂತೆ ವಿವಿಧ ಸ್ವಭಾವಗಳಿಗೆ ತಂದೆತಾಯಿಗಳಿಂದ ವಿವಿಧ ಅರೈಕೆಗಳು ಬೇಕಾಗುತ್ತವೆ. ದೇವರ ಕುಟುಂಬದಲ್ಲಿ ಇನ್ನೂ ಹೆಚ್ಚಿನ ಇಂಥಹ ವಿಸ್ತಾರವಾದ ವೈವಿಧ್ಯಮಯ ಸ್ವಭಾವಗಳಿದ್ದು ಅವುಗಳಿಗೆ ಒಂದಕ್ಕೊಂದು ವಿಶೇಷ ಪರಿಗಣನೆಯು ಅಗತ್ಯವಿರುತ್ತದೆ. ಪ್ರತಿಯೊಬ್ಬರ ಅಪರಿಪೂರ್ಣತೆಯನ್ನು ವೈಚಾರಿಕ ದೃಷ್ಟಿಯಿಂದ ಗಮನಿಸುವುದು ನಮಗೇ ಹೆಚ್ಚಿನ ಹಾನಿಮಾಡಿಕೊಂಡಂತಾಗಿ ನಮ್ಮ ಹೃದಯಗಳಲ್ಲಿ ತಪ್ಪು ಕಂಡುಹಿಡಿಯುವ ಪ್ರವೃತ್ತಿಯನ್ನು, ಮತ್ತೊಬ್ಬರ ಬಲಹೀನತೆ ಮತ್ತು ಅಸಮರ್ಪಕತೆಗಳ ಬಗ್ಗೆ ತೀವ್ರವಾದ ಕುತೂಹಲವನ್ನು ಬೆಳೆಸುತ್ತದೆ. ಇದಕ್ಕೆ ಸಮತಟ್ಟಾಗಿ ಬಹುಶಃ ನಾವು ನಮ್ಮ ಸ್ವಂತ ನ್ಯೂನತೆಗಳ ಬಗ್ಗೆ ಕುರುಡಾಗಿ ಬಿಡುತ್ತೇವೆ. ಇಂಥಹ ಟೀಕೆಯು ಸಂಪೂರ್ಣವಾಗಿ ಅಪೋಸ್ತಲರ ಎಚ್ಚರಿಕೆಯ ನಿಜವಾದ ಅರ್ಥ ಮತ್ತು ಉದ್ದೇಶಗಳಿಗೆ ವ್ಯತಿರಿಕ್ತವಾಗಿದೆ.

ಸತ್ಯದ ಆತ್ಮನಿಂದ, ಪವಿತ್ರತೆಯ ಆತ್ಮನಿಂದ, ನಮ್ರತೆಯ ಆತ್ಮನಿಂದ, ಪ್ರೀತಿಯ ಆತ್ಮನಿಂದ ಹುಟ್ಟಿರುವವರಿಗೆ ಇವನ್ನು ಸಂಬೋಧಿಸಲಾಗಿದೆ. ಈ ರೀತಿಯಲ್ಲಿ ಆತ್ಮನ ಕೃಪೆಯಲ್ಲಿ ಬೆಳೆಯುತ್ತಿರುವವರು ಮುಖ್ಯವಾಗಿ ತಮ್ಮ ಸ್ವಂತ ನ್ಯೂನತೆಗಳಿಗೆ ಹೆದರುತ್ತಾರೆ ಮತ್ತು ಅವುಗಳನ್ನು ಟೀಕಿಸುತ್ತಾರೆ; ಅದೇ ಸಮಯದಲ್ಲಿ ಬೇರೆಯವರ ಬಗ್ಗೆ ಅವರಿಗಿರುವ ಪ್ರೀತಿಯು

ಅವರಿಗೆ ಎಷ್ಟೋ ಮಾನಸಿಕ ಕ್ಷಮಾಪಣೆಗಳನ್ನು ಮತ್ತು ವಿನಾಯಿತಿಗಳನ್ನು ನೀಡುವಂತೆ ನಡಿಸುತ್ತದೆ. ಆದರೆ ಈ ಪ್ರೀತಿಯ ಉತ್ಸಾಹವು ಯುಕ್ತವಾಗಿ ಸಹೋದರ ತಪ್ಪುಗಳನ್ನು ಬಲಹೀನತೆಗಳನ್ನು ಮನ್ನಿಸುವಾಗ ಅವರಿಗೆ ಒಳ್ಳೆಯದನ್ನು ಮಾಡಲು ಎಚ್ಚರಿಕೆವಹಿಸಬೇಕು – ಕಲಹದಿಂದಲ್ಲ, ಕಚ್ಚಾಟದಿಂದಲ್ಲ, ವಾದವಿವಾದಗಳಿಂದಲ್ಲ, ಗದರಿಸುವುದರಿಂದಲ್ಲ, ತಪ್ಪು ಕಂಡುಹಿಡಿಯುವುದರಿಂದಲ್ಲ, ಒಬ್ಬೊಬ್ಬರನ್ನು ನಿಂದಿಸುವುದರಿಂದಲ್ಲ. ಸುವರ್ಣ ನಿಯಮವನ್ನು ಒಪ್ಪುವಂಥ ಪ್ರಿಯವಾದ ರೀತಿಯಲ್ಲಿ, ಸೌಮ್ಯತೆ, ಸಾಧುಸ್ವಭಾವ, ದೀರ್ಘ ಸಹಿಷ್ಣುತೆ ಮತ್ತು ತಾಳ್ಮೆ ಇವುಗಳ ಮೂಲಕ ಪ್ರತಿಯೊಬ್ಬರ ಬಲಹೀನತೆಗಳಲ್ಲಿ ವಿನಾಯಿತಿ ನೀಡುವಂತೆ ಇದು ಬಯಸುತ್ತದೆ ಮತ್ತು ಪ್ರತಿಯೊಬ್ಬರೂ ತಮ್ಮ ಸ್ವಂತ ಬಲಹೀನತೆಗಳನ್ನು ನೆನಪುಮಾಡಿಕೊಂಡು ಅವುಗಳಿಂದ ಹೊರಬರಲು ಇದು ಸಹಾಯ ಮಾಡುತ್ತದೆ.

ಆಳಲಾಗದವರನ್ನು (ಸ್ವೇಚ್ಛಾಪರರನ್ನು) ಅವರ ತಪ್ಪುಮಾರ್ಗದಲ್ಲಿ ಸಮಾಧಾನಪಡಿಸಬಾರದು, ಬೆಂಬಲಿಸಲೂ, ಪ್ರೋತ್ಸಾಹಿಸಲೂಬಾರದು; ಆದರೆ ಹೇಳಬೇಕಾದುದು ಕರುಣೆಯಿಂದ, ಪ್ರೀತಿಯಿಂದ, ಅವರನ್ನು – ದೇವರು ಕ್ರಮವ್ಯವಸ್ಥೆಯುಳ್ಳ ದೇವರಾಗಿದ್ದಾನೆ, ನಾವು ಆತನ ಸ್ವರೂಪದಲ್ಲಿ, ಕೃಪೆಯಲ್ಲಿ ಬೆಳೆಯುವ ಪ್ರಮಾಣದಲ್ಲಿ ನಾವು ಆತನ ಕ್ರಮದ ನಿಯಮಗಳನ್ನು ಪಾಲಿಸಬೇಕಾಗುತ್ತದೆ ಎಂದು ಅವರಿಗೆ ಬುದ್ಧಿಹೇಳಬೇಕು. ದೈವಿಕ ವ್ಯವಸ್ಥೆಗೆ ದೂರವಾಗುವುದು ಬಂಡಾಯಕ್ಕಿಂತ ಮಿಗಿಲಾದುದಲ್ಲವೆಂದು ಅವರಿಗೆ ಎಚ್ಚರಿಸಬೇಕು; ಪ್ರಾಪಂಚಿಕ ಜನರು ಊಹಿಸುವಂತೆ ಕೆಟ್ಟದಾದ ಸರ್ಕಾರವು ಅರಾಜಕತೆಗಿಂತ ಮೇಲಾದುದು. ಶಾಂತ ಮನಸ್ಸನ್ನು, ಪವಿತ್ರಾತ್ಮನನ್ನು ಪಡಕೊಂಡಿರುವ ದೇವಜನರು ತಮ್ಮ ಸಭೆಯಲ್ಲಿ ಇದೇ ತತ್ವವನ್ನು ಕಂಡುಕೊಳ್ಳುತ್ತಾರೆ; ದೈವೀಕ ಉದ್ದೇಶವನ್ನು ನೆರವೇರಿಸುವ ಸಾಮಾನ್ಯ ಕಾರಣಕ್ಕಾಗಿ ನಾವು ಒಬ್ಬರಿಗೊಬ್ಬರು ಒಳಪಡುವಂತೆ ಅಪೋಸ್ತಲರು ನಮಗೆ ಬುದ್ಧಿವಾದ ನೀಡುತ್ತಾರೆ. ದೇವರ ಚಿತ್ತವನ್ನು ನಿರ್ಣಯಿಸುವಾಗ ನಾವೆಲ್ಲರೂ ನಿಜವಾಗಿ ಸಂಪೂರ್ಣವಾಗಿದ್ದಲ್ಲಿ ಹಾಗೆಯೇ ಯೋಚಿಸಬಹುದು–ಆಗ ನಾವು ಒಬ್ಬರಿಗೊಬ್ಬರು ಒಳಪಡಬೇಕಾದ ಯಾವ ನಿರ್ದಿಷ್ಟವಾದ ಅಗತ್ಯವೂ ಇಲ್ಲ; ಆದರೆ ನಮ್ಮ ನಿರ್ಣಯಗಳು ಭಿನ್ನವಾದಾಗ ಪ್ರತಿಯೊಬ್ಬರೂ ಮತ್ತೊಬ್ಬರನ್ನು, ಅವರು ಗಮನಿಸುವ, ನಿರ್ಣಯಿಸುವ ದೃಷ್ಟಿಕೋನವನ್ನು ಪರಿಗಣಿಸುವ ಅಗತ್ಯವಿದೆ ಮತ್ತು ಪ್ರತಿಯೊಬ್ಬರೂ ಸಾಮಾನ್ಯ ಶಾಂತಿಯನ್ನು ಕಾಪಾಡಿಕೊಳ್ಳುವ ಸಲುವಾಗಿ ಪರಸ್ಪರ ಶರಣಾಗಬೇಕಾಗುತ್ತದೆ. ಹೌದು, ಕ್ರಿಸ್ತನ ದೇಹವೆಂಬ ಸಭೆಯಲ್ಲಿ, ಸಮಾಧಾನದ ಬಂಧನದ ಅನ್ಯೋನ್ಯತೆಯನ್ನು ಕಾಪಾಡಿಕೊಳ್ಳುವ ಸಲುವಾಗಿ ಸಿದ್ಧಾಂತಗಳ ಉಲ್ಲಂಘನೆಯನ್ನು ಹೊರತುಪಡಿಸಿ ಅಂಗೀಕರಿಸಬೇಕು.

ಆಳಲಾಗದವರನ್ನು ಅಥವಾ ಕ್ರಮತಪ್ಪಿದವರನ್ನು ಅವರ ಪರಿಸ್ಥಿತಿಯು ಬಗ್ಗೆ ಬಹುಶಃ ಸಂಪೂರ್ಣವಾಗಿ ದೂಷಿಸಲಾಗದು. ಅನೇಕರು ಕ್ರಮವಿಲ್ಲದವರಾಗಿ ಜನಿಸುತ್ತಾರೆ ಮತ್ತು ತಮ್ಮ ಉಡುಪಿನಲ್ಲಿ ಮತ್ತು ಜೀವನದ ಎಲ್ಲಾ ಸಂಗತಿಗಳಲ್ಲಿ ಅದರಂತೆ ಇರಲಿ ಎಂದು ಒಲವು ತೋರುತ್ತಾರೆ. ಆದುದರಿಂದ ಅವ್ಯವಸ್ಥೆಯು ಅವರ ಬಲಹೀನತೆಯ ಒಂದು ಭಾಗವೇ ಆಗಿಹೋಗಿದೆ. ಇದನ್ನು ನಾವು ಸಹಾನುಭೂತಿಯಿಂದ, ಕರುಣೆಯಿಂದ ಅಲೋಚಿಸಬೇಕಾಗುತ್ತದೆ. ಆದರೆ, ಹೇಗೂ ಇದರಿಂದ ದೇವರ ಸಭೆಗೆ ಹಾನಿಯಾಗದಂತೆ, ಅದರ ಉಪಯೋಗಕ್ಕೆ ಧಕ್ಕೆಯಾಗದಂತೆ, ಅದರ ಸತ್ಯದ ಅಧ್ಯಯನ ಮತ್ತು ಸೇವೆಯ ಸಹಕಾರಕ್ಕೆ ಅಡ್ಡಿಯಾಗದಂತೆ ನೋಡಿಕೊಳ್ಳಬೇಕು. ದೇವಜನರು ಇಂಥಹ ಮೃದು ಸ್ವಭಾವದವರಾಗಿದ್ದು ಅವ್ಯವಸ್ಥೆಯ ವ್ಯಕ್ತಿಗಳ ಬಗ್ಗೆ ವ್ಯವಹರಿಸುವಲ್ಲಿ ಬಲಹೀನರಾಗಿ ಕಂಡುಬರಬೇಕೆಂಬುದು ಆತನ ಚಿತ್ತವಲ್ಲ. ಕರುಣೆ ಮತ್ತು ಪ್ರೀತಿಯುಳ್ಳವರಾಗಿಯೇ ದೃಢವಾಗಿದ್ದು ಅವರಿಗೆ ಕ್ರಮಬದ್ಧತೆಯು ಪರಲೋಕದ ಪ್ರಥಮ ನಿಯಮ ಎಂಬುದನ್ನು ಅವರು ತೋರಿಸಿಕೊಡಬೇಕು. ಪರಲೋಕದ ಮನಸ್ಸುಳ್ಳವರಲ್ಲಿ ಇದು ಅತಿ ಹೆಚ್ಚಾಗಿ ಕಂಡುಬರಬೇಕು. ಸಭೆಯ ಸದಸ್ಯರಲ್ಲಿ ಒಂದಿಬ್ಬರು ದೇವರ ಕಟ್ಟುಪಾಡುಗಳಿಗೆ ಧಕ್ಕೆಯುಂಟುಮಾಡಲು ಬಿಡುವುದು ದೇವರ ವಾಕ್ಯದಲ್ಲಿ ಹೇಳಿರುವಂತೆ ಪಾಪವೆನಿಸುತ್ತದೆ ಮತ್ತು ಅದಕ್ಕೆ ಸಂಬಂಧಿಸಿದಂತೆ ಸಭಾಮಂಡಲಿಯವರು ಸಾಮಾನ್ಯವಾಗಿ ಇದನ್ನು ಅರಿತಿರುತ್ತಾರೆ.

## ಎಚ್ಚರಿಕೆ ನೀಡುವುದು ಒಂದು ಸಾಮಾನ್ಯವಾದ ಕ್ರಮವಲ್ಲ

## Admonishing Not a General Order

ಈ ಸಾಮಾನ್ಯವಾದ ಭಾಷೆಯನ್ನು ಉಪಯೋಗಿಸುವುದರ ಮೂಲಕವಾಗಿ ಅಪೋಸ್ತಲರು ಸಭೆಯ ಪ್ರತಿಯೊಬ್ಬ ವ್ಯಕ್ತಿಯೂ ಇಂಥಹ ಎಚ್ಚರಿಕೆಯನ್ನು ನೀಡಬೇಕೆಂದು ಹೇಳಿದ್ದಾನೆ ಎಂದು ಭಾವಿಸುವುದು ತಪ್ಪು, ನಿಜವಾಗಿಯೂ ಇದೊಂದು ಸೂಕ್ಷ್ಮ ವಿಚಾರವೇ ಸರಿ; ಗಮನೀಯವಾಗಿ ಕೆಲವರಿಗೆ ಮಾತ್ರವೇ ಬುದ್ಧಿವಂತಿಕೆಯಿಂದ, ಸಹಾಯವಾಗುವಂತ ಈ ಎಚ್ಚರಿಕೆ ನೀಡುವ ಮೇಧಾಶಕ್ತಿಯುಂಟು. ಸಭೆಯವರು ಹಿರಿಯರನ್ನು ಆಯ್ಕೆಮಾಡುವ ಪ್ರಕ್ರಿಯೆಯು ಆತ್ಮೀಕ ಸಂಗತಿಗಳನ್ನು ಹೆಚ್ಚಾಗಿ ಪಡೆದಿದ್ದು ಅದರೊಂದಿಗೆ ಸ್ವಾಭಾವಿಕ ಅರ್ಹತೆಗಳನ್ನು ಹೊಂದಿರುವವರನ್ನು ಸಭೆಯ ಪ್ರತಿನಿಧಿಗಳಾಗಿ ಮಾಡುವುದನ್ನು ಸೂಚಿಸುವುದಾಗಿದೆ. ಇದು ಕೂಟ ಮುಂತಾದುವುಗಳ ನೇತೃತ್ವ ವಹಿಸುವುದು ಮಾತ್ರವಲ್ಲ, ಬುದ್ಧಿವಂತಿಕೆಯಿಂದ, ಸಹಾನುಭೂತಿಯಿಂದ ಮತ್ತು ದೃಢತೆಯಿಂದ ಆ ಕೂಟಗಳು ಸುಲಲಿತವಾಗಿ ಜರಗುವಂತೆ ನೋಡಿಕೊಳ್ಳುವುದು ಮತ್ತು ಆಳಲಾಗದವರನ್ನು (ಸ್ವೇಚ್ಛಾಪರರನ್ನು) ಎಚ್ಚರಿಸುವುದು ಇವುಗಳನ್ನೊಳಗೊಂಡಿದೆ. ಇದುವೇ ಅಪೋಸ್ತಲನ ಅಲೋಚನೆಯೂ ಆಗಿದ್ದು ಈ ಕೆಳಕಂಡ ಮಾತುಗಳಲ್ಲಿ ಅದು ಸ್ಪಷ್ಟವಾಗಿದೆ : –

**"ಯಾರು ನಿಮ್ಮಲ್ಲಿ ಪ್ರಯಾಸಪಟ್ಟು ಕರ್ತನ ಕಾರ್ಯಗಳಲ್ಲಿ ನಿಮ್ಮ ಮೇಲೆ ಮುಖ್ಯಸ್ಥರಾಗಿದ್ದು ನಿಮಗೆ ಬುದ್ಧಿ ಹೇಳುತ್ತಾರೋ ಅವರನ್ನು ಲಕ್ಷಿಸಿ ಅವರ ಕೆಲಸದ ನಿಮಿತ್ತ ಅವರನ್ನು ಪ್ರೀತಿಯಿಂದ ಬಹಳವಾಗಿ ಸನ್ಮಾನವಮಾಡಬೇಕೆಂದು ನಿಮ್ಮನ್ನು ಬೇಡಿಕೊಳ್ಳುತ್ತೇವೆ" (1 ಥೆಸ. 5: 12–13)**

ದೇವ ಜ್ಞಾನವನ್ನು ಬಯಸಿ ಅದನ್ನು ಸಭಾ ಹಿರಿಯರ ಆಯ್ಕೆಯಲ್ಲಿ ಸರಿಯಾಗಿ ಉಪಯೋಗಿಸಿಕೊಂಡದ್ದೇ ಆದರೆ ಆ ರೀತಿಯಲ್ಲಿ ಆಯ್ಕೆಗೊಂಡವರು ಹೆಚ್ಚಾಗಿ ಗೌರವಾನ್ವಿತ ರಾಗುತ್ತಾರೆ; ಅನನುಭವಿಗಳನ್ನು ಆಯ್ಕೆ ಮಾಡಬೇಕಿಲ್ಲ ದಿರುವಾಗ, ಇವರುಗಳು ಮೆಚ್ಚಿಗೆ ಹೊಂದುತ್ತಾರೆ ಯಾಕೆಂದರೆ, ಪರಿಶುದ್ಧಾತ್ಮನ ಪ್ರೀತಿ, ಜ್ಞಾನ ಮತ್ತು ಸಾಧುತ್ವಗಳೊಂದಿಗೆ ಸೇವೆಮಾಡುವ ಸ್ವಾಭಾವಿಕ ವರ ಮತ್ತು ಅರ್ಹತೆಯ ವರಗಳು ಇವರಲ್ಲಿ ಅತ್ಯಧಿಕವಾದ ಪ್ರಮಾಣದಲ್ಲಿವೆ ಎಂಬ ಗ್ರಹಿಕೆ ಸಹೋದರರುಗಳಲ್ಲಿ ಉಂಟಾಗುತ್ತದೆ. "ನಿಮ್ಮೊಳಗೆ ಸಮಾಧಾನವಿರಲಿ" ಎಂದೆನ್ನುವ ಅಪೋಸ್ತಲನ ಬುದ್ಧಿ ಮಾತುಗಳ ಅರ್ಥವೇನೆಂದರೆ, ಈ ಹಿರಿಯರುಗಳನ್ನು ಸಭೆಯ ಸಾಮಾನ್ಯ ಪ್ರತಿನಿಧಿಗಳಾಗಿ ಆಯ್ಕೆ ಮಾಡಿದ ಮೇಲೆ, ಅವರು ಆಯ್ಕೆಗೊಂಡ ಸೇವೆಯನ್ನು ಮಾಡಲಿರುವರು ಮತ್ತು ಆಕ್ಷೇಪಿಸುವುದನ್ನು, ಎಚ್ಚರಿಸುವುದನ್ನು ಮುಂತಾದ ಎಲ್ಲವನ್ನೂ ತಮ್ಮ ಮೇಲೆಯೇ ತೆಗೆದುಕೊಳ್ಳಲು ಅವರು ಪ್ರಯತ್ನಿಸಲಾರರು ಎಂದು ಸಭೆಯು ಸಾಮಾನ್ಯವಾಗಿ ನಿರೀಕ್ಷಿಸುತ್ತದೆ. ನಿಜವಾಗಿಯೂ, ನಾವೀಗಾಗಲೇ ಕಂಡುಕೊಂಡಂತೆ ದೇವಜನರು ಒಬ್ಬರನ್ನೊಬ್ಬರು ವ್ಯಕ್ತಿಗತವಾಗಿ ಆಕ್ಷೇಪಿಸುವದಾಗಲೀ ಅಥವಾ ಎಚ್ಚರಿಸುವುದಾಗಲೀ ತೀರ್ಮಾನಿಸುವುದಾಗಲೀ ಮಾಡುವಂತಿಲ್ಲ. ಸಭೆಯು ಮಾತ್ರವೇ ಸಮಗ್ರವಾಗಿ ಒಬ್ಬ ಸದಸ್ಯನನ್ನು ತನ್ನ ಸಹವಾಸದಿಂದ, ಕೂಟದ ಹಿತಾರ್ಥಗಳಿಂದ ಹೊರಗೆ ಹಾಕಬಹುದು. ಈ ಪ್ರಕ್ರಿಯೆಯು ಬಹಳಷ್ಟು ವೈಯುಕ್ತಿಕವಾದ ಅನೇಕ ಹಂತಗಳ ನಂತರ ಅಂದರೆ ಸುಧಾರಣೆಯ ಎಲ್ಲ ಪ್ರಯತ್ನಗಳು ವಿಫಲವಾದ ಮೇಲೆ ಮತ್ತು ಸಭೆಯ ಅನ್ಯೋನ್ಯತೆಗೆ ತಪ್ಪಿತಸ್ಥನ ವರ್ತನೆಯಿಂದ ತೀವ್ರತರ ಗಂಡಾಂತರವುಂಟಾದಾಗ ಜಾರಿಗೆ ಬರುತ್ತದೆ. ಆದರೆ ಈಗ ನಮ್ಮ ಮುಂದೆ ಇರುವ ವಾಕ್ಯಭಾಗದಲ್ಲಿ ಅಪೋಸ್ತಲನು ಎಚ್ಚರಿಸಿ ಹೇಳುವುದೇನೆಂದರೆ – ಸಭೆಯು ತಾವು ಆಯ್ಕೆ ಮಾಡಿದ ತಮ್ಮ ಪ್ರತಿನಿಧಿಗಳು ಸಭೆಯ ಹಿತವನ್ನು ಕಾಪಾಡುವವರಲ್ಲದೆ, ಆಳಲಾಗದವರ (ಸ್ವೇಚ್ಛಾಪರರ) ವಿಷಯವು ಒಂದು ನ್ಯಾಯಾಲಯವೆಂಬಂತೆ ಸಭೆಯ"ಗಮನ"ಕ್ಕೆ ತರುವಷ್ಟರ ಮಟ್ಟಿಗೆ ಗಂಭೀರವಾಗುವವರೆಗೆ ತಾವೇ ಸೂಕ್ತ ಎಚ್ಚರಿಕೆ ನೀಡುವರು ಎಂಬುದನ್ನು ತಿಳಿದಿರಬೇಕು ಅಂದರೆ ಗ್ರಹಿಸಿಕೊಳ್ಳಬೇಕು ಅಥವಾ ಹಾಗೆ ನೋಡಬೇಕು.

## ಸಾರ್ವಜನಿಕ ಗದರಿಕೆಯು ಬಲು ಅಪರೂಪವಾಗಿರಲಿ

### Public Rebukes Rare

ಈ ಎಚ್ಚರಿಸುವಿಕೆ ಅಥವಾ ಬುದ್ಧಿಹೇಳುವಿಕೆಯನ್ನು ಕೆಲವು ಸಂಧರ್ಭಗಳಲ್ಲಿ ಸಾರ್ವಜನಿಕವಾಗಿ ಸಭೆಯವರ ಸಮಕ್ಷಮದಲ್ಲಿ ಮಾಡಬೇಕಾಗುತ್ತದೆ. ಈ ಬಗ್ಗೆ ಅಪೋಸ್ತಲನು ತಿಮೋಥೆಯನಿಗೆ "ಪಾಪದಲ್ಲಿ ನಡೆಯುವವರನ್ನು ಎಲ್ಲರ ಮುಂದೆಯೇ ಗದರಿಸು; ಇವರಿಂದ ಮಿಕ್ಕಾದವರಿಗೂ ಭಯವುಂಟಾಗುವುದು" (1ತಿಮೋಥೆ 5:20) ಎಂಬ ಸಲಹೆ ನೀಡುತ್ತಾನೆ. ಇಂಥಹ ಸಾರ್ವಜನಿಕ ಗದರಿಕೆಯು ಮಾಡಿದ ಪಾಪವು ಸಾರ್ವಜನಿಕವಾಗಿ ಗುರುತರದ್ದಾಗಿದೆ ಎಂಬ ಅಭಿಪ್ರಾಯ ವನ್ನುಂಟು ಮಾಡುತ್ತದೆ. ತುಲನಾತ್ಮಕವಾಗಿ ಕ್ರಮದ ನಿಯಮಕ್ಕೆ ಸ್ವಲ್ಪ ತಪ್ಪಿದರೂ ಹಿರಿಯರು ಪ್ರೀತಿಯ ನಿಯಮದಡಿಯಲ್ಲಿ, ಸುವರ್ಣ ನಿಯಮವು ಒಬ್ಬರನ್ನೊಬ್ಬರು ಪ್ರೀತಿಗೆ ಮತ್ತು ಉತ್ತಮ ಕಾರ್ಯಕ್ಕೆ ಉತ್ತೇಜಿಸಲು ಪರಿಗಣಿಸುವಂತೆ ನಿಶ್ಚಯವಾಗಿಯೂ ಮಾಡುವುದು. ಹೀಗೆ ಪರಿಗಣಿಸುವಾಗ ಅವರು ಖಾಸಗಿಯಾದ ಮಾತು ಖಂಡಿತವಾಗಿಯೂ ಸಾರ್ವಜನಿಕವಾದ ಬೈಗಳಕ್ಕಿಂತ ವ್ಯಕ್ತಿಗೆ ಹೆಚ್ಚು ಅನುಕೂಲಕರವೆಂದು ತಿಳಿದು ಬರುತ್ತದೆ. ಯಾಕೆಂದರೆ ಸಾರ್ವಜನಿಕ ಬೈಗಳವು ಸೂಕ್ಷ್ಮ ಮನಸ್ಸಿನ ವ್ಯಕ್ತಿಯ ಮನಸ್ಸನ್ನು ಘಾಸಿಗೊಳಿಸಬಹುದು, ಹಾನಿಗೊಳಿಸಬಹುದು. ಈ ರೀತಿಯಾಗಿ ಹಾನಿಗೊಳಿಸುವುದು ಸಂಪೂರ್ಣವಾಗಿ ಅನಗತ್ಯ. ಪ್ರೀತಿಯು ಬೇರೆ ಮಾರ್ಗಕ್ಕೇ ಕಾರಣವಾಗಬಹುದು. ಆದರೆ ಒಬ್ಬ ಹಿರಿಯನು ತೀವ್ರತರವಾದ ಪಾಪ ಮಾಡಿದವನನ್ನು ಸಾರ್ವಜನಿಕವಾಗಿ ಗದರಿಸಲೇಬೇಕಾದಾಗ ಪ್ರೀತಿಯಿಂದ, ತಪ್ಪಿತಸ್ಥನು ಇದರಿಂದ ತನ್ನನ್ನು ಸರಿಪಡಿಸಿಕೊಂಡು ಒಳ್ಳೆಯ ಮಾರ್ಗಕ್ಕೆ ಹಿಂತಿರುಗಲಿ ಎಂಬ ಉದ್ದೇಶದಿಂದಲೇ ಹೊರತು ಆತನನ್ನು ಜಿಗುಪ್ಸೆಗೊಳಿಸುವ ದೂರೀಕರಿಸುವ ಆಕಾಂಕ್ಷೆಯಿಂದಲ್ಲ. ಯಾರನ್ನಾದರೂ ಸಭೆಯ ಸೌಕರ್ಯಗಳಿಂದ ಹೊರಹಾಕುವವರೆಗೆ ಬೈಯ್ಯುವ ಹಕ್ಕು ಹಿರಿಯನಿಗಿಲ್ಲ. ಸಭೆಯು ಮಾತ್ರವೇ ಸಮಗ್ರವಾಗಿ, ಎಲ್ಲಾ ರೀತಿಯ ವಿಚಾರಣೆಗಳನ್ನು ಮಾಡಿ. ತಪ್ಪಿತಸ್ಥನು ತನ್ನನ್ನು ಸಮರ್ಥಿಸಿಕೊಳ್ಳುವ ಅಥವಾ ತನ್ನನ್ನು ತಿದ್ದಿಕೊಂಡು ಕ್ಷಮೆ ಹೊಂದಿಕೊಳ್ಳುವ ಎಲ್ಲಾ ಅವಕಾಶಗಳನ್ನೂ ನೀಡಿ, ಅವುಗಳು ವಿಫಲವಾದ ನಂತರವೇ ಈ ಮಟ್ಟದ ನಿಂದನೆಯನ್ನು ಮಾಡಬಹುದೆಂದು ನಾವೀಗಾಗಲೇ ನೋಡಿದ್ದೇವೆ. ಕ್ರಿಸ್ತನ ಸಭೆಯು ಕರ್ತನಿಂದ ಅಭಿಷೇಕಿಸಲ್ಪಟ್ಟಿದ್ದು ಒಟ್ಟಾರೆ ಅತನ ಪ್ರತಿನಿಧಿಗಳು ಮತ್ತು ಹಿರಿಯರುಗಳು ಕೇವಲ ಸಭೆಯ ಪ್ರತಿನಿಧಿಗಳು. ಇದು ಕರ್ತನ ಆಯ್ಕೆಯಾದ ಸಭೆಯ ಅತ್ಯುತ್ತಮ ವಿಚಾರಧಾರೆ. ಆದುದರಿಂದ ಇಂಥಹ ವಿಚಾರಗಳಲ್ಲಿ ಸಭೆಯ ಹಿರಿಯರಲ್ಲ, ಸಭೆಯು ನ್ಯಾಯಾಲಯವಾಗಿ ಅಂತಿಮವಾಗಿ ನಿರ್ಣಯಿಸುತ್ತದೆ. ಆದುದರಿಂದ ಹಿರಿಯರ ಕ್ರಮವನ್ನು ಸದಾ ಸಭೆಯು ಪುನರ್‌ಪರಿಶೀಲಿಸಿ ಅಗತ್ಯವಿದ್ದಲ್ಲಿ ದೇವರ ಚಿತ್ತದ ಅನ್ಯೋನ್ಯ ನಿರ್ಣಯಗಳ ಮೇರೆಗೆ ಬೇಕಾದ ತಿದ್ದುಪಡಿಗಳನ್ನು ಮಾಡಬಹುದಾಗಿದೆ.

ಪ್ರಸ್ತಾಪದ ಈ ಹಂತವನ್ನು ಪರಿಗಣಿಸುವಾಗ, ನಾವು ಕ್ಷಣಕಾಲ ನಿಂತು ಸಭೆಯು ಯಾವ ದಿಕ್ಕಿನಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ಅಥವಾ ಅದರ ಹಿರಿಯರ ಮೂಲಕವಾಗಿ ಕ್ರಮ ತಪ್ಪಿದವರನ್ನು ಎಚ್ಚರಿಸಲು ಮತ್ತು ಕಡೆಗೆ ಅವರನ್ನು ಕೂಟದಿಂದ ಹೊರಹಾಕಲು ಎಷ್ಟರವರೆಗೆ ತನ್ನ ಕರ್ತವ್ಯವನ್ನು ನಿರ್ವಹಿಸಬೇಕು ಎಂಬುದರ ಬಗ್ಗೆ ವಿಚಾರಿಸಬೇಕು. ಖಾಯಂ ಆಗಿ ಹೊರಹಾಕಲು ಸಭೆಗೆ ಅಧಿಕಾರವಿಲ್ಲ. ತನ್ನ ಸಹೋದರ ಸದಸ್ಯನಿಗೆ ಅಥವಾ ಇಡೀ ಸಭೆಯೆಂಬ ದೇಹಕ್ಕೆ ಮನನೋಯಿಸಿದ ಸಹೋದರನು ಹಿಂತಿರುಗಿ ಬಂದು " ನಾನು ನನ್ನ ತಪ್ಪು ಕ್ರಮಗಳಿಗಾಗಿ ಪಶ್ಚಾತ್ತಾಪ ಪಡುತ್ತೇನೆ ಮತ್ತು ಮುಂದಿನ ದಿನಗಳಲ್ಲಿ ಸರಿಯಾದುದನ್ನೇಮಾಡಲು ಶ್ರಮ ಮೀರಿ ಪ್ರಯತ್ನಿಸುತ್ತೇನೆ" ಅಥವಾ ಅದಕ್ಕೆ ಸರಿಸಮವಾದ ಮಾತುಗಳನ್ನು ಹೇಳುವುದಾದಲ್ಲಿ ಆತನನ್ನು ಪೂರ್ಣವಾಗಿ,

ಹೃದಯಪೂರ್ವಕವಾಗಿ ಕ್ಷಮಿಸ ಬೇಕಾಗುತ್ತದೆ. ಯಾಕೆಂದರೆ, ದೇವರು ಎಲ್ಲರ ತಪ್ಪುಗಳನ್ನೂ ಕ್ಷಮಿಸುತ್ತಾನೆಂದು ನಾವು ಬಲ್ಲೆವು. ದೇವರಿಗಲ್ಲದೆ ಬೇರೆ ಯಾರಿಗೂ ಒಬ್ಬನನ್ನು ಶಾಶ್ವತವಾಗಿ ತಳ್ಳಿಹಾಕುವ, ಕೊಂಬೆಯೊಂದನ್ನು ಬಳ್ಳಿಯಿಂದ ಕಡಿದು ಹಾಕುವ ಅಧಿಕಾರವಿರುವುದಿಲ್ಲ. "ಮರಣಕರವಾದ ಪಾಪವುಂಟು; ಈ ಪಾಪದ ವಿಷಯವಾಗಿ ಬೇಡಿಕೊಳ್ಳಬೇಕೆಂದು ನಾನು ನಿಮಗೆ ಹೇಳುವುದಿಲ್ಲ" (1 ಯೋಹಾ. 5:16) ಎಂದು ನಮಗೆ ತಿಳಿಸಲ್ಪಟ್ಟಿದೆ. ಅಂತಹ ಇಚ್ಛಾ ಪೂರ್ವಕವಾದ ಪಾಪವು ಎರಡನೆಯ ಮರಣವನ್ನುಂಟುಮಾಡುತ್ತದೆ. ಅದು ಮುಕ್ತವಾಗಿದೆ, ಎಲ್ಲರಿಗೂ ಎದ್ದು ಕಾಣುವುದಾಗಿದೆ ಮತ್ತು ಕರ್ತನ ಸಹವಾಸದಲ್ಲಿರುವ ಎಲ್ಲರಿಂದಲೂ ಗ್ರಹಿಸಬಹುದಾಗಿದೆ. ಯಾರ ಹೃದಯದಲ್ಲಿ ಏನಿದೆ ಎಂಬುದರ ಬಗ್ಗೆ ನಾವು ನಿರ್ಣಯಿಸಬಾರದು. ಯಾಕೆಂದರೆ ನಾವು ಅವರ ಮನಸ್ಸನ್ನು ಓದಲಾರೆವು. ಆದರೆ ಅವರು ಮರಣಕರವಾದ ಪಾಪವನ್ನು ಎಸಗಿದಲ್ಲಿ – ಅವರು ಅಮೂಲ್ಯವಾದ ರಕ್ತದ ಮೂಲಕವಾದ ಸಂಧಾನವನ್ನು ಅಲ್ಲಗಳೆಯುವ ಸೈದ್ಧಾಂತಿಕವಾದ ಅಪರಾಧಿಗಳಾಗಿದ್ದಲ್ಲಿ, ಅವರ ಅನೈತಿಕತೆಯಿಂದಾಗಿ ತಮ್ಮ ದೈಹಿಕ ಇಚ್ಛಾನುಸಾರ ನಡೆಯಲು ಹಿಂತಿರುಗಿರುವಲ್ಲಿ ಅವುಗಳು ಖಂಡಿತವಾಗಿಯೂ ಅವರ ತುಟಿಗಳಿಂದ ಬಾಹ್ಯ ರೀತಿಯಲ್ಲಿ ಪ್ರಕಟವಾಗುತ್ತದೆ. ತೊಳೆದ ಹಂದಿಯು ಪುನಃ ಕೆಸರಿನಲ್ಲಿ ಹೊರಳುವದಕ್ಕೆ ಹೋಯಿತು ಎಂಬಂತಾಗುತ್ತದೆ. ಈ ವಿಷಯವಾಗಿ ಬರೆಯಲ್ಪಟ್ಟಿರುವುದೇನೆಂದರೆ :

**"ಒಂದು ಸಾರಿ ಜ್ಞಾನಪ್ರಕಾಶದಲ್ಲಿ ಸೇರಿ ಪರಲೋಕದಿಂದಾದ ದಾನದ ಅನುಭವಗಳನ್ನು ಹೊಂದಿ ಪವಿತ್ರಾತ್ಮ ವರದಲ್ಲಿ ಪಾಲುಗಾರರಾಗಿ ದೇವರ ವಾಕ್ಯದ ಶ್ರೇಷ್ಠತೆಯನ್ನೂ ಮುಂದಣ ಯುಗದ ಮಹತ್ವವನ್ನೂ ಅನುಭವಿಸಿದವರು ಭ್ರಷ್ಟರಾದರೆ ಅವರಲ್ಲಿ ತಿರುಗಿ ಮಾನಸಾಂತರವನ್ನು ಹುಟ್ಟಿಸುವುದು ಅಸಾಧ್ಯ; ಯಾಕೆಂದರೆ ಅವರು ತಮ್ಮ ಪಾಲಿಗೆ ದೇವರ ಮಗನನ್ನು ಪುನಃ ಶಿಲುಬೆಗೆ ಹಾಕುವವರೂ, ಆತನನ್ನು ಎಲ್ಲರ ಮುಂದೆ ಅವಮಾನ ಪಡಿಸುವವರೂ ಆಗಿದ್ದಾರೆ" ( ಇಬ್ರಿಯ 6 :4–6)**

"ಯಾಕೆಂದರೆ ಸತ್ಯದ ಪರಿಜ್ಞಾನವನ್ನು ನಾವು ಹೊಂದಿದ ಮೇಲೆ ಬೇಕೆಂದು ಪಾಪ ಮಾಡಿದರೆ ಪಾಪ ಪರಿಹಾರಕ್ಕಾಗಿ ಇನ್ನಾವ ಯಜ್ಞವು ಇರುವುದಿಲ್ಲ; ಅತ್ಯಂತ ಭಯದಿಂದ ಎದುರು ನೋಡತಕ್ಕ ನ್ಯಾಯತೀರ್ಪು ದೇವರ ವಿರೋಧಿಗಳನ್ನು ದಹಿಸುವ ತೀಕ್ಷ್ಣವಾದ ಅಗ್ನಿಯೂ ಇವೇ ನಮ್ಮ ಮುಂದೆ ಇರುವುವು. ಮೋಶೆಯ ವಿಧಿಗಳನ್ನು ಅಸಡ್ಡೆಮಾಡಿದವನಿಗೆ ಇಬ್ಬರು ಅಥವಾ ಮೂವರು ಸಾಕ್ಷಿಗಳ ಮಾತಿನ ಮೇಲೆ ಕನಿಕರವಿಲ್ಲದೆ ಮರಣ ದಂಡನೆ ಆಗುತ್ತದಷ್ಟೆ; ಯಾವನು ದೇವಕುಮಾರನನ್ನು ತುಳಿದು ಒಡಂಬಡಿಕೆಯನ್ನು ಸ್ಥಿರಪಡಿಸಿದಂಥ ತನ್ನನ್ನು ಪವಿತ್ರ ಮಾಡಿದಂಥ ರಕ್ತವನ್ನು ಅಶುದ್ಧವೆಂದೆಣಿಸಿ ದೇವರ ಕೃಪಾವರವಾಗಿರುವ ಆತ್ಮನನ್ನು ತಿರಸ್ಕಾರ ಮಾಡಿದ್ದಾನೋ ಅವನು ಎಷ್ಟೋ ಕ್ರೂರವಾದ ದಂಡನೆಗೆ ಪಾತ್ರನಾಗ ಬೇಕೆಂಬುದನ್ನು ಯೋಚಿಸಿರಿ. ಮುಯ್ಯಿಗೆ ಮುಯ್ಯಿ ತೀರಿಸುವುದು ನನ್ನ ಕೆಲಸ, ನಾನೇ ಪ್ರತಿಫಲವನ್ನು ಕೊಡುವನೆಂದು ಹೇಳಿದಾತನನ್ನು ಬಲ್ಲೆವು; ಇದಲ್ಲದೆ ಕರ್ತನು ತನ್ನ ಜನರ ನ್ಯಾಯವನ್ನು ವಿಚಾರಿಸುವನೆಂತಲೂ ಹೇಳಿಯದೆ. ಜೀವ ಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕಿ ಬೀಳುವುದು ಭಯಂಕರವಾದದ್ದು" (ಇಬ್ರಿಯ 10:26–31) ಅಪೋಸ್ತಲನು ನಮ್ಮನ್ನು ಇಂಥಹ ವ್ಯಕ್ತಿಗಳೊಂದಿಗೆ ಯಾವುದೇ ವ್ಯವಹಾರವನ್ನೂ ಅಂದರೆ ಅವರೊಡನೆ ಕುಳಿತು ಉಣ್ಣುವುದೂ ಕುಡಿಯುವುದು, ಅವರನ್ನು ಮನೆಗಳಿಗೆ ಆಹ್ವಾನಿಸುವುದು, ಅವರಿಗೆ ಶುಭಕೋರುವುದು ಇವುಗಳನ್ನು ಮಾಡಬಾರದೆಂದು ಹೇಳುತ್ತಾನೆ :– "ಕ್ರಿಸ್ತನ ಉಪದೇಶದಲ್ಲಿ ನೆಲೆಗೊಳ್ಳದೆ ಅದನ್ನು ಅತಿಕ್ರಮಿಸಿ ಮುಂದಕ್ಕೆ ಹೋಗುವವನಿಗೆ ದೇವರ ಅನ್ಯೋನ್ಯತೆ ಇಲ್ಲ. ಆ ಉಪದೇಶದಲ್ಲಿ ನೆಲೆಗೊಂಡಿರುವವನಿಗೆ ತಂದೆ ಮತ್ತು ಮಗನ ಅನ್ಯೋನ್ಯತೆ ಉಂಟು. ಈ ಉಪದೇಶವನ್ನು ಒಪ್ಪದಿರುವ ಯಾವನಾದರೂ ನಿಮ್ಮ ಬಳಿಗೆ ಬಂದರೆ ಅವನನ್ನು ಮನೆಯೊಳಗೆ ಸೇರಿಸಿಕೊಳ್ಳಬೇಡಿರಿ. ಅವನಿಗೆ ಶುಭವಾಗಲಿ ಎಂದು ಹೇಳಬೇಡಿರಿ. ಅವನಿಗೆ ಶುಭವಾಗಲಿ ಎಂದು ಹೇಳುವವನು ಅವನ ದುಷ್ಕೃತ್ಯಗಳಲ್ಲಿ ಪಾಲುಗಾರನಾಗುತ್ತಾನೆ" (2ಯೋಹಾನ 9–11) ಯಾಕೆಂದರೆ, ಅಂಥವರನ್ನು ಸ್ವಾಗತಿಸುವವರು ಅಥವಾ ಅವರಿಗೆ ಶುಭ ಕೋರುವವರು ದೇವರ ಶತ್ರುಗಳ ಸ್ಥಾನವನ್ನು ತೆಗೆದುಕೊಂಡಿದ್ದಾರೆಂದೂ ಮತ್ತು ಕೆಟ್ಟ ಕೃತ್ಯಗಳಲ್ಲಿಯೂ, ಕೆಟ್ಟ ಸಿದ್ಧಾಂತಗಳಲ್ಲಿಯೂ ಅವರೊಂದಿಗೆ ಪಾಲುದಾರರು ಎಂದು ಭಾವಿಸಲಾಗುವುದು.

ಆದರೆ, "ಅಕ್ರಮವಾಗಿ ನಡೆಯುವ' ಇತರರ ಬಗ್ಗೆ ಕಟ್ಟುಪಾಡುಗಳು ಬೇರೆಯಾಗಿವೆ. ಈ ರೀತಿಯಲ್ಲಿ ಹೊರಹಾಕಲ್ಪಟ್ಟ ಸಹೋದರ ಅಥವಾ ಸಹೋದರಿಯನ್ನು ಶತ್ರುವೆಂದು ಭಾವಿಸದೆ ಅವರನ್ನು ಒಬ್ಬ ತಪ್ಪುಮಾಡಿದ ಸಹೋದರ/ರಿ ಎಂದು ತಿಳಿಯಬೇಕು. ತನ್ನ ಪತ್ರಿಕೆಯಲ್ಲಿ ಅಪೊಸ್ತಲನು ಇಂಥವರ ಬಗ್ಗೆ ಹೇಳುವುದೇನೆಂದರೆ:– " ಈ ಪತ್ರಿಕೆಯ ಮೂಲಕವಾಗಿ ಹೇಳಿರುವ ನಮ್ಮ ಮಾತಿಗೆ ಯಾವನಾದರು ಒಳಗಾಗದಿದ್ದರೆ ಅವನನ್ನು ಗುರುತು ಇಟ್ಟುಕೊಂಡು ಅವನಿಗೆ ನಾಚಿಕೆಯಾಗುವಂತೆ ಅವನ ಸಹವಾಸದಲ್ಲಿ ಸೇರಬೇಡಿರಿ. ಆದರೂ ಅವನನ್ನು ವೈರಿಯೆಂದು ಎಣಿಸದೆ ಸಹೋದರನೆಂದು ಎಣಿಸಿಕೊಂಡು ಬುದ್ದಿ ಹೇಳಿರಿ" (2 ಥೆಸ. 3:14–15)

ಇಂತಹ ಪ್ರಕರಣವು ಸಹೋದರನ ಕಡೆಯಿಂದ ಕರ್ತನ ವಕ್ತಾರರಾಗಿ ಅಪೋಸ್ತಲರು ಹಾಕಿರುವ ನಿಯಮಗಳ ಬಗ್ಗೆ ಕೆಲವು ಮುಕ್ತವಾದ ಸಾರ್ವಜನಿಕ ವಿರೋಧಕ್ಕೆ ಸೂಚಿತವಾಗುತ್ತದೆ; ಸರಿಯಾದ ತತ್ವಗಳ ಬಗ್ಗೆ ಅಂಥಹ ಸಾರ್ವಜನಿಕ ವಿರೋಧವನ್ನು ಸಭೆಯು ತೆಗಳಬೇಕು, ಮತ್ತು ಆ ಸಹೋದರನು ಬಹಳಷ್ಟು ಕೆಟ್ಟುಹೋಗಿದ್ದಾನೆ, ಆತನನ್ನು ಎಚ್ಚರಿಸುವ ಅಗತ್ಯವಿದೆ ಎಂದು ನಿರ್ಧರಿಸಬೇಕು. ಅವರು ಕರ್ತನಿಂದ ಅಪೋಸ್ತಲರಿಗೆ ಕಳುಹಿಸಲ್ಪಟ್ಟ ಸ್ವಷ್ಟವಾದ ಮಾತುಗಳನ್ನು ಒಪ್ಪದೇ ಹೋದಲ್ಲಿ ಆತನು ಬಹಳ ಬಿಗಡಾಯಿಸಿರುವುದರಿಂದ ಆತನು ವಿವೇಚನಾಪೂರ್ವಕವಾದ ಅಗತ್ಯತೆಗಳನ್ನು ಒಪ್ಪಿಕೊಳ್ಳುವ ತನಕ ಆತನನ್ನು ಇತರ ಸಹೋದರರ ಸಹವಾಸದಲ್ಲಿ ಇರಿಸುವುದು ತರವಲ್ಲ ಎಂದು ಪರಿಗಣಿಸಬೇಕು. ಆದರೂ ಸಹೋದರರು ಆತನನ್ನು ರಸ್ತೆಯಲ್ಲಿ

ಕಂಡರೂ ಕಾಣದಂತೆ ವಾರೆಯಾಗಿ ಹೋಗದೆ, ಆತನನ್ನು ಸೌಜನ್ಯದಿಂದ ನಡೆಸಿಕೊಳ್ಳಬೇಕು. ಹೊರಹಾಕುವಿಕೆಯು ಕೇವಲ ಕೂಟದ ಸವಲತ್ತುಗಳಿಗೆ ಮತ್ತು ವಿಶ್ವಾಸಿಗಳಿಗೆ ಪ್ರತ್ಯೇಕವಾಗಿರುವ ಯಾವುದಾದರು ವಿಶೇಷ ಸೌಹಾರ್ದ ಸಹವಾಸಗಳಿಗೆ ಮಾತ್ರ. ಇವು "ಅವನು ನಿನಗೆ ಅಜ್ಞಾನಿಯಂತೆಯೂ ಭ್ರಷ್ಟನಂತೆಯೂ ಇರಲಿ" (ಮತಾ.18:17) ಎಂಬ ನಮ್ಮ ಕರ್ತನ ಮಾತುಗಳಲ್ಲಿ ಈ ರೀತಿ ಅಡಕವಾಗಿದೆ. ನಾವು ಅಜ್ಞಾನಿಗಾಗಲೀ, ಭ್ರಷ್ಟನಿಗಾಗಲೀ ಹಾನಿಯನ್ನು ಉಂಟು ಮಾಡಬೇಕೆಂಬುದಾಗಲೀ, ಅವರೊಂದಿಗೆ ನಿಷ್ಕರುಣೆಯ ರೀತಿಯಲ್ಲಿ ವರ್ತಿಸ ಬೇಕೆಂದಾಗಲೀ ಇಲ್ಲಿ ಕರ್ತನ ಉದ್ದೇಶವಾಗಿರದೆ, ಕೇವಲ ಆತನೊಂದಿಗೆ ಸಹೋದರ ಸಹವಾಸವನ್ನು ಹೊಂದಿರಬಾರದು ಅಥವಾ ಅವರ ವಿಶ್ವಾಸವನ್ನು ಬಯಸಬಾರದು, ಅಥವಾ ನೂತನ ವಿಶ್ವಾಸಿಗಳಂತೆ ನಮ್ಮ ವಿಶ್ವಾಸವನ್ನು ಅವರಿಗೆ ನೀಡಬಾರದು ಎಂಬುದೇ ಆಗಿದೆ. ನಂಬಿಗಸ್ಥ ಮನೆವಾರ್ತೆ ಯವರು ಪರಸ್ಪರ ಪ್ರೀತಿ, ಸಹಾನುಭೂತಿ ಇವುಗಳಿಂದ ಸದಾ ಬಂಧಿಸಲ್ಪಡಬೇಕು ಮತ್ತು ಇದನ್ನು ವಿವಿಧ ರೀತಿಯಲ್ಲಿ ವ್ಯಕ್ತಪಡಿಸಬೇಕು. ಈ ಸೌಕರ್ಯ ಮತ್ತು ಆಶೀರ್ವಾದಗಳ ಕೊರತೆಯಿಂದಾಗಿ ಹೊರಹಾಕಲ್ಪಟ್ಟ ಸಹೋದರನು ತಾನು ತನ್ನನ್ನು ಸುಧಾರಿಕೊಂಡು ಕುಟುಂಬ ಸಹವಾಸಕ್ಕೆ ಹಿಂತಿರುಗಬೇಕೆಂದು ನಿರ್ಧರಿಸುವ ತನಕ ಅನೇಕ ತೊಂದರೆಗಳಿಗೆ ಒಳಗಾಗುತ್ತಾನೆ. ಹಾರ್ದಿಕತೆ, ನಿಷ್ಕಪಟತೆ ಮತ್ತು ನಿಜವಾದ ಸಹೋದರತ್ವ ಇವುಗಳು ಕರ್ತನ ದೇಹದ ಸದಸ್ಯರುಗಳಲ್ಲಿ ಸದಾ ಇರುತ್ತವೆ ಎಂಬ ಸಲಹೆ ಇದರಲ್ಲಿದೆ.

## "ದುರ್ಬಲ ಮನಸ್ಸುಳ್ಳವರನ್ನು ಸಮಾಧಾನಪಡಿಸಿರಿ"

## "Comfort the Feeble-Minded"

ನಮ್ಮ ವಾಕ್ಯಭಾಗದಲ್ಲಿನ ಅಪೋಸ್ತಲನ ಮಾತುಗಳ ಪರೀಕ್ಷೆಯನ್ನು ಮುಂದುವರಿಸುತ್ತಾ ನಾವು ಸಭೆಯು ದುರ್ಬಲ ಮನಸ್ಸಿನವರನ್ನು ಸಮಾಧಾನ ಪಡಿಸಬೇಕೆಂಬುದನ್ನು ಗಮನಿಸುತ್ತೇವೆ. ಪವಿತ್ರಾತ್ಮನನ್ನು ಸ್ವೀಕರಿಸುವುದರ ಮೂಲಕ ನಮ್ಮ ಮರ್ತ್ಯ ದೇಹವು ತನ್ನೆಲ್ಲಾ ಬಲಹೀನತೆಗಳನ್ನು ಗೆಲ್ಲಲಾರೆವೆಂದು ಈ ರೀತಿಯಲ್ಲಿ ನಾವು ತಿಳುಕೊಳ್ಳುತ್ತೇವೆ. ಕೆಲವರಿಗೆ ದುರ್ಬಲ ದೇಹವಿರುವಂತೆ ಕೆಲವರಿಗೆ ದುರ್ಬಲ ಮನಸ್ಸು ಸಹಾ ಇರುತ್ತದೆ. ಇಂಥಹ ಪ್ರತಿಯೊಬ್ಬರಿಗೂ ಅವರವರ ಬಲಹೀನತೆಗೆ ತಕ್ಕ ಸಹಾನುಭೂತಿ ದೊರೆಯಬೇಕಾದ ಅವಶ್ಯಕತೆ ಉಂಟು. ದುರ್ಬಲ ಮನಸ್ಸಿನವರು ಅದ್ಭುತವಾದ ರೀತಿಯಲ್ಲಿ ಗುಣಹೊಂದಿ ಕೊಳ್ಳಲಾರರು. ಇದನ್ನು ನಾವು ಅಪೇಕ್ಷಿಸಲೂಬಾರದು. ಯಾಕೆಂದರೆ, ಕೆಲವರ ಮನಸ್ಸು ಬಹಳಷ್ಟು ದುರ್ಬಲವಾಗಿದ್ದು ಅವರು ದೇವರ ಯೋಜನೆಯ ಉದ್ದ, ಅಗಲ, ಎತ್ತರ ಮತ್ತು ಆಳವನ್ನು ಗ್ರಹಿಸಲಾರರು ಆದುದರಿಂದ ಅವರು ದೇಹಕ್ಕೆ ಸಂಬಂಧ ಪಟ್ಟವರಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ದೇವರು ತನ್ನ ಸಭೆಗೆ ಕೇವಲ ದೇಹದಲ್ಲಿ ಬಲವುಳ್ಳವರನ್ನು, ಸಧೃಢರಾದವರನ್ನು, ತನ್ನ ಯೋಜನೆಯ ಎಲ್ಲಾ ಗುಣಲಕ್ಷಣಗಳನ್ನು ಚೆನ್ನಾಗಿ ಪರಿಷ್ಕರಿಸಿ ಮಾತ್ರವೇ ಬಯಸದಿರುವಂತೆ, ಅದೇ ರೀತಿ ಆತನು ಕೇವಲ ಮನಸ್ಸಿನಲ್ಲಿ ಬಲವುಳ್ಳವರನ್ನು, ಸದೃಢರಾದವರನ್ನು, ದೇವರ ಯೋಜನೆಯ ಎಲ್ಲಾ.ಲಕ್ಷಣಗಳನ್ನು ವಿವೇಚಿಸಲು, ವಿಶ್ಲೇಷಿಸಲು ಶಕ್ತರಾದವರನ್ನು ಮಾತ್ರವೇ ಬಯಸುವಾತನಲ್ಲ. ಆತನ ದೇಹದಲ್ಲಿ ಕೆಲವರು ಆ ರೀತಿಯಲ್ಲಿ ಅರ್ಹರಾದವರು ಇರುವರಾದರೂ, ಮತ್ತೆ ಕೆಲವರು ದುರ್ಬಲ ಮನಸ್ಸಿನವರು ಇದ್ದು ಅಂಥವರು ತಿಳುವಳಿಕೆಯ ಸರಾಸರಿ ಮಟ್ಟಕ್ಕೂ ತಲುಪಿರುವುದಿಲ್ಲ. ಇವರಿಗೆ ನಾವು ಯಾವ ರೀತಿಯ ಸಮಾಧಾನವನ್ನು ನೀಡಬಹುದು? ಇದಕ್ಕೆ ನಾವು ಉತ್ತರಿಸುವುದೇನೆಂದರೆ, ಹಿರಿಯರು ಸತ್ಯವನ್ನು ಪ್ರಸ್ತುತಿ ಪಡಿಸುವಾಗ, ಮತ್ತು ಸಭೆಯವರೆಲ್ಲರೂ ತಮ್ಮ ಪರಸ್ಪರ ಸಂಬಂಧದಲ್ಲಿ ಅವರ ಬಲಹೀನತೆಗಳನ್ನು ಎತ್ತಿಹಿಡಿಯದೆ ಅವುಗಳನ್ನು ಮನ್ನಿಸುವ ಅಗತ್ಯವಿಲ್ಲದೆ, ಸಾಮಾನ್ಯವಾದ ರೀತಿಯಲ್ಲಿ ಅಂದರೆ ದೈವಿಕ ಕುಟುಂಬದ ಸದಸ್ಯರಾದ ಅವರಲ್ಲಿ ಅದೇ ಮಟ್ಟದ ನೈಪುಣ್ಯತೆಯನ್ನು, ಬೌದ್ಧಿಕ ವಿವೇಚನೆಯನ್ನು ನಿರೀಕ್ಷಿಸದೆ ಅವರನ್ನು ಸಮಾಧಾನ ಪಡಿಸಬಹುದು. ಅಂತಹ ದೌರ್ಬಲ್ಯವುಳ್ಳವರು ದೇಹಕ್ಕೆ ಸೇರಿದವರಲ್ಲ ಎಂದು ಯಾರೂ ಹೇಳಬಾರದು.

ನಾವು "Comfort the faint-hearted' "ಮನುಂದಿದವರನ್ನು ಧೈರ್ಯಪಡಿಸಿರಿ" ಎಂಬ ಪರಿಷ್ಕೃತ ಸಾಲುಗಳನ್ನು ಓದಿದರೂ ಅರ್ಥವು ಬದಲಾಗದು. ಕೆಲವರಿಗೆ ಸ್ವಾಭಾವಿಕವಾಗೆ ಧೈರ್ಯ ಮತ್ತು ಹೋರಾಟ ಸ್ವಭಾವದ ಕೊರತೆ ಇರುತ್ತದೆ. ಸದಾ ಒಳ್ಳೆಯ ಮನಸ್ಸು ಮತ್ತು ನಿಷ್ಠಾವಂತ ಹೃದಯವು ದೇಹದ ಇನ್ನಿತರರ ಮಟ್ಟಕ್ಕೆ ಇರಲಾರದು. "ಕರ್ತನಲ್ಲಿ ಬಲಗೊಳ್ಳಿರಿ" ಅಥವಾ "ವಿಶ್ವಾಸದ ಒಳ್ಳೆಯ ಹೋರಾಟವನ್ನು ಮಾಡಿರಿ" ಕರ್ತನು ಹೇಗೂ ಧೈರ್ಯದಿಂದ, ನಿಷ್ಠೆಯಿಂದ ಇರುವ ಅವರ ಚಿತ್ತವನ್ನು, ಉದ್ದೇಶವನ್ನು ನೋಡಬೇಕು.

ಅದರಂತೆ ಸಹೋದರರು ಸಹಾ ಮೇಲ್ವಿಚಾರಕರಾಗುವ ಸಾಲಿನಲ್ಲಿರಬೇಕಾದರೆ ಜನರ ಬಗ್ಗೆ ದೇವರ ನಿರ್ಣಯವು ಅವರ ಹೃದಯಕ್ಕನುಸಾರವಾಗಿ ಇರುತ್ತದೆ ಎಂಬುದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ಈ ದುರ್ಬಲ ಅಥವಾ ಬಲಹೀನ ಹೃದಯಿಗಳಿಗೆ ಕ್ರಿಸ್ತನ ಮೂಲಕ ಉಂಟಾದ ವಿಮೋಚನಾ ಯೋಜನೆಯ ಪ್ರಾಥಮಿಕ ಅಂಶಗಳನ್ನಾಗಲೀ, ಆ ವಿಮೋಚಕನ ಮೇಲೆ ವಿಶ್ವಾಸವಿಡುವುದರ ಮೂಲಕ ದೇವರ ದೃಷ್ಟಿಯಲ್ಲಿ ತಾವು ನೀತಿವಂತರಾಗಲು ಸಾಧ್ಯವಿದೆ ಎಂಬುದನ್ನಾಗಲೀ ಗ್ರಹಿಸಿಕೊಳ್ಳಲು ಸಾಕಾಗುವಷ್ಟು ಮನಃಶಕ್ತಿ ಇರುತ್ತಿದ್ದರೆ, ಮತ್ತು ಈ ನೆಲೆಯಲ್ಲಿ ಅವರು ತಮ್ಮದೆಲ್ಲವನ್ನೂ ಕರ್ತನಿಗೆ ಸಂಪೂರ್ಣವಾಗಿ ಸಮರ್ಪಿಸಿಕೊಂಡಿರುವುದಾದರೆ ಅವರನ್ನು ಎಲ್ಲಾ ರೀತಿಯಲ್ಲಿಯೂ ಸಂಪೂರ್ಣವಾಗಿ, ಸಾದ್ಯಂತವಾಗಿ ಕ್ರಿಸ್ತನ ದೇಹದ ಸದಸ್ಯರೆಂದು ಭಾವಿಸಿಕೊಳ್ಳುವಂತೆ ಮಾಡಬಹುದು; ಆದರೆ ಅವರು ದೇವರ ಯೋಜನೆಯ ಎಲ್ಲಾ ಲಕ್ಷಣಗಳನ್ನು ಬುದ್ದಿವಂತಿಕೆಯಿಂದ ವಾಖ್ಯಾನಿಸಲಾರರು ಅಥವಾ ಸ್ಪಷ್ಟವಾಗಿ ಗ್ರಹಿಸಿಕೊಳ್ಳಲಾರರು ಮತ್ತು ಇತರರಂತೆ ಅವುಗಳನ್ನು ಧೈರ್ಯವಾಗಿ ಪ್ರತಿಪಾದಿಸಲಾರರು ಎಂಬ ಸತ್ಯವನ್ನು ಆಕ್ಷೇಪಿಸಿ ಕರ್ತನು ಅಂಗೀಕಾರ ಮಾಡುವುದಿಲ್ಲ

ಎಂಬದಾಗಿ ಪರಿಗಣಿಸಬಾರದು. ದೇವರ ಸೇವೆಯಲ್ಲಿ ಸ್ವಯಂ ಸಮರ್ಪಣೆಗೆ, ದೇವರ ಮಹಿಮೆಗಾಗಿ ಮತ್ತು ಆಶೀರ್ವಾದಗಳಿಗಾಗಿ ಅವರ ಕೈಲಾದುದನ್ನು ಮಾಡುವಂತೆ ಅವರನ್ನು ಪ್ರೋತ್ಸಾಹಿಸಬೇಕು. ಕ್ರಿಸ್ತನಲ್ಲಿ ನೆಲೆಗೊಂಡಿದ್ದು, ಆತನ ಫಲಗಳನ್ನು ಪಾಲನೆ ಮಾಡುತ್ತಾ, ತ್ಯಾಗದ ಮಾರ್ಗದಲ್ಲಿ ನಡೆಯುವವರೆಲ್ಲರೂ ಸೂಕ್ತ ಸಮಯದಲ್ಲಿ ಸಮರ್ಪಕವಾದ ಸಾಮರ್ಥ್ಯವುಳ್ಳ ನೂತನ ಶರೀರವನ್ನು ಹೊಂದಿಕೊಂಡಾಗ ಅದರಲ್ಲಿ ಎಲ್ಲಾ ಸದಸ್ಯರು ಈಗ ತಿಳಿದುಕೊಂಡಿರುವಂತೆ ಆಗ ಪೂರ್ಣವಾಗಿ ತಿಳುಕೊಳ್ಳಲು ಶಕ್ತರಾಗುವರು – ಅದೇ ಸಮಯದಲ್ಲಿ ನಮ್ಮ ಬಲಹೀನತೆಗಳಲ್ಲಿ ಕರ್ತನ ಶಕ್ತಿಯು ಅತ್ಯಧಿಕವಾಗಿ ತೋರಿಬರುವುದೆಂಬುದನ್ನು ಆತನು ಖಚಿತಪಡಿಸುತ್ತಾನೆ.

## "ಬಲಹೀನರನ್ನು ಬೆಂಬಲಿಸಿ"
## "Support the Weak"

ಸಭೆಯಲ್ಲಿ ಕೆಲವರು ಬೇರೆಯವರಿಗಿಂತ ಬಲಹೀನ ರಾಗಿರುತ್ತಾರೆಂಬ ಅಭಿಪ್ರಾಯವನ್ನು ಇದು ನೀಡುವುದಾಗಿದೆ. ಕೇವಲ ದೈಹಿಕವಾಗಿ ಬಲಹೀನರಾಗಿರುವುದಲ್ಲ, ಆದರೆ ಆತ್ಮೀಕ ರೀತಿಯಲ್ಲಿಯೂ ಬಲಹೀನರಾಗಿರುವುದು – ಮಾನವ ಶರೀರ ಕುಂದಿದ ರಚನೆಯಿಂದಾಗಿ ನೂತನ ಸೃಷ್ಟಿಗಳಾದ ಇವರು ಆತ್ಮೀಕ ಬೆಳವಣಿಗೆಯನ್ನು ಹೊಂದಲು ಬಹಳಷ್ಟು ಕಷ್ಟಪಡುವವರು ಇಂಥವರನ್ನು ಕರ್ತನ ದೇಹದಿಂದ ತ್ಯಜಿಸಲಾಗದು. ಆದರೆ ಇದಕ್ಕೆ ವ್ಯತಿರಿಕ್ತವಾಗಿ, ದೇವರು ಅವರನ್ನು ತನ್ನ ಕೃಪಾಜ್ಞಾನಕ್ಕೆ ಯೋಗ್ಯರು ಎಂದು ಪರಿಗಣಿಸಿದ್ದಲ್ಲಿ ಆತನು ಪ್ರೀತಿಸಿ ತನ್ನ ಅಮೂಲ್ಯ ರಕ್ತದ ಮೂಲಕ ಕೊಂಡುಕೊಂಡ ಅವರನ್ನು ತನ್ನ ಮೂಲಕವಾಗಿ ಜಯಶಾಲಿಗಳನ್ನಾಗಿ ಮಾಡಬಲ್ಲನು ಎಂದು ಅರ್ಥಮಾಡಿಕೊಳ್ಳಬೇಕು. ದೇವರ ವಾಕ್ಯವು ದಯಪಾಲಿಸುವ ಮಾತುಗಳಿಂದಲೇ ಅವರನ್ನು ಬೆಂಬಲಿಸಬೇಕು–ನಮ್ಮಲ್ಲಿ ನಾವು ಬಲಹೀನರಾದಾಗ ಕರ್ತನಲ್ಲಿ ನಾವು ಆತನ ಬಲದ ಶಕ್ತಿಯಲ್ಲಿ ಬಲಶಾಲಿಗಳಾಗಬಹುದು. ನಮ್ಮ ಎಲ್ಲಾ ಚಿಂತಾಭಾರಗಳನ್ನು ಆತನ ಮೇಲೆ ಹಾಕಿ ಆತನ ಕೃಪೆಯ ಮೇಲೆ ವಿಶ್ವಾಸವುಳ್ಳವ ರಾಗಿದ್ದಲ್ಲಿ, ಬಲಹೀನತೆ ಮತ್ತು ಶೋಧನೆಯ ಕಾಲಗಳಲ್ಲಿ "ನನ್ನ ಕೃಪೆಯೇ ನಿನಗೆ ಸಾಕು, ಬಲಹೀನತೆಯಲ್ಲಿಯೇ ಬಲವು ಪೂರ್ಣ ಸಾಧಕವಾಗುತ್ತದೆ" (2ಕೊರಿ.12:9) ಎಂಬ ಆತನ ವಾಗ್ದಾನಗಳು ನೆರವೇರುವುವು. ಈ ಸಮಾಧಾನ ಪಡಿಸುವಿಕೆಯನ್ನು, ಬೆಂಬಲಿಸುವುದರಲ್ಲಿ ಸಮಗ್ರ ಸಭೆಯವರು ಸಹಾಯ ಮಾಡಬಹುದಾದರೂ ಹಿರಿಯರಿಗೆ ಇದರಲ್ಲಿ ವಿಶೇಷವಾದ ಅಧಿಕಾರ ಮತ್ತು ಜವಾಬ್ಧಾರಿಗಳಿವೆ. ಯಾಕೆಂದರೆ ಅವರು ಸಭೆಯ ಆಯ್ದುಕೊಂಡ ಪ್ರತಿನಿಧಿಗಳು. ಅಂದರೆ ಕರ್ತನವರೂ ಸಹಾ. ಅಪೋಸ್ತಲನು ದೇಹದ ವಿವಿಧ ಅಂಗಗಳ ಬಗ್ಗೆ ಮಾತನಾಡುತ್ತಾ, ಪಾಲಕರು ಮತ್ತು ಬೋಧಕರುಗಳ ಬಗ್ಗೆ ಮಾತನಾಡಿದ ಮೇಲೆ ವಿವಿಧ ರೀತಿಯ "ಸಹಾಯಗಳ"ಬಗ್ಗೆ ಮಾತನಾಡುತ್ತಾನೆ (1 ಕೊರಿ. 12:28). ನಿಶ್ಚಯವಾಗಿಯೂ ದೇವರ ನಿಜವಾದ ಸಂತೋಷವು ಸಭೆಯ ಪ್ರತಿಯೊಬ್ಬ ಸದಸ್ಯನೂ ಅಂತಹ ಸಹಾಯ ಸ್ಥಾನಗಳನ್ನು ಅಲಂಕರಿಸುವುದರಲ್ಲಿದೆ. ಸಭೆಯ ಪ್ರತಿನಿಧಿಗಳಾಗಿ ಆಯ್ಕೆಗೊಂಡಿರುವ ಹಿರಿಯರಿಗೆ ಸಹಾಯಮಾಡುವುದು ಮಾತ್ರವಲ್ಲ, ಪರಸ್ಪರರಿಗೆ ಸಹಾಯಮಾಡುವುದು, ಅವಕಾಶ ದೊರೆತಂತೆ ಎಲ್ಲರಿಗೂ ಒಳ್ಳೆಯದನ್ನೇ ಮಾಡುವುದು, ಅದರಲ್ಲೂ ವಿಶೇಷವಾಗಿ ನಂಬಿಗಸ್ಥ ಮನೆವಾರ್ತೆಯವರಿಗೆ.

## "ಎಲ್ಲರ ಬಗ್ಗೆ ತಾಳ್ಮೆಯಿಂದಿರಿ"
## "Patient Toward All"

ಈ ಬುದ್ಧಿಮಾತುಗಳಿಗೆ ವಿಧೇಯರಾಗುವುದರಿಂದ ಎಲ್ಲಾ ಸಂಧರ್ಭಗಳಲ್ಲಿ ಒಬ್ಬರಿಗೊಬ್ಬರು ಸಹನೆಯಿಂದಿದ್ದು ನೂತನ ಸೃಷ್ಟಿಗಳು ತಾವು ಸರಿಯಾದ ಮನೋವೃತ್ತಿಯನ್ನು ಚಲಾಯಿಸುವುದು ಮಾತ್ರವಲ್ಲ, ತಮ್ಮಲ್ಲಿ ಪರಿಶುದ್ಧಾತ್ಮನ ಭವ್ಯ ಕೃಪೆಯಾದ ತಾಳ್ಮೆಯನ್ನು ಬೆಳೆಸಿಕೊಳ್ಳುತ್ತಿದ್ದೇವೆಂದು ಕಂಡುಕೊಳ್ಳುತ್ತಾರೆ. ತಾಳ್ಮೆಯು ಪರಿಶುದ್ಧಾತ್ಮನ ಕೃಪೆಯಾಗಿದ್ದು ಜೀವನದ ಎಲ್ಲಾ ಸಂಗತಿಗಳಲ್ಲಿ ಸಭೆಯ ಒಳಗೂ ಹೊರಗೂ ಇರುವವರೆಡೆಗೆ ಅಪಾರವಾದ ಸಾಧನೆಯ ಅವಕಾಶಗಳನ್ನು ಪಡೆದಿದೆ. ಇಡೀ ಪ್ರಪಂಚವು ನಮ್ಮ ತಾಳ್ಮೆಯನ್ನು ಬಯಸುತ್ತದೆ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳುವುದು ಒಳಿತು. ನಾವು ದೇವರ ವಾಕ್ಯದಲ್ಲಿ ಸೃಷ್ಟಿಗಳ ನರಳುವ ಸ್ಥಿತಿಯನ್ನು ಸ್ಪಷ್ಟವಾಗಿ ನೋಡುವಾಗ ಇದನ್ನೇ ಗ್ರಹಿಸುತ್ತೇವೆ. ಅಲ್ಲಿ ನಾವು ಪತನದ ಕಥೆಯನ್ನು, ಅದರಿಂದ ಹೇಗೆ ಎಲ್ಲರೂ ಹಾನಿಗೊಳಗಾದರು ಎಂಬುದನ್ನು ನೋಡುತ್ತೇವೆ. ಅದರಲ್ಲಿಯೇ ನಾವು ಪಾಪಗಳ ಬಗ್ಗೆ ದೇವರ ತಾಳ್ಮೆ, ಅವರನ್ನು ಬಿಡುಗಡೆಗೊಳಿಸುವ ಆತನ ಅದ್ಭುತವಾದ ಪ್ರೀತಿ, ಅದಕ್ಕಾಗಿ ಆತನು ಮಾಡಿದ ಹಂಚಿಕೆ, ತನ್ನ ಸಭೆಯನ್ನು ಆಶೀರ್ವದಿಸಿ ಅದನ್ನು ಭೀಕರವಾದ ಪಾಪ ಮತ್ತು ಮರಣವೆಂಬ ಕೆಸರಿನ ಗುಂಡಿಯಿಂದ ಮೇಲಕ್ಕೆತ್ತಿದ್ದು ಮಾತ್ರವೇ ಅಲ್ಲದೆ ಇಡೀ ಮಾನವ ಕುಲಕ್ಕೆ ಮಹಿಮೆಯುಳ್ಳ ಪೂರ್ವಸಿದ್ಧತೆಯನ್ನು ಮಾಡಿದ್ದಾನೆ ಎಂಬಿವುಗಳನ್ನು ಕಾಣುತ್ತೇವೆ. ಇದರಲ್ಲಿಯೇ ಲೋಕದ ದೊಡ್ಡ ತೊಂದರೆಯೆಂದರೆ ಅವರು ವಿರೋಧಿಯ ಭ್ರಮೆ ಗೊಳಗಾಗಿದ್ದಾರೆ ಎಂಬುದನ್ನೂ ನಾವು ನೋಡುತ್ತೇವೆ. – "ಈ ಪ್ರಪಂಚದ ದೇವರು ನಂಬಿಕೆಯಿಲ್ಲದವರ ಮನಸ್ಸನ್ನು ಮಂಕುಮಾಡಿದ್ದಾನೆ" (2 ಕೊರಿಂಥ 4:4).

ನಿಜವಾಗಿಯೂ ಇಂತಹ ತಿಳುವಳಿಕೆಯು ನಮಗೆ ತಾಳ್ಮೆಯನ್ನು ನೀಡಲೇಬೇಕು! ನಮಗೆ ಪ್ರಪಂಚದವರೊಟ್ಟಿಗೆ ತಾಳ್ಮೆ ಇರುವುದಾದಲ್ಲಿ, ಇನ್ನು ಮುಂದೆ ಈ ಪ್ರಪಂಚದವರಾಗಿರದೆ ದೇವರ ಕೃಪೆಯಿಂದ ಕ್ರಿಸ್ತನಲ್ಲಿ ಆತನ ಕ್ಷಮಾಪಣಾ ಸ್ಥಿತಿಗೆ ಒಳಗಾದವರು, ಆತನ ಕುಟುಂಬಕ್ಕೆ ದತ್ತು ತೆಗೆದುಕೊಳ್ಳಲ್ಪಟ್ಟವರು. ಮತ್ತು ಈಗ ಆತನ ಹೆಜ್ಜೆ ಜಾಡಿನಲ್ಲಿ ನಡೆಯಲು ಬಯಸುತ್ತಿರುವವರು ಇವರುಗಳ ಬಗ್ಗೆ ಇನ್ನೂ ಹೆಚ್ಚಿನ ತಾಳ್ಮೆ ಇರಬೇಕಾಗುತ್ತದೆ. ಈ ಜೊತೆಗಾರರಾದ ಶಿಷ್ಯರ ಸಂಗಡ, ದೇವರ ದೇಹದ ಅಂಗಗಳೊಂದಿಗೆ ನಾವು ಯಾವ ರೀತಿಯ ಪ್ರೀತಿ ಮತ್ತು ದೀರ್ಘ ಶಾಂತಿಯ ತಾಳ್ಮೆಯನ್ನು ನಾವು ಹೊಂದಿರಬೇಕು? ನಿಜವಾಗಿ ನಮಗೆ ಇವರ ಬಗ್ಗೆ ತಾಳ್ಮೆ ಮಾತ್ರವೇ ಇರಬೇಕು. ನಾವು ಇವರಿಗೆ ತಾಳ್ಮೆ ತೋರಿಸದೇ

ಹೋದಲ್ಲಿ ನಮ್ಮ ಕರ್ತನೂ, ಪ್ರಭುವೂ ಖಂಡಿತವಾಗಿ ನಮ್ಮೊಡನೆ ಅಸಮ್ಮತಿಸುತ್ತಾನೆ ಮತ್ತು ನಮ್ಮನ್ನು ನಿಂದಿಸುತ್ತಾನೆ. ಇದಕ್ಕೂ ಹೆಚ್ಚಾಗಿ ನಾವು ಪ್ರಸ್ತುತ ದುರವಸ್ಥೆ ಮತ್ತು ಬಲಹೀನತೆಯ ಕಾಲದಲ್ಲಿ ವ್ಯವಹರಿಸುವಾಗ, ಮತ್ತು ಲೋಕದವರೊಡನೆ, ದೇಹ ಮತ್ತು ವಿರೋಧಿಯೊಡನೆ ಕಾದಾಡುವಾಗ ನಮಗೆ ಅತಿಶಯವಾದ ತಾಳ್ಮೆಯು ಬೇಕಾಗುತ್ತದೆ. ಈ ಸತ್ಯತೆಗಳನ್ನು ಮೆಚ್ಚಿಕೊಳ್ಳಲು ಕಲಿಯುವದರಿಂದ ನಮ್ಮನ್ನು ಎಲ್ಲರ ಬಗ್ಗೆ ಹೆಚ್ಚು ತಾಳ್ಮೆಯಿಂದಿರಲು ಸಹಾಯ ಮಾಡುತ್ತದೆ.

## "ಯಾರೂ ಕೇಡಿಗೆ ಕೇಡು ಮಾಡದಂತೆ ನೋಡಿಕೊಳ್ಳಿರಿ"

### "See That None Render Evil for Evil"

ಇದು ವ್ಯಕ್ತಿಗತ ಬುದ್ಧಿವಾದಕ್ಕಿಂತಲೂ ಹೆಚ್ಚಿನದು. ಇದೊಂದು ರೀತಿಯ ಪ್ರತಿಬಂಧಕಾಜ್ಞೆಯಂತಿದ್ದು ಇಡೀ ಸಭೆಗೆ ಸಂಬೋಧಿಸಲ್ಪಟ್ಟಿದೆ ಮತ್ತು ಕರ್ತನ ಜನರ ಪ್ರತಿಯೊಂದು ಸಭೆಗೂ ಅನ್ವಯಿಸುವುದಾಗಿದೆ. ವಿಶ್ವಾಸಿಗಳ ಮನೆಯಲ್ಲಿ ಯಾರಾದರೂ ಸಹೋದರ ಸದಸ್ಯರ ಮೇಲೆ ಅಥವಾ ಹೊರಗಿನವರ ಮೇಲೆ ಹಗೆತನವನ್ನು ಸಾಧಿಸಲು, ಪ್ರತೀಕಾರವನ್ನು ಅಥವಾ ಕೇಡಿಗೆ ಕೇಡನ್ನು ಮಾಡ ಬಯಸಿದಲ್ಲಿ ಸಭೆಯು ಇದನ್ನು ಗಮನಿಸಿಯೂ ಬೇರೆಯವರ ಕೆಲಸಕ್ಕೆ ಕೈಹಾಕುವವರಂತೆ ಸುಮ್ಮನೆ ಇರಬಾರದು. ಈ ಬಗ್ಗೆ ನೋಡುವುದು ಸಭೆಯ ಕರ್ತವ್ಯ. "ಯಾರೂ ಅಪಕಾರಕ್ಕೆ ಅಪಕಾರವನ್ನು ಮಾಡದಂತೆ" ನೋಡಿಕೊಳ್ಳುವುದೆಂದರೆ ಇಂತಹ ಮನಸ್ಸು ನಿಮ್ಮ ಮಧ್ಯೆ ಸಹೋದರರಲ್ಲಿ ಕಂಡು ಬಂದಾಗ ಆ ಕಡೆ ಸೂಕ್ತವಾದ ಗಮನವನ್ನು ಹರಿಸುವುದು. ಆದುದರಿಂದ, ಇಂಥಾಃ ಸಂದರ್ಭಗಳು ಉಂಟಾಗುವಾಗ, ಇಂತಹ ಪ್ರತಿಬಂಧಕಾಜ್ಞೆಯು ಉಪಕ್ರಮಿಸುವ ಸಂದರ್ಭಗಳಲ್ಲಿ ಹಿರಿಯರ ಕರ್ತವ್ಯವೆಂದರೆ ಸಹೋದರ ಅಥವಾ ಸಹೋದರಿಗೆ ದೇವರ ವಾಕ್ಯಾನುಸಾರವಾಗಿ ನಯವಾಗಿ ಬುದ್ಧಿವಾದ ನೀಡುವುದು; ಅವರು ಅದನ್ನು ಕೇಳದೇ ಹೋದಲ್ಲಿ ಇದನ್ನು ಸಭೆ ಮುಂತಾದವರ ಗಮನಕ್ಕೆ ತರುವುದು ಅವರ ಕರ್ತವ್ಯ. ಇಲ್ಲಿ ಸಭಾ ನಿಯೋಗವು ಅಂತಹ ಅಕ್ರಮವಾದ ಸಂಗತಿಯ ವಿಚಾರಣೆ ಮಾಡುವ ಅಧಿಕಾರ ಪಡಕೊಳ್ಳುತ್ತದೆ. ನಾವು ಈ ರೀತಿಯಾಗಿ ಒಬ್ಬರನ್ನೊಬ್ಬರು ನೋಡುವುದು ಮಾತ್ರವಲ್ಲ, ಒಬ್ಬರು ಮತ್ತೊಬ್ಬರನ್ನು ಕರುಣಾಪೂರಿತ ಆಸಕ್ತಿಯಿಂದ ನೋಡಬೇಕು. ಹಿಂದೆ ಹೆಜ್ಜೆ ಹಾಕದಂತೆ ಗಮನಿಸಬೇಕು. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಎಲ್ಲರೂ ಒಳ್ಳೆಯದನ್ನೇ ಅನುಸರಿಸುವಂತೆ ನೋಡಿಕೊಳ್ಳಬೇಕು, ಒಳ್ಳೆಯ ದೆಸೆಯಲ್ಲಿ ಆಗುವ ಎಲ್ಲಾ ಪ್ರಗತಿಯ ಕುರುಹುಗಳನ್ನು ನಾವು ಪ್ರಶಂಸಿಸಬೇಕು ಮತ್ತು ಅದಕ್ಕೆ ನಾವು ವೈಯುಕ್ತಿಕವಾಗಿಯೂ ದೇವ ಜನರ ಸಭೆಯವರಾಗಿಯೂ ಬೆಂಬಲ ಸೂಚಿಸಬೇಕು. ಈ ರೀತಿ ಮಾಡುವುದರಿಂದ, ಅಪೋಸ್ತಲರು ಸಲಹೆ ಮಾಡುವಂತೆ ನಾವು ಸರ್ವದಾ ಒಳ್ಳೆಯ ಕಾರಣಕ್ಕಾಗಿ ಸಂತೋಷಿಸಬಹುದು. ಈ ರೀತಿಯಾಗಿ ಪರಸ್ಪರರ ಸಹಾಯ ಮಾಡುವುದರಿಂದ ಕ್ರಿಸ್ತನ ದೇಹವು ಸಂತೋಷದಲ್ಲಿ ವೃದ್ಧಿಹೊಂದಿಕೊಳ್ಳುತ್ತದೆ, ಶಿರಸ್ಸಿನೋಪಾದಿಯಲ್ಲಿ ಹೆಚ್ಚು ಹೆಚ್ಚಾಗಿ ಬೆಳೆಯುತ್ತದೆ ಮತ್ತು ಆತನೊಂದಿಗೆ ಆತನ ರಾಜ್ಯದ ಸಹ-ವಾರಸುದಾರರಾಗಲು ಹೆಚ್ಚು ಯೋಗ್ಯರನ್ನಾಗಿ ಮಾಡುತ್ತದೆ.

**"ನಾವು ಪರಸ್ಪರ ಹಿತಚಿಂತಕರಾಗಿದ್ದು ಪ್ರೀತಿಸುತ್ತಿರಬೇಕೆಂತಲೂ ಸತ್ಕಾರ್ಯ ಮಾಡಬೇಕೆಂತಲೂ ಒಬ್ಬರನ್ನೊಬ್ಬರು ಪ್ರೇರೇಪಿಸೋಣ" –ಇಬ್ರಿಯ 10:24**

"Let us consider one another to provoke unto unto Love and to good works" -Heb.10:24

ಇಲ್ಲಿ ಎಂತಹ ಪ್ರೀತಿಮಯ, ಹಾಗೂ ಸುಂದರವಾದ ಆಲೋಚನೆಯು ವ್ಯಕ್ತವಾಗಿದೆ! ಇತರರು ತಮ್ಮ ಜೊತೆಗಾರರ ತಪ್ಪನ್ನು ಕಂಡುಹಿಡಿದು ಅವರನ್ನು ಅಧೈರ್ಯಪಡಿಸುತ್ತಿರುವಲ್ಲಿ ಅಥವಾ ಅವರ ಬಲಹೀನತೆಯಲ್ಲಿ ಸ್ವಾರ್ಥ ಲಾಭವನ್ನು ಪಡಕೊಳ್ಳಲು ಹವಣಿಸುತ್ತಿರುವಾಗ ನೂತನ ಸೃಷ್ಟಿಯವರು ಇದರ ವ್ಯತಿರಿಕ್ತವಾದುದನ್ನು ಅಂದರೆ ಇತರರಿಗೆ ಅನಾವಶ್ಯಕವಾಗಿ ಹಾನಿಯನ್ನುಂಟು ಮಾಡುವ, ಸಿಟ್ಟನೆಬ್ಬಿಸುವ ಪ್ರತಿಯೊಬ್ಬರ ಸ್ವಭಾವವನ್ನು ಅದನ್ನು ದೂಷಿಸುವ ದೃಷ್ಟಿಯಿಂದ ಅಧ್ಯಯನ ಮಾಡಿ ಅವರಿಗೆ ಪ್ರೀತಿಸುವ ಒಳ್ಳೆಯ ಸ್ವಭಾವವನ್ನು ಪ್ರಚೋದಿಸುವ ಕಾರ್ಯವನ್ನು ಮಾಡಬೇಕಾಗಿದೆ. ಯಾಕಾಗಬಾರದು? ಲೋಕದ ಸಮಗ್ರ ಮನೋವೃತ್ತಿಯು, ಲೋಕ, ಶರೀರ ಮತ್ತು ಸೈತಾನನು ಹೊಟ್ಟೆಕಿಚ್ಚು, ಸ್ವಾರ್ಥತೆ, ಅಸೂಯೆ, ಮತ್ತು ಪಾಪದ ಆಲೋಚನೆ, ಮಾತು ಮತ್ತು ಕಾರ್ಯಗಳಿಗೆ ಪ್ರೇರಿಪಿಸುವುದಲ್ಲವೆ? ಹಾಗಾದರೆ ಕ್ರಿಸ್ತನ ದೇಹದ ನೂತನ ಸೃಷ್ಟಿಯು ತಮ್ಮೆಡೆಗೆ ಮತ್ತು ಇತರರೆಡೆಗೆ ಅಂತಹ ಪ್ರಚೋದನೆಗಳಿಂದ ದೂರವುಳಿದು, ವಿರುದ್ಧ ದಿಕ್ಕಿನಲ್ಲಿ ಪ್ರೀತಿ ಮತ್ತು ಒಳ್ಳೆಯ ಕಾರ್ಯದ ಪ್ರಚೋದನೆ ಯಾಕೆ ಮಾಡಬಾರದು? ನಿಜವಾಗಿಯೂ ಇದು ದೇವರ ವಾಕ್ಯದ ಎಲ್ಲಾ ಎಚ್ಚರಿಕೆ ಮತ್ತು ಬುದ್ಧಿಮಾತುಗಳಂತೆ ಸಮಂಜಸವೂ ಲಾಭದಾಯಕವೂ ಆಗಿದೆ.

## "ನಮ್ಮನ್ನು ಸಭೆಯಾಗಿ ಗುಂಪುಗೂಡಿಸುವುದು"

### "The Assembling of Ourselves"

**"ಸಭೆಯಾಗಿ ಕೂಡಿಕೊಳ್ಳುವುದನ್ನು ಕೆಲವರು ರೂಢಿಯಾಗಿ ಬಿಟ್ಟಿರುವ ಪ್ರಕಾರ ನಾವು ಬಿಟ್ಟುಬಿಡದೆ ಒಬ್ಬರನ್ನೊಬ್ಬರು ಎಚ್ಚರಿಸೋಣ. ಕರ್ತನ ಪ್ರತ್ಯಕ್ಷತೆಯ ದಿನವು ಸಮೀಪಿಸುತ್ತಾ ಬರುತ್ತಿದೆ ಎಂದು ನೀವು ನೋಡುವುದರಿಂದ ಇದನ್ನು ಮತ್ತಷ್ಟು ಮಾಡಿರಿ". (ಇಬ್ರಿಯ 10:25)**

ಸಭೆಯಾಗಿ ಕೂಡಿಕೊಳ್ಳುವ ಬಗ್ಗೆ ಅಪೋಸ್ತಲನ ಮೂಲಕ ನೀಡಿದ ಕರ್ತನ ಕಟ್ಟಾಜ್ಞೆಯು ಆತನ ಮಾತುಗಳಾದ "ಇಬ್ಬರು ಮೂವರು ನನ್ನ ಹೆಸರಿನಲ್ಲಿ ಎಲ್ಲಿ ಕೂಡಿಬರುತ್ತಾರೋ ಅಲ್ಲಿ ಅವರ ನಡುವೆ ನಾನು ಇದ್ದೇನೆ" (ಮತ್ತಾಯ 18:20) ಎಂಬುದಕ್ಕೆ ಅನುಸಾರವಾಗಿಯೇ ಇದೆ. ಈ ರೀತಿಯಾಗಿ ಕೂಡಿಬರುವುದರ ಉದ್ದೇಶವು ಇಲ್ಲಿ ಸ್ಪಷ್ಟವಾಗಿ ಸೂಚಿತವಾಗಿದೆ. ಇದು ಪರಸ್ಪರ ಆತ್ಮೀಕ ಸಂಗತಿಗಳಲ್ಲಿ ಮುಂದುವರೆಯಲು– ಒಬ್ಬರನ್ನೊಬ್ಬರು ಕರ್ತನ ಪ್ರೀತಿಯಲ್ಲಿ ಹೆಚ್ಚುಹೆಚ್ಚಾಗಿ ಪ್ರೇರೇಪಿಸಲು ಅಥವಾ ಉತ್ತೇಜಿಸಲು ಮತ್ತು ನಮ್ಮಪರಲೋಕದ ತಂದೆಯನ್ನು ಮಹಿಮೆಪಡಿಸಲು ಮತ್ತು ಸಹೋದರತ್ವವನ್ನು ಆಶೀರ್ವದಿಸುವ ಹಾಗು ಎಲ್ಲಾ ಜನರಿಗೂ ಒಳ್ಳೆಯದನ್ನು

ಮಾಡುವ ಎಲ್ಲಾ ರೀತಿಯ ಹೆಚ್ಚಾದ ಒಳ್ಳೇ ಕಾರ್ಯಗಳನ್ನು ಮಾಡಲು ಇದರಿಂದ ಹೆಚ್ಚಾದ ಅವಕಾಶಗಳು ಒದಗಿಬರುತ್ತವೆ. –"ಒಬ್ಬನು ತಾನು ದೇವರನ್ನು ಪ್ರೀತಿಸುತ್ತೇನೆಂದು ಹೇಳಿ ತನ್ನ ಸಹೋದರನನ್ನು ದ್ವೇಷಿಸಿದರೆ ಅವನು ಸುಳ್ಳುಗಾರನಾಗಿದ್ದಾನೆ. ತಾನು ಕಂಡಿರುವ ತನ್ನ ಸಹೋದರನನ್ನು ಪ್ರೀತಿಸದವನು ತಾನು ಕಾಣದಿರುವ ದೇವರನ್ನು ಪ್ರೀತಿಸಲಾರನು" (1ಯೋಹಾ 4:20). ನಾನು ದೇವರೊಂದಿಗಿರಲು ಮತ್ತು ಆತನ ಸಹವಾಸವನ್ನು, ಆಶೀರ್ವಾದಗಳನ್ನು ಹೊಂದಲು ಹಂಬಲಿಸುತ್ತೇನೆ ಎನ್ನುವಾತನು ಅದೇ ಸಮಯದಲ್ಲಿ ತನ್ನ ಸಹೋದರನನ್ನು ಸಂಧಿಸುವ ಅವಕಾಶಗಳನ್ನು ನಿರ್ಲಕ್ಷ್ಯ ಮಾಡಿ, ಆತನ ಸಹವಾಸದಲ್ಲಿ ಸಂತೋಷ ಪಡದೇ ಹೋದಲ್ಲಿ ಆತನು ಸಹಾ ಅದೇ ರೀತಿಯಲ್ಲಿ ತಪ್ಪಿದವನಾಗಿದ್ದಾನೆ ಎಂದು ನಾವು ನಂಬುತ್ತೇವೆ.

ಪ್ರತಿಯೊಬ್ಬ ಮಾನವ ಜೀವಿಯೂ ಯಾವುದಾದರೂ ಒಡನಾಡಿಯನ್ನು ಬಯಸುವುದು ಸ್ವಾಭಾವಿಕ. ಅನುಭವವು "Birds of a feather flock together" ಎಂಬ ಆಂಗ್ಲ ಗಾದೆಯ ಸತ್ಯಾನುಭವವು ನಮಗಾಗಿದೆ. ('ಒಂದೇ ಸ್ವಭಾವದ ಗುಣದವರು, ಕೂಡಿಕೊಳ್ಳುವರು' ಎಂಬರ್ಥ) ಆದುದರಿಂದ ಬಹಳವಾಗಿ ಬಯಸಿದ ಆಧ್ಯಾತ್ಮಿಕ ಮನಸ್ಸುಳ್ಳವರ ಸಹವಾಸವನ್ನು ನಾವು ಮೆಚ್ಚದೇ ಹೋದರೆ, ಇಂತಹ ಸಂತೋಷವನ್ನು ಪಡೆಯುವ ಅವಕಾಶಗಳನ್ನು ನಾವು ಹೆಚ್ಚಿಸಿಕೊಳ್ಳದೇ ಹೋದಲ್ಲಿ ಇವುಗಳು ನಮ್ಮ ಆಧ್ಯಾತ್ಮಿಕ ಪರಿಸ್ಥಿತಿಗೆ ಅನಾರೋಗ್ಯಕರ ಸೂಚನೆಗಳಾಗಿವೆ ಎಂಬುದು ಖಚಿತ. ಪ್ರಾಕೃತ ಮನುಷ್ಯನು ಪ್ರಾಕೃತ ಸಹವಾಸವನ್ನು ಅಥವಾ ಸಾಂಗತ್ಯವನ್ನು ಪ್ರೀತಿಸುತ್ತಾನೆ ಮತ್ತು ಅದರಲ್ಲಿ ಸಂತೋಷಿಸುತ್ತಾನೆ. ನೂತನ ಸೃಷ್ಟಿಯ ಮಿತಿಮೀರಿದ ಮಹಾ ಅಮೂಲ್ಯವಾದ ನಿರೀಕ್ಷೆಗಳಿಗೆ ಹೋಲಿಸಿದಾಗ ತಮ್ಮ ಸಾಮಾನ್ಯವಾದ ಲೌಕಿಕ ನಿರೀಕ್ಷೆಗಳು ಮತ್ತು ಯೋಜನೆಗಳು ಸೀಮಿತವಾಗಿದ್ದರೂ ಆತನು ತನ್ನ ವ್ಯಾಪಾರಕ್ಕೆ ಸಂಬಂಧಿಸಿದ ವಿಷಯಗಳಿಗೆ ಮಾತ್ರವಲ್ಲದೆ, ಸಂತೋಷಾನುಭವಗಳಿಗಾಗಿಯೂ ಸಾಂಗತ್ಯ ಕೂಟಗಳನ್ನು ಯೋಜಿಸಿ ಏರ್ಪಡಿಸುತ್ತಾನೆ. ನಮ್ಮ ಮನಸ್ಸುಗಳು ಪವಿತ್ರಾತ್ಮನನ್ನು ನವೀಕರಿಸಿಕೊಳ್ಳುವ ಮೂಲಕ ರೂಪಾಂತರ ಹೊಂದುವುದರಿಂದ ಸಾಂಗತ್ಯದ ನಮ್ಮ ಹಸಿವು ಬತ್ತಿ ಹೋಗುವುದಿಲ್ಲ. ಬದಲಾಗಿ ನೂತನ (ನಾಲೆ) ಮಾರ್ಗದಂತಾಗುತ್ತದೆ ಮತ್ತು ನಾವು ಈ ಸಾಂಗತ್ಯದಲ್ಲಿ ಪಾಪದ ಹಾಗೂ ನರಳುವಿಕೆಯ ಹಿಂದಿನ ಮತ್ತು ಇಂದಿನ ಚರಿತ್ರೆ, ದೇವರ ವಿಮೋಚನಾ ದಾಖಲೆ ಮತ್ತು ನರಳುವವರ ಬಿಡುಗಡೆ ಕರ್ತನೊಂದಿಗೆ ಆತನ ಜೊತೆ ವಾರಸುದಾರರಾಗಬೇಕೆಂಬ ಉನ್ನತ ಕರೆ, ನಮ್ಮ ಬಿಡುಗಡೆಯು ಸಮೀಪವಾಗಿಯೇ ಅದೆ ಎಂಬುದು ಇತ್ಯಾದಿ ಇತ್ಯಾದಿಗಳ ಬಗ್ಗೆ ಅನ್ವೇಷಣೆಯ ವಿಚಾರ ವಿನಿಮಯದ ಮತ್ತು ಸಂತೋಷಪಡುವಿಕೆಯ ಅದ್ಭುತ ಕ್ಷೇತ್ರವನ್ನೇ ನೋಡಬಹುದಾಗಿದೆ. ಅಲೋಚಿಸಲು ಅಧ್ಯಯನ ಮಾಡಲು, ಸಾಂಗತ್ಯವನ್ನು ಅನುಭವಿಸಲು ಇದು ಎಂತಹ ಅದ್ಭುತವಾದ ಕ್ಷೇತ್ರ!

ಯಾವನು ಇಂತಹ ವಿಷಯಗಳನ್ನು ಚರ್ಚಿಸಲು ಮತ್ತು ಇತರರನ್ನು ಭೇಟಿಮಾಡುವ ಸೌಕರ್ಯಗಳನ್ನು ಮೆಚ್ಚಿಕೊಳ್ಳುವುದಿಲ್ಲವೋ ಅಂಥವನು ಆತ್ಮೀಕವಾಗಿ ಸ್ವಲ್ಪ ಮಟ್ಟಿಗೆ ರೋಗಕ್ಕೆ ತುತ್ತಾಗಿದ್ದಾನೆಂದು ಕಂಡುಕೊಳ್ಳುವುದು ಆತನಿಗೆ ಸಾಧ್ಯವೋ ಅಸಾಧ್ಯವೋ ಎಂದು ನಾವು ಹೇಳಿದರೆ ಆಶ್ಚರ್ಯ ಪಡಬೇಕಾಗಿಲ್ಲ. ಆತನು ಒಂದು ರೀತಿಯಲ್ಲಿ ಆತ್ಮೀಕ ಹೆಮ್ಮೆ ಮತ್ತು ಸ್ವಸಂಪೂರ್ಣತಾ ಭಾವನೆ ಎಂಬ ರೋಗಕ್ಕೆ ಒಳಗಾಗಿದ್ದಿರಬಹುದು. ಇವು ಆತನಿಗೆ "ನಾನು ಇತರ ಹಿಂಬಾಲಕರೊಡನೆ ಕಲಿಯಲು ಕ್ರಿಸ್ತನ ಶಾಲೆಗೆ ಹೋಗಬೇಕಾದ್ದಿಲ್ಲ; ನಾನು ಮನೆಯಲ್ಲಿಯೇ ಕರ್ತನಿಂದ ನೇರವಾಗಿ ವ್ಯಕ್ತಿಗತ ಪಾಠಗಳನ್ನು ಪಡೆದುಕೊಳ್ಳುತ್ತೇನೆ ಮತ್ತು ಆತನು ಇನ್ನೂ ಹೆಚ್ಚಾದ, ಆಳವಾದ ಆತ್ಮೀಕ ಸಂಗತಿಗಳನ್ನು ಪ್ರತ್ಯೇಕವಾಗಿ ನನಗೆ ಕಲಿಸುತ್ತಾನೆ" ಎಂದು ಹೇಳಿಕೊಳ್ಳಲು ಇದು ಆತನನ್ನು ನಡೆಸುತ್ತದೆ. ಕೆಲವರು ಮಾತ್ರವೇ ಇಂತಹ ಆತ್ಮೀಕ (ಅಹಂ) ದುರಭಿಮಾನಕ್ಕೆ ತುತ್ತಾಗುತ್ತಾರೆ. ತಮ್ಮನ್ನು ಇತರ ಕ್ರೈಸ್ತ ಸಹೋದರರುಗಳಿಗಿಂತ ಹೆಚ್ಚೆಂದು, ಕರ್ತನು ತನ್ನ ಮಾಮೂಲು ಪದ್ಧತಿಗಳಿಂದ ಮತ್ತು ಈ ಬಗ್ಗೆ ಇರುವ ಆತನ ಮಾತುಗಳಿಂದ ದೂರ ಸರಿದು ತಮಗೆ ವಿಶೇಷವಾದ ರೀತಿಯ ಸೇವೆ ಮಾಡುತ್ತಾನೆ ಎಂದು ಕಲ್ಪಿಸಿಕೊಳ್ಳುತ್ತಾರೆ. ಯಾಕೆಂದರೆ ಅವರು ತಮ್ಮನ್ನು ಬೇಕಾದುದಕ್ಕಿಂತ ಹೆಚ್ಚಿನವರು ಎಂದು ಭಾವಿಸಿಕೊಂಡಿರುತ್ತಾರೆ ಮತ್ತು ಅದನ್ನೆ ಕೋರಿಕೊಳ್ಳುತ್ತಾರೆ. ಇಂತಹ ಮನೋವೃತ್ತಿಯ ಹೃದಯ ಮತ್ತು ಗುಣಲಕ್ಷಣಗಳನ್ನು ಹೊಂದಿರುವವರೆಗೆ ಅವರಿಗೆ ದೇವರ ವಾಗ್ದಾನದ ಒಂದೇ ಒಂದು ಆಶೀರ್ವಾದವಾಗಲೀ ದೊರೆಯುವುದಿಲ್ಲ ಎಂಬುದನ್ನು ಅವರು ನೆನಪಿನಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಇದಕ್ಕೆ ಬದಲಾಗಿ "ಕರ್ತನು ಅಹಂಕಾರಿಗಳನ್ನು ಎದುರಿಸುತ್ತಾನೆ, ದೀನರಿಗಾದರೋ ಕೃಪೆಯನ್ನು ಅನುಗ್ರಹಿಸುತ್ತಾನೆ. ನಮ್ರತೆಯುಳ್ಳವರು ಇದಕ್ಕೆ ವ್ಯತಿರಿಕ್ತವಾಗಿದ್ದಾರೆ ಕರ್ತನು ತನ್ನ ಆದೇಶಗಳನ್ನು ಆಲಿಸಿ ಅವನ್ನು ಪಾಲಿಸುವವರನ್ನು ಆಶೀರ್ವದಿಸುತ್ತಾನೆ ಮತ್ತು "ನೀವು ನನ್ನನ್ನು ಪ್ರೀತಿಸುವುದಾದರೆ ನನ್ನ ಆಜ್ಞೆಗಳನ್ನು ಕೈಕೊಂಡು ನಡೆಯುವಿರಿ" ಎಂದು ಹೇಳುತ್ತಾನೆ. ಹೃದಯದ ಒಳ್ಳೆಯ ಮನೋವೃತ್ತಿಯಲ್ಲಿರುವವರಿಗೆ ನಾವು ಆತನ ಹೆಸರಿನಲ್ಲಿ ಕೂಡಿಬರಬೇಕೆಂಬ ದೇವರ ಅಪ್ಪಣೆಯೇ ಸಾಕು. ಮತ್ತು ಇಬ್ಬರಾಗಲೀ, ಮೂವರಾಗಲೀ ಈ ಅಪ್ಪಣೆಯನ್ನು ಪಾಲಿಸುವವರಿಗೆ ಆತನು ವಿಶೇಷವಾದ ವಾಗ್ದಾನವೊಂದನ್ನು ಮಾಡಿದ್ದಾನೆ. ಸಭೆಯು ಆತನ ದೇಹವನ್ನು ಪ್ರತಿನಿಧಿಸುತ್ತದೆ ಅದನ್ನು ನಾವು "ಅದರ ಪ್ರತಿಯೊಂದು ಜೋಡನೆಯೂ ಒದಗಿಸುವಂತೆ ಮತ್ತು ತನ್ನನ್ನು ಸುಧಾರಿಸಿಕೊಳ್ಳುವಂತೆ", ಮತ್ತೊಂದು ಹಂತವನ್ನು ಬೆಳೆಸುವುದಕ್ಕೆ ನಾವು ಆತ್ಮನ ಎಲ್ಲಾ ಕೃಪೆ ಮತ್ತು ಫಲಗಳನ್ನು ಹೊಂದಿದ ಸದಸ್ಯರಾಗಿ ಅವರಿಗೆ ನೆರವು ನೀಡಬೇಕು. ಕೆಲವೊಮ್ಮೆ ತೊಂದರೆಯು ಕೇವಲ ಆತ್ಮೀಕ ಅಹಂ ಮಾತ್ರವೇ ಅಲ್ಲದೆ ಆದರೆ ಭಾಗಷಃ ದೇವರ ವಾಕ್ಯಗಳನ್ನು ನಿರಾಕರಿಸಿ ತೋರಿ, ಮಾನವ ತಿಳುವಳಿಕೆಗಳನ್ನು ದೇವರ ವಾಗ್ದಾನ, ಅವೆಲ್ಲವೂ ದೇವರ ಅಲೋಚನೆಗಳೆಂದು ಊಹಿಸಿ ಅವುಗಳ ಮೇಲೆ ಮಾನವ ಆಲೋಚನೆಗಳ ಬಗ್ಗೆ ಒಲವು ತೋರಿಸಿ "ಇವರೆಲ್ಲರೂ ದೇವರಿಂದ ಶಿಕ್ಷಿತರಾಗಿರುವರು" ಎಂಬ ದೇವರ ವಾಗ್ದಾನವು ವ್ಯಕ್ತಿಗತ ಶಿಕ್ಷಣ ನೀಡುವುದರ ಪ್ರಯುಕ್ತ ಒಬ್ಬರಿಂದೊಬ್ಬರನ್ನು ಪ್ರತ್ಯೇಕಪಡಿಸುತ್ತದೆ ಎಂಬದಾಗಿ ತಿಳಿದಿರುವರು. ಅಪೋಸ್ತಲರ ಮತ್ತು ಅವರ ಬೋಧನೆಗಳ

ಸಂಪ್ರದಾಯವು ಮತ್ತು ದೇವ ಜನರ ಅನುಭವಗಳು ಇಂತಹ ಅಲೋಚನೆಗಳಿಗೆ ವಿರುದ್ಧವಾಗಿವೆ.

ಆದಾಗ್ಯೂ, ಮತ್ತೊಂದೆಡೆ ನಾವು ಕೇವಲ ಸಂಖ್ಯೆಯನ್ನು ಹಂಬಲಿಸಿ ಜನಪ್ರಿಯತೆಯನ್ನು ತೋರಿಸುವವರಾಗದೆ "ನಿಮ್ಮಲ್ಲಿ ಇಬ್ಬರಾಗಲೀ ಮೂವರಾಗಲೀ... "ಎಂಬ ಆತನ ಆಶೀರ್ವಾದದಾಯಕವಾದ ವಾಗ್ದಾನವನ್ನು ಮತ್ತೆ ಪುನಃ ಅಪೋಸ್ತಲನ ಮೂಲಕ ನೀಡಿದ ಸಭೆಯಾಗಿ ಕೂಡಿ ಬರಬೇಕೆಂಬ ಎಚ್ಚರಿಕೆ ಮಾತುಗಳನ್ನು ನೆನಪಿಸಿಕೊಳ್ಳಬೇಕು. ಇಂಥಾ ಸಭೆಗಳು ಲೌಕಿಕವಾಗಿರಬಾರದು, ದೇವಜನರು ಮಾತ್ರವೇ ಕೂಡಿಬರಬೇಕು, ಕ್ರೈಸ್ತ ಕೂಟಗಳು ದೇವರ ಕೃಪೆಯನ್ನು ಅರಿತವರ ಮತ್ತು ಅದನ್ನು ಸಂಪೂರ್ಣವಾಗಿ ಆತನ ಸೇವೆಯಲ್ಲಿ ಅಭಿಷೇಕಿಸಿಕೊಂಡವರ ಕೂಟವಾಗಿರಬೇಕು ಎಂದು ಹೇಳುವಲ್ಲಿ ಕರ್ತನಾಗಲೀ, ಅಪೋಸ್ತಲನಾಗಲೀ ಒಂದು ರೀತಿಯ ಭಿನ್ನವರ್ಗದ ಬಗ್ಗೆ ಬೋಧಿಸುತ್ತಿಲ್ಲ. ಪ್ರಾಪಂಚಿಕರನ್ನು ಇಂಥಾಃ ಕೂಟಗಳಿಗೆ ಬರುವಂತೆ ಒತ್ತಾಯಿಸಬಾರದು. "ನೀವು ಈ ಲೋಕದವರಲ್ಲ" ಎನ್ನುವಂತೆ ಅವರು ಸಹಾ ನಿಮ್ಮವರಲ್ಲ. ಸಂಗೀತಗಳ ಮೂಲಕ, ಇನ್ನಿತರ ವೈಶಿಷ್ಟ್ಯಗಳ ಮೂಲಕ ಅವರು ಆಕರ್ಷಣೆಗೊಂಡಿದ್ದರೆ ಈ ಪ್ರತಿಬಂಧಕಾಜ್ಞೆಯ ಸ್ಫೂರ್ತಿಯೇ ಕಳೆದುಹೋಗುತ್ತದೆ. ಪ್ರಾಪಂಚಿಕತನವು ತುಂಬಿಹೋಗುತ್ತದೆ. ಈ ಪ್ರಾಪಂಚಿಕತನವನ್ನು ಸಂಪ್ರೀತಿಗೊಳಿಸುವ ಮತ್ತು ಆಕರ್ಷಿಸುವ ಬಯಕೆಯಿಂದಾಗಿ ಕೂಟದ ನಿಜವಾದ ಉದ್ದೇಶವೇ ಬಲು ಬೇಗ ಕಳೆದುಹೋಗುತ್ತದೆ. ಈ ನಿಜವಾದ ಉದ್ಧೇಶವನ್ನು ಪತ್ರಿಕೆಗಳಲ್ಲಿ ಈ ರೀತಿಯಾಗಿ ವಿವರಿಸಲಾಗಿದೆ :–

"ಪ್ರಿಯರೇ, ನೀವಾದರೋ ನಿಮಗಿರುವ ಅತಿ ಪರಿಶುದ್ಧವಾದ ಕ್ರಿಸ್ತ ನಂಬಿಕೆಯನ್ನು ಆಧಾರಮಾಡಿಕೊಂಡು ಭಕ್ತಿಯಲ್ಲಿ ಅಭಿವೃದ್ಧಿ ಹೊಂದುತ್ತಾ ಪವಿತ್ರಾತ್ಮ ಪ್ರೇರಿತರಾಗಿ ಪ್ರಾರ್ಥನೆ ಮಾಡುತ್ತಾ ನಿತ್ಯಜೀವಕ್ಕಾಗಿ ನಮ್ಮ ಕರ್ತನಾದ ಯೇಸುಕ್ರಿಸ್ತನ ಕರುಣೆಯನ್ನು ಎದುರು ನೋಡುತ್ತಾ ನಿಮ್ಮನ್ನು ದೇವರ ಪ್ರೀತಿಯಲ್ಲಿ ಕಾಪಾಡಿಕೊಳ್ಳಿರಿ" (ಯೂದ:20) "ನೀವು ಈಗ ಮಾಡುತ್ತಿರುವ ಪ್ರಕಾರವೇ ಒಬ್ಬರನ್ನೊಬ್ಬರು ಸಂತೈಸುತ್ತಾ ಒಬ್ಬರ ಭಕ್ತಿಯನ್ನೊಬ್ಬರು ವೃದ್ಧಿಪಡಿಸಿಕೊಳ್ಳುತ್ತಾ ಇರಿ". (1 ಥೆಸ. 5:11) "ಸಭೆಯಾಗಿ ಕೂಡಿಕೊಳ್ಳುವುದನ್ನು ಕೆಲವರು ರೂಢಿಯಾಗಿ ಬಿಟ್ಟಿರುವ ಪ್ರಕಾರ ನಾವು ಬಿಟ್ಟು ಬಿಡದೆ ಒಬ್ಬರನೊಬ್ಬರು ಎಚ್ಚರಿಸೋಣ " (ಇಬ್ರಿಯ 10:25)

ಕೆಟ್ಟವುಗಳ ಮೇಲೆ ಒಲವು ತೋರುವ ಹಿಂಡು ಇಚ್ಛಿಸಿದಲ್ಲಿ ಒಟ್ಟಿಗೇ ಇರಲಿ: ನೀತಿಯ ಬಗ್ಗೆ ಒಲವು ತೋರುವವರ ಹಿಂಡು ಅಂಥವರೊಂದಿಗೆ ಒಟ್ಟಿಗಿರಲಿ; ಆತ್ಮನಿಂದ ಪಡಕೊಂಡವರು ಒಟ್ಟಾಗಿ ಕೂಡಿಕೊಂಡು ತಮ್ಮ ಆತ್ಮೋನ್ನತಿಗಾಗಿ ದೇವರ ವಾಕ್ಯದಲ್ಲಿ ಕೊಡಲ್ಪಟ್ಟಿರುವ ಸಂಗತಿಗಳಲ್ಲಿ ಮುಂದುವರೆಯಲಿ. ಆದರೆ, ಅವರು ಇದನ್ನು ಅಲಕ್ಷ್ಯಮಾಡಿದಲ್ಲಿ ಅದರಿಂದುಂಟಾಗುವ ಅನಾನುಕೂಲ ಪರಿಣಾಮಗಳನ್ನು ಸಭಾ ಶಿರಸ್ಸಿನ ಮೇಲೆಯಾಗಲೀ, ಅಥವಾ ಸರಿಯಾದ ಕ್ರಮವನ್ನು ಒತ್ತಿ ಹೇಳಿದ ಮತ್ತು ತಮ್ಮ ನಡತೆಯಲ್ಲಿ ಅವನ್ನು ಅನುಷ್ಠಾನಗೊಳಿಸಿದ ನಿಷ್ಠಾವಂತ ಅಪೋಸ್ತಲರುಗಳ ಮೇಲೆಯಾಗಲೀ ಹಾಕಬಾರದು.

ಒಳ್ಳೆಯ ಕೆಲಸಗಳನ್ನು ಮಾಡಬೇಕು, ಪ್ರೀತಿಸಬೇಕು ಮತ್ತು ದೇವರ ವಾಗ್ದಾನಗಳ ಸ್ಪಷ್ಟಿಕರಣ ಮುಂತಾದುವುಗಳಿಂದ ಕೂಡಿದ ನಿಮ್ಮ ಪರಿಶುದ್ದ ಸಂಭಾಷಣೆಗಳಲ್ಲಿ ಆಸಕ್ತರಾಗಿದ್ದು ನಿಮ್ಮ ಕ್ರಮಗಳನ್ನು ಗಮನಿಸಲು ಇಷ್ಟಪಟ್ಟಲ್ಲಿ, ಅವುಗಳಿಂದ ಆಶೀರ್ವಾದ ಹೊಂದಿ ಕೊಳ್ಳುವುದಾದಲ್ಲಿ ಹೊರಗಿನವರಿಗೆ ಸಭಾಕೂಟಗಳು ನಿಷಿದ್ಧವಲ್ಲ. ಅಪೋಸ್ತಲನು ಇದನ್ನು ಸ್ಪಷ್ಟವಾಗಿ ಈ ರೀತಿಯಾಗಿ ಹೇಳಿದ್ದಾನೆ "ನೀವೆಲ್ಲರೂ ಪ್ರವಾದಿಸುತ್ತಿರಲು ಕ್ರಿಸ್ತ ನಂಬಿಕೆಯಿಲ್ಲದವನಾಗಲಿ, ಈ ವರವಿಲ್ಲದವನಾಗಲಿ ಒಳಗೆ ಬಂದರೆ ಅವನು ಎಲ್ಲರ ಮಾತನ್ನು ಕೇಳಿ ತಾನು ಪಾಪಿಯೆಂಬ ಅರುಹನ್ನು ಹೊಂದುವನು, ಎಲ್ಲರ ಮಾತಿನಿಂದ ಪರಿಶೋಧಿತನಾಗುವನು, ಅವನ ಹೃದಯದ ರಹಸ್ಯಗಳು ಬಯಲಾಗುವುವು ಅವನು ಅಡ್ಡಬಿದ್ದು ದೇವರನ್ನು ಆರಾಧಿಸಿ ದೇವರು ನಿಜವಾಗಿಯೂ ನಿಮ್ಮಲ್ಲಿದ್ದಾನೆಂದು ಪ್ರಚುರಪಡಿಸುವನು" (1ಕೊರಿ.14:24,25). ಇಲ್ಲಿ ನಾವು ಹೇಳಬಯಸುವ ಅಂಶವೆಂದರೆ "ನಾವೆಲ್ಲರೂ ಒಟ್ಟುಗೂಡುವುದು' ಎಂದರೆ ಅವಿಶ್ವಾಸಿಗಳ ಒಕ್ಕೂಟ ಎಂಬ ಅರ್ಥವಲ್ಲ. ಆಲ್ಲಿ ಪಾಪಿಗಳ ಮನ ಮುರಿಯುವ ಪ್ರಯತ್ನ ನಿರಂತರವಾಗಿ ಸಾಗುತ್ತದೆ. ಪಾಪಿಗೆ ಉಚಿತವಾದ ಪ್ರವೇಶವಿರಬೇಕು. ಆದರೆ ಆತನು ತಾನೇ ದೇವರ ಅಭಿಷಕ್ತ ಜನರಲ್ಲಿ ವಾಸಿಸುವ ಕ್ರಮ ಮತ್ತು ಪ್ರೀತಿಯನ್ನು ಕಂಡುಕೊಳ್ಳುವಂತಾಗಬೇಕು. ಅವುಗಳನ್ನು ಆತನು ಭಾಗಶಃ ಗ್ರಹಿಸಿಕೊಂಡರೂ ಅದರಿಂದ ಆತನು ಸಭೆಯಲ್ಲಿರುವ ಪವಿತ್ರತೆಯನ್ನು ಗ್ರಹಿಸಿದವನಾಗಿ ತನ್ನ ಪಾಪಗಳನ್ನು ದೂಷಿಸಬಹುದು ಮತ್ತು ತಾನು ನಂಬಿದ ತತ್ವ ಸಿದ್ಧಾಂತಗಳಲ್ಲಿನ ತಪ್ಪುಗಳನ್ನು ಮನದಟ್ಟು ಮಾಡಿಕೊಳ್ಳಬಹುದು ಮತ್ತು ದೇವಜನರಲ್ಲಿ ನೆಲೆಯಾಗಿರುವ ಕ್ರಮ, ಸತ್ಯದ ಅನುರೂಪತೆ ಇವುಗಳನ್ನು ಗಮನಿಸಬಹುದು (ಮೇಲಿನ ಮಾತುಗಳೊಂದಿಗೆ ಹೋಲಿಸಿರಿ).

ಇದು ದೇವಜನರ ಕೂಟಗಳ ಸಾಮಾನ್ಯ ಗುಣಲಕ್ಷಣಗಳನ್ನು ಪರಿಗಣಿಸುತ್ತದೆ.

## ಕೂಟಗಳ ವಿಶೇಷ ಗುಣಲಕ್ಷಣ
## Character of Meeting

ಮೊಟ್ಟಮೊದಲನೆಯದಾಗಿ ಈ ವಿಷಯಗಳಲ್ಲಿ ಇತರ ವಿಷಯಗಳಲ್ಲಿದ್ದಂತೆ ದೇವಜನರಿಗೆ ಯಾವುದೇ ಎರಕಹಾಕಿದ ಕಬ್ಬಿಣದ ಕಾಯಿದೆಯ ನಿಯಮಗಳಿಲ್ಲ. ದೇಶ ಮತ್ತು ಕಾಲಕ್ಕನುಸಾರವಾಗಿ ಬೇಕಾದಂತೆ ಅವುಗಳನ್ನು ಅಳವಡಿಸಿಕೊಳ್ಳಲು ಮುಕ್ತರಾಗಿರುವರು. ಆತ್ಮನ ಸ್ವಸ್ಥ ಮನಸ್ಸಿನ ನಡಿಸುವಿಕೆಗೂ, ಮೇಲಿನಿಂದ ಪ್ರಾಪ್ತವಾಗುವ ಜ್ಞಾನವನ್ನು ಪಡೆದುಕೊಳ್ಳಲೂ, ತಾವು ಸಂಪಾದಿಸಿದ ದೇವರ ಗುಣಲಕ್ಷಣಗಳನ್ನು ದೈವ ಪ್ರೀತಿಯ ನಿಯಮದ ಶಿಸ್ತಿಗನುಸಾರವಾಗಿ, ತಮ್ಮ ಶ್ರೇಣಿಗೆ ತಕ್ಕಂತೆ ಪ್ರಕಟಿಸಲು ಸಂಪೂರ್ಣವಾಗಿ ಮುಕ್ತರಾಗಿರುವರು. ಈ ಪ್ರೀತಿಯ ನಿಯಮವು ಆದಿ ಸಭೆಯ ಸಂಪ್ರದಾಯಗಳಲ್ಲಿನ ಮಾರ್ಪಾಡು ಅಥವಾ ಬದಲಾವಣೆಗಳಲ್ಲಿ ಗಾಂಭೀರ್ಯತೆಯನ್ನು ಖಂಡಿತವಾಗಿಯೂ ಒತ್ತಾಯಿಸುತ್ತದೆ. ಇದು ತೀರಾ ಅಗತ್ಯತೆಯೆಂದು

ಗ್ರಹಿಸುವುದನ್ನು ಹೊರತುಪಡಿಸಿ ಬೇರೆ ಯಾವ ರೀತಿಯ ಮೂಲಸ್ವರೂಪದ ಬದಲಾವಣೆಗಳನ್ನು ಮಾಡಲು ಖಂಡಿತವಾಗಿಯೂ ಹಿಂಜರಿಸುತ್ತದೆ. ಆದಾಗ್ಯೂ ಆದಿಸಭೆಯ ಪ್ರತಿಯೊಂದು ಎಚ್ಚರಿಕೆಗಳಿಗೂ, ಸೂಚನೆಗಳಿಗೂ ಮತ್ತು ಅಭ್ಯಾಸಕ್ರಮಗಳಿಗೂ ಸಮೀಪವಿರುವಂತೆ ಬಯಸುತ್ತದೆ.

ಆದಿ ಸಭೆಯಲ್ಲಿ ಅಪೋಸ್ತಲರು ವಿಶೇಷ ಬೋಧಕರಾಗಿದ್ದರೆಂಬ ಉದಾಹರಣೆಗಳು ನಮ್ಮಲ್ಲಿವೆ. ಸಭಾಪಾಲನಾ ಸೇವೆಯನ್ನು, ಸುವಾರ್ತಾ ಸೇವೆಯನ್ನು, ಪ್ರವಾದಿಸುವ ಅಥವಾ ಸಾರ್ವಜನಿಕ ವಕ್ತಾರ ಸೇವೆಯನ್ನು ಹಿರಿಯರುಗಳು ಮಾಡುತ್ತಿದ್ದರೆಂಬ ಉದಾಹರಣೆಗಳೂ ನಮ್ಮಲ್ಲಿವೆ. 1 ಕೊರಿ.14 ರಲ್ಲಿ ನಾವು ನಿರ್ದಿಷ್ಟವಾಗಿ ಅಪೋಸ್ತಲರು ದೇವರ ಮಹಿಮೆಗಾಗಿ ಮತ್ತು ಸಹೋದರರ ಸೇವೆಗಾಗಿ ಸಭೆಯ ಪ್ರತಿಯೊಬ್ಬ ಸದಸ್ಯರಲ್ಲೂ ಇರಬಹುದಾದ ಮೇಧಾ ಶಕ್ತಿಯನ್ನು ಕದಡಿ ಆ ಮೂಲಕವಾಗಿ ಅವರು ಕರ್ತನ ಮತ್ತು ಸತ್ಯದ ಸೇವೆಯಲ್ಲಿ ಬಲಗೊಳ್ಳುವಂತೆ ತಮ್ಮನ್ನು ಪ್ರಯೋಗಿಸಿಕೊಂಡು, ಇತರರಿಗೆ ಸಹಾಯಮಾಡುತ್ತಾ ಅದೇ ಸಮಯದಲ್ಲಿ ಅವರಿಂದ ಸಹಾಯ ಪಡೆಯುವಂತೆ ಮಾಡಿದರು ಎಂಬುದನ್ನು ನೋಡುತ್ತೇವೆ. ಅಪೋಸ್ತಲರ ಸಮಯದ ಈ ರೀತಿಯ ಸಾಧಾರಣ ಸಭೆಯ ಕೂಟವನ್ನು ನಾವು ಇಂದು ಪೂರ್ಣ ಹಾಗೂ ವಿಸ್ತಾರವಾಗಿ ಅನುಸರಿಸಲು ಸಾಧ್ಯವಿಲ್ಲ. ಕಾರಣವೇನೆಂದರೆ ಆದಿಸಭೆಯವರಿಗೆ ಹೊರಗಿನವರನ್ನು ಮನದಟ್ಟುಮಾಡುವ ಸಲುವಾಗಿ ಮಾತ್ರವಲ್ಲದೆ, ಸ್ವಯಂ ಪ್ರೋತ್ಸಾಹಕ್ಕಾಗಿ ಹಂಗಾಮಿಯಾಗಿ ದೊರೆತ ವೈಶಿಷ್ಟ್ಯಪೂರ್ಣ ಆತ್ಮೀಕ ವರದಾನಗಳು. ಈ ವರದಾನಗಳಿಲ್ಲದೆ ಯಾವುದೇ ಸಂಖ್ಯೆಯಲ್ಲಿ ಸುಧಾರಿಸಲು ಅಥವಾ ಯಾವುದೇ ಮಟ್ಟದ ಲಾಭ ಹೊಂದಲು ಸಾಧ್ಯವಿದ್ದಿಲ್ಲ. ಆದರೆ, ಅಪೋಸ್ತಲರುಗಳಿಂದ ಸಮ್ಮತಿ ಪಡೆದಿದ್ದ ಈ ಆದಿ ಸಂಪ್ರದಾಯಗಳಿಂದ ನಾವು ಕೆಲವೊಂದು ಅಮೂಲ್ಯ ಹಾಗೂ ಉಪಯುಕ್ತವಾದ ಪಾಠಗಳನ್ನು ಕಲಿತುಕೊಳ್ಳಬಹುದಾಗಿದೆ ಮತ್ತು ಇವುಗಳನ್ನು ದೇವಜನರ ಚಿಕ್ಕಹಿಂಡುಗಳು ಎಲ್ಲೆಡೆಗಳಲ್ಲಿ ಸಂದರ್ಭಾನುಸಾರವಾಗಿ ಬಳಸಿಕೊಳ್ಳಬಹುದು.

ಪ್ರಮುಖವಾದ ಪಾಠವೆಂದರೆ ಪರಸ್ಪರ ಸಹಾಯ ಮಾಡುವಿಕೆ ಅಂದರೆ "ಮಹಾ ಪವಿತ್ರವಾದ ವಿಶ್ವಾಸದಲ್ಲಿ ಒಬ್ಬರನೊಬ್ಬರು ವೃದ್ಧಿ ಪಡಿಸಿಕೊಳ್ಳುವುದು". ಒಬ್ಬರು ಅಥವಾ ಅನೇಕ ಹಿರಿಯರು ಪ್ರತಿನಿತ್ಯ ಬೋಧಿಸುವುದಾಗಲೀ, ಹಾಗೂ ತಿಳುವಳಿಕೆ ನೀಡುವ ಅಥವಾ ಅಭಿವೃದ್ಧಿಪಡಿಸುವ ಕಾರ್ಯವನ್ನು ಪ್ರಯತ್ನಿಸುವುದಾಗಲೀ ಸಂಪ್ರದಾಯ ವಾಗಿರಲಿಲ್ಲ. ಪ್ರತಿಯೊಬ್ಬ ಸದಸ್ಯನು ತನ್ನ ಪಾಲಿನದನ್ನು ಮಾಡುವುದು ಸಂಪ್ರದಾಯವಾಗಿತ್ತು. ಹಿರಿಯರ ಪಾಲಿನ ಕರ್ತವ್ಯಗಳು ಅವರವರ ಸಾಮರ್ಥ್ಯ ಹಾಗೂ ಅವರು ಪಡಕೊಂಡ ವರಗಳಿಗೆ ಅನುಗುಣವಾಗಿ ಹೆಚ್ಚು ಮಹತ್ವವಾದುವುಗಳಾಗಿದ್ದವು. ಇದು ಬಹಳಷ್ಟು ಉಪಯುಕ್ತವಾದ ವ್ಯವಸ್ಥೆಯಾಗಿದ್ದು ಕೇಳಿದವರಿಗೆ ಮಾತ್ರವೇ ಆಶೀರ್ವಾದವನ್ನು ತರುವುದಾಗಿರದೆ ಭಾಗವಹಿಸುವ ಎಲ್ಲರಿಗೂ ಆಶೀರ್ವಾದದಾಯಕವಾಗಿತ್ತೆಂದು ನಾವು ಕಂಡುಕೊಳ್ಳಬಹುದು. ಒಬ್ಬ ಬಲಹೀನ ಮಾತುಗಾರನೂ ಅಥವಾ ಅವಿದ್ಯಾವಂತನು ಸಹಾ ಆತನ ಹೃದಯವು ಕರ್ತನ ಪ್ರೀತಿ ಮತ್ತು ಶ್ರದ್ಧೆಗಳಿಂದ ತುಂಬಿದ್ದೇ ಆಗಿದ್ದಲ್ಲಿ ಕೇಳುವ ಎಲ್ಲರಿಗೂ ಅಮೂಲ್ಯವಾದ ಆಲೋಚನೆಗಳನ್ನು ನಿವೇದಿಸಬಲ್ಲನು ಎಂಬುದು ಯಾರಿಗೆ ತಾನೇ ತಿಳಿದಿಲ್ಲ. ಅಪೋಸ್ತಲರು ವರ್ಣಿಸಿರುವ ಇಲ್ಲಿನ ಕೂಟಗಳ ವರ್ಗಗಳು ವಿವಿಧ ಸಭೆಗಳಲ್ಲಿ ನಡೆಯುವ ಹೆಚ್ಚಿನ ಕೂಟಗಳ ಮಾದರಿಯಾಗಿವೆ. ವಿವರಗಳು ಇವು ಮಿಶ್ರಿತ ಕೂಟಗಳೆಂದು ಹೇಳುತ್ತವೆ. ಇದರಲ್ಲಿ ಪ್ರಸ್ತುತ ಸಮಯಕ್ಕೆ ತಕ್ಕಂತೆ ವಿವರಗಳನ್ನು ಹೊಂದಿಸಿಕೊಂಡು ಒಬ್ಬರು ಬೋಧಿಸಬಹುದು, ಇನ್ನೊಬ್ಬರು ವ್ಯಾಖ್ಯಾನಿಸಬಹುದು, ಮತ್ತೊಬ್ಬರು ಪ್ರಾರ್ಥಿಸಬಹುದು, ಮಗದೊಬ್ಬರು ಸಂಗೀತವನ್ನು ಸೂಚಿಸಬಹುದು. ಇನ್ನೂ ಒಬ್ಬರು ತಮ್ಮ ಮನೋಭಾವಕ್ಕೆ ಹಾಗೂ ಅನುಭವಗಳಿಗೆ ಒಗ್ಗುವ ಕವನಗಳನ್ನು ಕೂಟದ ಪ್ರಸ್ತಾಪಕ್ಕೆ ಹೊಂದಿಕೆಯಾಗುವಂತೆ ಓದಬಹುದು. ಅಲ್ಲದೆ ಬೇರೆಯೊಬ್ಬರು ಅಂದು ಚರ್ಚಿಸಲಿರುವ ಪ್ರಸ್ತಾಪಕ್ಕೆ ಸೂಕ್ತವಾದ ದೇವರ ವಾಕ್ಯದ ಮಾತುಗಳನ್ನು ಉಲ್ಲೇಖಿಸಬಹುದು. ಈ ರೀತಿಯಲ್ಲಿ ಕರ್ತನು ತನ್ನ ಸಭೆಯ ಪ್ರತಿಯೊಬ್ಬ ಸದಸ್ಯರನ್ನೂ ಪರಸ್ಪರರ ಆತ್ಮೋದ್ಧಾರಕ್ಕಾಗಿ, ಪರಸ್ಪರರ ಬೆಳವಣಿಗೆಗಾಗಿ ಉಪಯೋಗಿಸಬಹುದು.

ಆದಿಸಭೆಗಳಲ್ಲಿ ಎಂದಿಗೂ ಬೋಧನೆಗಳಿರಲಿಲ್ಲವೆಂಬುದು ನಮ್ಮ ಆಲೋಚನೆಯಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಅಪೋಸ್ತಲರು ಎಲ್ಲೆಲ್ಲಿಗೆ ಹೋದರೋ ಅಲ್ಲೆಲ್ಲಾ ಅವರನ್ನು ದೇವರ ವಾಕ್ಯದ ವ್ಯಾಖ್ಯಾನಕಾರರೆಂದೇ ಪರಿಗಣಿಸಲಾಗುತ್ತಿತ್ತು. ಅವರು ಅವನ್ನು ಅಲ್ಪಸಮಯದಲ್ಲಿ ಆದರೆ ತಮ್ಮ ಉಪಸ್ಥಿತಿಯ ಅವಧಿಯಲ್ಲಿಯೇ ಹೆಚ್ಚು ಕಡಿಮೆ ಎಲ್ಲಾ ಸಾರ್ವಜನಿಕ ಕೂಟಗಳಲ್ಲಿಯೂ ಪ್ರಸ್ತುತಪಡಿಸುತ್ತಿದ್ದರು. ಎಲ್ಲರಿಗೆ ಮುಕ್ತವಾದ ಇತರ ಸಾಮಾಜಿಕ ಕೂಟಗಳೂ ನಡೆಯುತ್ತಿದ್ದವೆಂಬುದನ್ನು ನಾವು ಅನುಮಾನಿಸುವುದಿಲ್ಲ. ಅಪೋಸ್ತಲರ ಈ ಬೋಧನಾ ಅಭ್ಯಾಸವನ್ನು ಅಪೋಸ್ತಲರಲ್ಲದವರು ಸಹಾ ಅನುಸರಿಸುತ್ತಿದ್ದರು ಎಂಬುದಲ್ಲಿ ಸಂಶಯವಿಲ್ಲ. ಉದಾಹರಣೆಗೆ ಬಾರ್ನಬ, ತಿಮೋಥೆ, ಅಪಲ್ಲೋಸ ತೀತ ಮುಂತಾದವರು. ಇದೇ ಸ್ವಾತಂತ್ರ್ಯವನ್ನು ಕೆಲವರು ಹುಮೆನಾಯನು ಮತ್ತು ಫಿಲೇತರಂತೆ ಕೆಡುಕನ ಪ್ರಭಾವದಿಂದ ದುರುಪಯೋಗ ಪಡಿಸಿಕೊಂಡಿದ್ದಾರೆ.

ಕರ್ತನು ಯಾವುದೇ ಸಕಾರಾತ್ಮಕವಾದ ನಿಯಮವನ್ನು ನೀಡದಿರುವುದರಿಂದ ನಾವಾಗಲೀ ಬೇರೆ ಯಾರೇ ಆಗಲೀ ಯಾವುದಾದರೂ ಒಂದು ನಿಯಮಕ್ಕೇ ಅಂಟಿಕೊಳ್ಳುವುದು ತರವಲ್ಲ. ಹೇಗೂ ನಾವು ಕೆಲವೊಂದು ಸಲಹೆಗಳನ್ನು ನೀಡುತ್ತಿದ್ದೇವೆ. ಯಾಕೆಂದರೆ, ಸಭೆಗೆ ಕೆಲವೊಂದು ಆತ್ಮೀಕ ಅಗತ್ಯತೆಗಳಿವೆ, ಅವನ್ನು ನಿರ್ವಹಿಸಬೇಕಾಗಿದೆ :–

(1) ಉಳಿದವುಗಳಿಗಿಂತ ಹೆಚ್ಚು ಹೊರತಾದ ಪ್ರವಾದನಾ ವಿಷಯಗಳಲ್ಲಿ ಮತ್ತು ನೈತಿಕ ಸಿದ್ಧಾಂತಗಳಲ್ಲಿ ಹಾಗೂ ಕ್ರೈಸ್ತ ಕೃಪೆಯ ಅಭಿವೃದ್ಧಿಯಲ್ಲಿ ಆದೇಶಗಳ ಅವಶ್ಯಕತೆಯುಂಟು.

(2) ಭಾಷೆಯ ಉಪಯೋಗದಲ್ಲಿ ಹೆಚ್ಚು ಕಡಿಮೆ ವಿವಿಧ ಪದ್ಧತಿಗಳು ಇರುವುದರಿಂದ ಮತ್ತು ಕ್ರಿಸ್ತನಲ್ಲಿ ಇನ್ನೂ ಶಿಶುವಿನ ಅವಸ್ಥೆಯಲ್ಲಿರುವವರಿಗೂ ಮತ್ತು ಕ್ರಿಸ್ತಿಯ ಜ್ಞಾನದಲ್ಲಿಯೂ

ಕೃಪೆಯಲ್ಲಿಯೂ ಸ್ವಲ್ಪ ಹೆಚ್ಚು ಪಕ್ವವಾಗಿರುವವರ ನಡುವೆ ಹೆಚ್ಚು ಕಡಿಮೆ ಮನಸ್ಸಿನ ಮೊಂಡುತನ ಮತ್ತು ಆತ್ಮೀಕ ಗ್ರಹಣ ಶಕ್ತಿಯ ಶ್ರೇಣಿಯಲ್ಲಿ ವ್ಯತ್ಯಾಸಗಳಿರುವುದರಿಂದ, ಪ್ರತಿಯೊಬ್ಬರೂ ತಾವು ಓದುವುದರಿಂದಾಗಲೀ, ಕೇಳುವುದರಿಂದಾಗಲೀ ಕಲಿತುಕೊಂಡ ತಮ್ಮ ತಿಳುವಳಿಕೆಯನ್ನು ವ್ಯಕ್ತಪಡಿಸುವ ಅವಕಾಶಗಳಿಗೆ ಪ್ರೋತ್ಸಾಹಿಸಬೇಕು. ಇದರ ಉದ್ದೇಶ ಅವರು ತಿಳುಕೊಂಡದ್ದರಲ್ಲಿ ಏನಾದರೂ ತಪ್ಪು ದೋಷಗಳಿವೆಯೇ ಎಂದು ಕಂಡುಕೊಂಡು ಈ ವಿಷಯದಲ್ಲಿನ ಇತರರ ಹೇಳಿಕೆಗಳಿಂದ ಅವನ್ನು ಸರಿಪಡಿಸಬಹುದು.

(3) ಆಗಾಗ್ಗೆ ನಿಯಮಿತವಾದ ರೀತಿಯಲ್ಲಿ ಕೂಟಗಳನ್ನು ಏರ್ಪಡಿಸಿ ಅದರಲ್ಲಿ ಸಭೆಯು ಸಾಮಾನ್ಯವಾಗಿ ಒಪ್ಪಿಕೊಂಡು ಪಾಲಿಸುತ್ತಿರುವುದಕ್ಕಿಂತ ವಿಭಿನ್ನವಾದ ಸತ್ಯದ ದೃಷ್ಟಿಕೋನವಿದೆಯೆಂದು ನಂಬಿದವರು ಅದನ್ನು ವ್ಯಕ್ತಪಡಿಸುವ ಅವಕಾಶಗಳನ್ನು ನೀಡಬೇಕು.

(4) ಎಲ್ಲಾ ದೇವಜನರಿಗೆ ಸಂಬಂಧಿಸಿದ ಎಲ್ಲಾ ಕೂಟಗಳಿಗೂ ಅನ್ವಯಿಸುವ ದೇವಾರಾಧನೆ ಮಾತ್ರವೇ ಇರಬಾರದು. ಆದರೆ ಸಹೋದರರ ಬಾಯಿಂದ ಬರುವ ಅರಿಕೆಯ ಮಾತುಗಳನ್ನು ಕರ್ತನಿಗೆ ಆತನ ಸಾಕ್ಷಿ ಅಥವಾ ಪ್ರಾರ್ಥನೆ ಅಥವಾ ಆರಾಧನೆಯಲ್ಲಿ ಆಲಿಸುವುದು ಹೆಚ್ಚು ಉಪಯುಕ್ತವೆಂದು ಅನುಭವದಿಂದ ಕಂಡು ಬರುತ್ತದೆ.

## ಸಿದ್ಧಾಂತವು ಇನ್ನೂ ಅವಶ್ಯ
## Doctrine Still Necessary

ಮೊದಲನೆಯ ಪ್ರಸ್ತಾಪವನ್ನು ಗೌರವಿಸುವಂತೆ: ಸಿದ್ಧಾಂತಗಳು ಸಾಮಾನ್ಯವಾಗಿ ಅಪಹಾಸ್ಯಕ್ಕೊಳಗಾಗುತ್ತಿರುವ ಮತ್ತು ಕಾರ್ಯ ಮತ್ತು ನೀತಿಗೆ ಹೋಲಿಸಿದಲ್ಲಿ ಸಿದ್ಧಾಂತ ಮತ್ತು ನಂಬಿಕೆಗೆ ಹೆಚ್ಚು ಬೆಲೆಯಿಲ್ಲ ಎಂದು ಬಹಳಷ್ಟು ಜನರು ಹೇಳಿಕೊಳ್ಳುವ ಈ ಸಮಯದಲ್ಲಿ ನಾವು ಜೀವಿಸುತ್ತಿದ್ದೇವೆ. ನಾವು ಇದನ್ನು ಒಪ್ಪುವುದಿಲ್ಲ. ಯಾಕೆಂದರೆ, ನಂಬಿಕೆಗೆ ಪ್ರಥಮ ಆದ್ಯತೆ, ನಂತರದ ಕಾರ್ಯಗಳಿಗೆ ಎರಡನೆಯ ಆದ್ಯತೆ ನೀಡುವ ದೇವರ ಮಾತಿಗೆ ಇದು ಸಂಪೂರ್ಣ ಅನುಸಾರವಾಗಿ ಇಲ್ಲ. ನಮ್ಮ ನಂಬಿಕೆಯನ್ನೇ ದೇವರು ಅಂಗೀಕರಿಸುವುದು. ಈ ಲೋಕದ ಮಣ್ಣಿನ ಘಟದ ಬಲಹೀನತೆಗಳು ಅನುಮತಿಸುವಂತೆ ಸಾಧ್ಯವಾದಷ್ಟೂ ಒಳ್ಳೆಯ ಕಾರ್ಯಗಳನ್ನು ನಮ್ಮ ನಂಬಿಕೆಯ ಮೂಲಕ ಮಾಡಬಹುದೆಂದು ಕರ್ತನು ಅಪೇಕ್ಷಿಸುವನಾದರೂ ನಮ್ಮ ವಿಶ್ವಾಸಕ್ಕನುಸಾರವಾಗಿಯೇ ಆತನು ನಮಗೆ ತಕ್ಕ ಪ್ರತಿಫಲ ನೀಡುವವನಾಗಿದ್ದಾನೆ. ದೇವರ ವಾಕ್ಯದ ಎಲ್ಲೆಡೆಯಲ್ಲಿಯೂ ವಿಶ್ವಾಸದ ಇದೇ ನಿಯಮವು ಕಂಡುಬರುವುದು. "ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ" (ಇಬ್ರಿಯ 11:6). "ಲೋಕವನ್ನು ಜಯಿಸುವಂಥದು ನಮ್ಮ ನಂಬಿಕೆಯೇ" (1 ಯೋಹಾ. 5:4). ಆದುದರಿಂದ ದೇವರಲ್ಲಿ ಮತ್ತು ಆತನ ವಾಗ್ದಾನಗಳಲ್ಲಿ ನಂಬಿಕೆಯಿಡದೆ ಯಾರೊಬ್ಬರೂ ಸರಿಯಾದ ರೀತಿಯಲ್ಲಿ ಜಯಿಸಿ ಬರಲು ಸಾಧ್ಯವಿಲ್ಲ. ದೇವರ ವಾಗ್ದಾನಗಳಲ್ಲಿ ವಿಶ್ವಾಸವಿಡುವ ಸಲುವಾಗಿ ಆತನು ಅವುಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ನಂಬಿಕೆಯಲ್ಲಿ ಬಲವಾಗಿ ಬೆಳೆಯುವ ಈ ಅವಕಾಶವು ಆತನು ಯುಗಾಂತರಗಳ ದೇವರ ಯೋಜನೆಯನ್ನು ಮತ್ತು ಅದಕ್ಕೆ ಅಂಟಿಕೊಂಡಿರುವ ಅಮೂಲ್ಯ ವಾಗ್ದಾನಗಳನ್ನು ಅರ್ಥಮಾಡಿಕೊಂಡಿರುವ ಅನುಪಾತಕ್ಕೆ ಅನುಸಾರವಾಗಿರುತ್ತದೆ. ಆದುದರಿಂದ ಇವು ದೇವಜನರಿಗೆ ಇರಬೇಕಾದ ಜ್ಞಾನ ಮತ್ತು ತಿಳುವಳಿಕೆಗಾಗಿ ಹಾಗೂ ಅವುಗಳನ್ನು ದೇವರಿಗೆ ಸಂಬಂಧಿಸಿದ ಸಂಗತಿಗಳಲ್ಲಿ ಭೂಲೋಕದ ಸಂಗತಿಗಳಿಗಿಂತ ಹೆಚ್ಚಾಗಿ ಆನಂದಿಸಲು ಮಾತ್ರವಲ್ಲ, ಆದರೆ ವಿಶೇಷವಾಗಿ ಈ ಜ್ಞಾನವು ಎಲ್ಲಾ ನಿರೀಕ್ಷೆಗಳು, ಧ್ಯೇಯಗಳು ಮತ್ತು ನಡತೆಗಳ ಮೇಲೆ ಉಂಟುಮಾಡುವ ಪ್ರಭಾವದಿಂದಾಗಿ ಸಿದ್ಧಾಂತವು ಅಂದರೆ ಆದೇಶಗಳು ಮುಖ್ಯವಾದವುಗಳು. "ಆತನ ಮೇಲೆ ಈ ನಿರೀಕ್ಷೆಯನ್ನಿಟ್ಟಿರುವ ಪ್ರತಿಯೊಬ್ಬನೂ ಕ್ರಿಸ್ತನು ಶುದ್ಧನಾಗಿರುವಂತೆಯೇ ತನ್ನನ್ನು ಶುದ್ಧ ಮಾಡಿಕೊಳ್ಳುತ್ತಾನೆ" (1ಯೋಹಾನ 3:3) ಎಂಬುದು ದೇವರ ವಾಕ್ಯದ ಹೇಳಿಕೆಯಾಗಿದ್ದು ಇದು ಈ ಮೊದಲಿನ ಹೇಳಿಕೆಗಳಿಗೆ ಹೊಂದಿಕೆಯಾಗುತ್ತದೆ. ಯಾವಾತನು ತನ್ನನ್ನು ಶುದ್ಧೀಕರಿಸಿಕೊಳ್ಳಲು, ತನ್ನ ನಡತೆಗಳನ್ನು ಸ್ವಚ್ಛಗೊಳಿಸಿಕೊಳ್ಳಲು ಹವಣಿಸುತ್ತಾನೋ ಆತನು ಅದರಲ್ಲಿ ಜಯಹೊಂದಲು ದೇವರವಾಕ್ಯದಲ್ಲಿ ಪ್ರಾರಂಭಿಸಿರುವಂತೆಯೇ ಹೃದಯ ಪೂರ್ವಕವಾಗಿ ಪ್ರಾರಂಭಿಸಬೇಕು ಮತ್ತು ತನ್ನನ್ನು ಸ್ವಚ್ಛಗೊಳಿಸಲು ಅವುಗಳಲ್ಲಿನ ಸ್ಫೂರ್ತಿದಾಯಕ ವಾಗ್ದಾನಗಳನ್ನು ಉಪಯೋಗಿಸಿಕೊಳ್ಳಬೇಕು. ಕ್ರಿಸ್ತನ ಸಿದ್ಧಾಂತಗಳ ಜ್ಞಾನವೆಂದರೆ ಇದೇ ಅರ್ಥ.

ಏನೇ ಆದರೂ ನಾವು ಕ್ರಿಸ್ತನ ಸಿದ್ಧಾಂತಗಳನ್ನು, ಮಾನವರ ಸಿದ್ಧಾಂತಗಳನ್ನು ಸ್ಪಷ್ಟವಾಗಿ ಬೇರ್ಪಡಿಸುವುದು ಯುಕ್ತವಾಗಿದೆ. ಕ್ರಿಸ್ತನ ಸಿದ್ಧಾಂತಗಳನ್ನು ಆತನು ಮತ್ತು ಆತನ ಸ್ಫೂರ್ತಿಭರಿತ ಅಪೋಸ್ತಲರುಗಳು ಹೊಸ ಒಡಂಬಡಿಕೆಯಲ್ಲಿ ನಮ್ಮ ಮುಂದೆ ಇಟ್ಟಿದ್ದಾರೆ. ಮಾನವರ ಸಿದ್ಧಾಂತಗಳು ಮಾನವ ನಂಬಿಕೆಯ ಮತಧರ್ಮವನ್ನು ಪ್ರತಿನಿಧಿಸಲ್ಪಟ್ಟಿವೆ. ಅವುಗಳಲ್ಲಿ ಹೆಚ್ಚಾದವು ಕರ್ತನ ಸಿದ್ಧಾಂತಗಳಿಗೆ ದಟ್ಟವಾಗಿ ಮತ್ತು ಗಂಭೀರವಾದ ರೀತಿಯಲ್ಲಿ ವ್ಯತ್ಯಾಸಗಳನ್ನು ಹೊಂದಿದೆ. ಅವುಗಳು ಪರಸ್ಪರರಿಗೆ ಒಪ್ಪಿಗೆಯಾಗುವುದಿಲ್ಲ. ಇದಕ್ಕೂ ಹೆಚ್ಚಾಗಿ ನಾವು ಒಮ್ಮೆ ಮಾತ್ರವೇ ಸಿದ್ಧಾಂತಗಳನ್ನು ಹೊಂದಿಕೊಂಡರಷ್ಟೇ ಸಾಲದು; ಅಪೋಸ್ತಲನು ತಿಳಿಸುವಂತೆ ನಾವು ದೇವಕೃಪಾನಿಧಿಯನ್ನು ನಮ್ಮ ಬಡ ಹಾಗೂ ಸೋರಿಹೋಗುವ ಮಣ್ಣಿನ ಘಟದಲ್ಲಿ ಸ್ವೀಕರಿಸುತ್ತೇವೆ. ಆದುದರಿಂದ ನಾವು ಸ್ವೀಕರಿಸುವುದನ್ನು ನಿಲ್ಲಿಸಿದರೆ, ಅದನ್ನು ಹೊಂದುವುದು ನಿಂತುಹೋಗುತ್ತದೆ. ಈ ಕಾರಣದಿಂದ ನಾವು ಆಜ್ಞೆಯ ಮೇಲೆ ಆಜ್ಞೆ, ಸೂತ್ರದಮೇಲೆ ಸೂತ್ರ ಎಂಬಂತೆ ಹೊಂದಿಕೊಳ್ಳುತ್ತೇವೆ ಮತ್ತು ಅದನ್ನು ನಾವು ನಿರಂತರವಾಗಿ ನವೀಕರಿಸಿಕೊಳ್ಳುತ್ತೇವೆ ಮತ್ತು ಯುಗಯುಗಾಂತರ ದೈವಿಕ ಯೋಜನೆಗಳನ್ನು ದೇವರು ಒದಗಿಸುವ ಯಾವುದೇ ಸಹಾಯದ ನೆರವಿನಿಂದ ಪುನರಾವಲೋಕನ ಮಾಡಿಕೊಳ್ಳುತ್ತೇವೆ ಹಾಗೂ ಸಾಧ್ಯವಾದಷ್ಟು ಅಪೋಸ್ತಲರ ಈ ಪ್ರತಿಬಂಧಕಾಜ್ಞೆಗಳಿಗೆ ವಿಧೇಯರಾಗಲು ಬಯಸುತ್ತೇವೆ :–

"ವಾಕ್ಯದ ಪ್ರಕಾರ ನಡೆಯುವವರಾಗಿರಿ; ಅದನ್ನು ಕೇಳುವವರು ಮಾತ್ರವೇ ಆಗಿದ್ದು ನಿಮ್ಮನ್ನು ನೀವೇ

ಮೋಸಗೊಳಿಸಬೇಡಿರಿ. ಯಾವನಾದರೂ ವಾಕ್ಯವನ್ನು ಕೇಳುವವನಾದರೂ ಅದರ ಪ್ರಕಾರ ನಡೆಯದಿದ್ದರೆ ಅವನು ಕನ್ನಡಿಯಲ್ಲಿ ತನ್ನ ಹುಟ್ಟು ಮುಖವನ್ನು ನೋಡಿದ ಮನುಷ್ಯನಂತಿರುವನು; ಇವನು ತನ್ನನ್ನು ನೋಡಿಕೊಂಡು ಹೋಗಿ ತಾನು ಹೀಗಿದ್ದೇನೆ ಎಂಬುದನ್ನು ಆ ಕ್ಷಣವೇ ಮರೆತುಬಿಡುವನು. ಆದರೆ ಬಿಡುಗಡೆಯನ್ನುಂಟುಮಾಡುವ ಸರ್ವೋತ್ತಮ ಧರ್ಮಪ್ರಮಾಣವನ್ನು ಲಕ್ಷ್ಯಕೊಟ್ಟು ನೋಡಿ ಇನ್ನೂ ನೋಡುತ್ತಲೇ ಇರುವವನು ವಾಕ್ಯವನ್ನು ಕೇಳಿ ಮರೆತು ಹೋಗುವವನಾಗಿರದೆ ಅದರ ಪ್ರಕಾರ ನಡೆಯುವವನಾಗಿದ್ದು ತನ್ನ ನಡತೆಯಿಂದ ಧನ್ಯನಾಗುವನು" (ಯಾಕೋಬ 1 :22–25)

ನಮ್ಮ ಎರಡನೆಯ ಪ್ರಸ್ತಾಪವನ್ನು ಮೊದಲನೆಯದಂತೆ ಪೂರ್ಣವಾಗಿ ಒಪ್ಪಿಕೊಳ್ಳದಿರಬಹುದು. ಇದು ಹಲವರ ಅಲೋಚನೆಗೆ ತಕ್ಕಂತೆ ಇದೆ. ಎಲ್ಲರದ್ದೂ ಅಲ್ಲವಾದರೂ, ಸತ್ಯವನ್ನು ಸ್ಪಷ್ಟವಾಗಿ, ಸುಲಲಿತವಾಗಿ, ನಿಕೃಷ್ಟವಾಗಿ ವ್ಯಕ್ತಪಡಿಸುವವರು ಮಾತ್ರವೇ ಇದನ್ನು ವ್ಯಕ್ತಪಡಿಸಲು ಸಾಧ್ಯ. ಇತರರು ಮೌನವಾಗಿದ್ದು, ಆಲಿಸಿ ಇದನ್ನು ಕಲಿತುಕೊಳ್ಳಬೇಕು. ಈ ಅಲೋಚನೆಯು ಅನೇಕ ವಿಧದಲ್ಲಿ ಸರಿಯಾಗಿದೆ. ಆದೇಶಗಳನ್ನು ನೀಡಲು ಅಸಮರ್ಥರಾದವರು, ದೇವರ ಯೋಜನೆಗಳನ್ನು ಸರಿಯಾಗಿ ಗ್ರಹಿಸಿಕೊಳ್ಳಲಾರದವರು ಬೋಧಿಸಬೇಕೆಂಬುದು ನಮ್ಮ ಸಲಹೆಯಲ್ಲ. ಆದರೆ ಇಂಥವರನ್ನು ಹಿರಿಯರ ವಿಷಯದಲ್ಲಿದ್ದಂತೆ ಬೋಧಿಸುವಂತೆ ಮಾಡುವಲ್ಲಿ ಮತ್ತು ಅವರ ಪ್ರಶ್ನೆಗಳನ್ನು ಅಥವಾ ಶಂಕೆಗಳನ್ನು ಮತ್ತು ಅಭಿಪ್ರಾಯಗಳನ್ನು ಸಭೆಯು ಸಮೂಹದ ಚಿತ್ತವೃತ್ತಿಗನುಸಾರವಾಗಿ ಎತ್ತಿಹಿಡಿಯುವುದಿಲ್ಲವೆಂಬ ತಿಳುವಳಿಕೆಯಿಂದ ಎಲ್ಲಾ ನೂತನ ಸೃಷ್ಟಿಗಳು ಒಂದೆಡೆ ಕೂಡಿಕೊಂಡು ಸಂಕ್ಷಿಪ್ತವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದರಲ್ಲಿ ಅಥವಾ ಪ್ರಶ್ನೆ ಕೇಳುವುದರಲ್ಲಿ ಬಹಳಷ್ಟು ವ್ಯತ್ಯಾಸವುಂಟು. ಅಂಥಹ ಕೂಟಗಳಲ್ಲಿ ತಪ್ಪು ಅಭಿಪ್ರಾಯಗಳು ಪ್ರಶ್ನೆಯ ರೂಪದಲ್ಲಿ ಹೊರಬೀಳಬಹುದು. ಇಂತಹ ಅಭಿಪ್ರಾಯಗಳನ್ನು ಬೋಧಿಸಬೇಕೆಂಬ ಉದ್ದೇಶದಿಂದಲ್ಲ, ಅಥವಾ ಅವನ್ನು ಬಲವಂತವಾಗಿ ಹೇರಬೇಕೆಂಬ ಉದ್ದೇಶದಿಂದಲ್ಲ ಆದರೆ ಅವುಗಳ ಟೀಕೆಯು ಅಗತ್ಯವಿದ್ದಲ್ಲಿ ಅವುಗಳನ್ನು ಟೀಕಿಸಲು ಅಥವಾ ಪ್ರಶಂಸಾರ್ಹವಾಗಿದ್ದರೆ ಅವನ್ನು ಪ್ರಶಂಸಿಸುವದೃಷ್ಟಿಯಿಂದ ಸತ್ಯದಲ್ಲಿ ಮುಂದುವರೆದವರ ಮತ್ತು ತನ್ನ ವಿಶ್ವಾಸದ ಬಗ್ಗೆ ದೇವರ ವಾಕ್ಯದ ಕಾರಣಗಳನ್ನು ನೀಡಲು ಹಾಗೂ ದೇವರ ಮಾರ್ಗವನ್ನು ಸಮರ್ಪಕವಾಗಿ ತೋರಿಸಲು ಶಕ್ತರಾದವರ ಮುಂದೆ ಮಾತ್ರವೇ ಇಂಥಹ ಅವಕಾಶಗಳನ್ನು ನೀಡಬಹುದು. ಇಂತಹ ಕ್ರಮಗಳಿಂದ ದೊರೆಯುವ ಅನುಕೂಲಗಳೇನು ಎಂದು ಪ್ರಶ್ನಿಸುವಲ್ಲಿ ಅನುಕೂಲತೆಗಳು ನಿರೂಪಿಸಲ್ಪಟ್ಟಿರುವುದನ್ನು ಆಗಾಗ್ಗೆ ನಾವು ನೋಡುತ್ತಿರುತ್ತೇವೆ ಎಂಬ ಉತ್ತರವನ್ನು ಕೊಡುತ್ತೇವೆ. ಕೆಲವೊಮ್ಮೆ ಇಂತಹ ವಿಷಯಗಳನ್ನು ಸರಳವಾದ ಮತ್ತು ನೇರವಾದ ರೀತಿಯಲ್ಲಿ ಹೇಳುವುದು ಸುಲಭವಲ್ಲ, ನಿಜವಾಗಿ ಹೇಳುವುದಾದರೆ ಸಾಧ್ಯವಿಲ್ಲ. ಅದೇ ಉದಾಹರಣೆಯಿಂದ ಎಲ್ಲರಿಗೂ ಅವರು ಎಷ್ಟೇ ಪ್ರಾಮಾಣಿಕರಾಗಿದ್ದರೂ ಇಂತಹ ವಿಷಯಗಳನ್ನು ಸಮಾನವಾದ ಸ್ಪಷ್ಟತಾ ಪ್ರಮಾಣದಲ್ಲಿ ಗ್ರಹಿಸಿಕೊಳ್ಳಲು ಸಾಧ್ಯವಿಲ್ಲ. ಆದುದರಿಂದ ಕರ್ತನ ಸಾಮ್ಯಗಳಲ್ಲಿ ವಿಶದಗೊಳಿಸಿರುವಂತೆ ಅದೇ ಸತ್ಯದ ವಿವಿಧ ರೀತಿಯ ಪ್ರಸ್ತುತಿ ಮತ್ತು ಏಳುವ ವಿವಿಧ ಪ್ರಶ್ನೆಗಳು ಹೆಚ್ಚು ಪೂರ್ಣವಾದ ಮತ್ತು ಸಾಮರಸ್ಯವಾದ ಸಮಗ್ರ ದೃಷ್ಟಿ ಕೋನವನ್ನು ಒದಗಿಸುತ್ತವೆ. ಹೀಗಿದ್ದರೂ ನಾವು ದೊಡ್ಡ ತಪ್ಪಿನ ಮತ್ತು ಅಡ್ಡಾದಿಡ್ಡಿಯಾದ ಹೇಳಿಕೆಗಳು ಅಸ್ವಸ್ಥವಾದ ಮತ್ತು ತರ್ಕಬದ್ಧವಾದ ಹೇಳಿಕೆಗಳು ವಿಫಲಗೊಂಡಿರುವ ಕೆಲವರ ಮನಸ್ಸಿನಲ್ಲಿ ಪ್ರವೇಶಿಸಿ, ಹೇಳುವವರ ಅಯೋಗ್ಯತೆಯು ಯಾವುದೋ ಒಂದು ರೀತಿಯಲ್ಲಿ ಕೇಳುವವರ ಕೆಳಮಟ್ಟದ ವಿವೇಚನೆ ಮತ್ತು ನಿರ್ಣಯಗಳಿಗೆ ಹೊಂದಿಕೆಯಾಗಿ ಬಿಡುತ್ತವೆ. ಸುವಾರ್ತೆಯು ಸಾರಲ್ಪಟ್ಟು ಹಸಿದವರ ಹೃದಯದಲ್ಲಿ ವಾಸಸ್ಥಳವನ್ನು ಕಂಡುಕೊಳ್ಳುವುದಾದಲ್ಲಿ ನಾವು ಸಂತೋಷಿಸಬೇಕು. ಅದು ಯಾವುದೇ ಸಾಧಕ ಮಾರ್ಗವಾಗಿರಬಹುದು. ಅಪೋಸ್ತಲನು ವಿವರಿಸುವಂತೆ "ಕೆಲವರು ಹೊಟ್ಟೆಕಿಚ್ಚುಪಟ್ಟು ಬೇಧ ಹುಟ್ಟಿಸಬೇಕೆಂಬ ಭಾವನೆಯಿಂದ ಕ್ರಿಸ್ತನನ್ನು ಪ್ರಚುರ ಪಡಿಸುತ್ತಾರೆ"(ಫಿಲಿ. 1:15). ಅದರಿಂದ ಯಾರಾದರೂ ಕ್ರಿಸ್ತನ ಸರಿಯಾದ ತಿಳುವಳಿಕೆಗೆ ಬರುವುದಾದರೆ ಮಾತ್ರ ನಾವು ಸಂತೋಷಿಸಬಹುದು. ಆದಾಗ್ಯೂ ಪ್ರಸ್ತುತಿಪಡಿಸುವಿಕೆಯ ಸರಿಯಲ್ಲದ ಉದ್ದೇಶಗಳಿಗಾಗಿ ಅಥವಾ ಪ್ರಸ್ತುತಿಯು ಅಸಮಂಜಸವಾಗಿರುವುದಕ್ಕಾಗಿ ನಾವು ವಿಷಾದಿಸಬೇಕಾಗುತ್ತದೆ. ನಾವು ಪ್ರೀತಿಸುವುದು ಮತ್ತು ಸೇವೆ ಮಾಡಲು ಬಯಸುವುದು ಕರ್ತನನ್ನು, ಸತ್ಯವನ್ನು ಮತ್ತು ನಮ್ಮ ಸಹೋದರರನ್ನು. ಆದುದರಿಂದ ಅಪೇಕ್ಷಿತ ಫಲವನ್ನುಂಟು ಮಾಡುವ ಯಾವುದಕ್ಕೂ ನಾವು ಸಂತೋಷಿಸಬೇಕು. ಮತ್ತು ಇದನ್ನು ಸತ್ಯವೆಂದು ಗ್ರಹಿಸುವ ನಾವು ಇದರಲ್ಲಿ ಮಧ್ಯೆ ಪ್ರವೇಶಿಸದಂತೆ ವ್ಯವಸ್ಥೆ ಮಾಡಿಕೊಳ್ಳಬೇಕು. ಇದರಿಂದ ಕುತರ್ಕಿಗಳಿಗೂ ಮತ್ತು ಅಸಮರ್ಥರಿಗೂ ಸಭೆಯಲ್ಲಿ ಬೋಧಿಸಲು ಬಿಡಬಹುದೆಂದು ಇದು ಸೂಚಿಸುವುದಿಲ್ಲ. ಅಥವಾ ನಾವು ಕುತರ್ಕ ಪ್ರಸ್ತುತಿಯು ಸಾಮಾನ್ಯವಾಗಿ ಹೆಚ್ಚು ಫಲಪ್ರದವಾದೀತೆಂದು ನಾವು ಊಹಿಸಬಾರದು. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಕೆಲವೊಮ್ಮೆ ನಾವು ನೋಡುವುದು ಕೆಲವರ ಮನಸ್ಸಿಗೆ ಆಶೀರ್ವಾದದಾಯಕವಾಗಿದೆ ಮತ್ತು ಪ್ರಾಚೀನ ಸಭಾ ಉಪಯೋಗಿಸುವಿಕೆಯ ಹಿನ್ನೆಲೆಯನ್ನು ಪಡೆದಿದೆ ಎಂಬುದನ್ನು ನಾವು ಸಂಪೂರ್ಣವಾಗಿ ಅಲಕ್ಷಿಸಬಾರದು.

ನಮ್ಮ ಮೂರನೆಯ ಪ್ರಸ್ತಾಪವನ್ನು ಬೆಂಬಲಿಸುವಂತೆ: ನಮ್ಮಲ್ಲಿ ಸತ್ಯವಿದೆ ಎಂಬುದರ ಬಗ್ಗೆ ನಮಗೆ ಎಷ್ಟೇ ಭರವಸೆಯಿರಲಿ, ಅದನ್ನು ಪ್ರಶ್ನಿಸುವ ದಾರಿಯ ಬಾಗಿಲನ್ನು ಮುಚ್ಚುವುದಾಗಲೀ, ಅದಕ್ಕೆ ಬೀಗಹಾಕುವುದಾಗಲೀ ಮತ್ತು ಅವುಗಳು ದೋಷಪೂರಿತವೆಂದು ಸಭಾಕೂಟದ ನಾಯಕನು ಅಥವಾ ಸಭೆಯವರು ಪರಿಗಣಿಸಬಹುದಾದ ವ್ಯತಿರಿಕ್ತವಾದ ಹೇಳಿಕೆಗಳನ್ನು ಬಿಟ್ಟುಬಿಡುವುದು ಬುದ್ಧಿವಂತಿಕೆ ಎನಿಸದು. ಈ ರೀತಿ ಬಿಟ್ಟುಬಿಡಲು ಅಥವಾ ಹೊರಹಾಕಲು ಒಂದು ಮಿತಿಯು ಮಾತ್ರವೇ ಬಳಕೆಯಲ್ಲಿರಬೇಕು. ಯಾವುದೆಂದರೆ, ನೂತನ ಸೃಷ್ಟಿಯ ಕೂಟವು ಇಹಲೋಕದ ಸಂಗತಿಗಳನ್ನು, ಪ್ರಾಪಂಚಿಕ ವಿಜ್ಞಾನ, ತತ್ವಜ್ಞಾನ ಇತ್ಯಾದಿಗಳನ್ನು ಪರಿಶೀಲಿಸಲು ಇಚ್ಛಿಸದೇ ಕೇವಲ ದೈವಿಕ ಪ್ರಕಟನೆಗಳನ್ನು ಮಾತ್ರವೇ ಅಧ್ಯಯನ ಮಾಡಲು ಬಯಸಿದಲ್ಲಿ, ದೈವಿಕ ಪ್ರಕಟನೆಗಳ ಅಧ್ಯಯನದಲ್ಲಿಯೂ ಸಹಾ

ಸಭೆಯು ಕ್ರಿಸ್ತನ ಪ್ರಾಥಮಿಕ ಸಿದ್ಧಾಂತಗಳು (ಇದನ್ನು ಯಾರೊಬ್ಬರೂ ಬದಲಾಯಿಸುವ, ಹೆಚ್ಚುಕಡಿಮೆ ಮಾಡುವ ಅಥವಾ ಪ್ರಶ್ನಿಸುವ ಅನುಮತಿಯನ್ನು ಹೊಂದಿರುವುದಿಲ್ಲ) ಮತ್ತು ಪ್ರಾಥಮಿಕ ಸಿದ್ಧಾಂತಗಳಿಗೆ ಪೂರಕವಾಗಿರುವ ಸುಧಾರಿತ ಸಿದ್ಧಾಂತಗಳ ಮೇಲಿನ ಚರ್ಚೆ ಇವುಗಳಲ್ಲಿನ ವ್ಯತ್ಯಾಸಗಳನ್ನು ಪ್ರಥಮವಾಗಿ, ಮಧ್ಯಮವಾಗಿ ಮತ್ತು ಅಂತಿಮವಾಗಿ ಗ್ರಹಿಸಬೇಕು. ಎರಡನೆಯದನ್ನು ಸದಾಕಾಲ ಪೂರ್ಣವಾಗಿ ಮತ್ತು ಮುಕ್ತವಾಗಿ ಆಲಿಸುವ ಅವಕಾಶಗಳಿರುತ್ತವೆ. ಆದರೆ ಇದರಿಂದ ಒಬ್ಬ ವ್ಯಕ್ತಿಯು ಸದಾ ಪ್ರತಿಯೊಂದು ಕೂಟದಲ್ಲಿಯೂ ಕಳವಳವನ್ನುಂಟುಮಾಡಿ ದಿಕ್ಕುತಪ್ಪಿಸುವ ಹವ್ಯಾಸಕ್ಕೆ ಅನುಮತಿ ನೀಡಿ ಅವನ್ನು ಮೇಲಿಂದ ಮೇಲೆ ಕೇಳಲೇಬೇಕೆಂದಲ್ಲ. ಆತನ ಹವ್ಯಾಸಕ್ಕೆ ಹಿತಮಿತವಾದ ಆಲಿಕೆ ಇರಲಿ ಮತ್ತು ಆ ಬಗ್ಗೆ ಸತ್ಯದಲ್ಲಿ ಪರಿಣಿತರಾದವರ ಮುಂದೆ ಸೂಕ್ತವಾದ ಸಮಯದಲ್ಲಿ ನಿಷ್ಪಕ್ಷಪಾತವಾದ ಚರ್ಚೆಯೂ ನಡೆಯಲಿ. ಆಗ ಅದು ದೇವರವಾಕ್ಯದ ಪ್ರಕಾರವಾಗಿಲ್ಲವೆಂದು ಸಭೆಯಿಂದ ತಳ್ಳಿ ಹಾಕಲ್ಪಟ್ಟರೆ ಆ ಆಲೋಚನೆಯನ್ನು ಬೆಂಬಲಿಸುವಾತನಿಗೆ ಮನದಟ್ಟು ಆಗದೇ ಹೋದಲ್ಲಿ ಆತನು ಕನಿಷ್ಟ ಆ ಪ್ರಸ್ತಾಪವನ್ನು ದೀರ್ಘಕಾಲ ಬಹುಶಃ ಒಂದು ವರ್ಷವಾದರೂ ಸಭೆಯ ಮೇಲೆ ಒತ್ತಾಯಿಸುವುದರಿಂದ ದೂರ ಸರಿಯಲಿ. ನಂತರ ಆತನು ಯಾವುದೇ ಔಚಿತ್ಯವಿಲ್ಲದೆ ಮತ್ತೊಂದು ವಿಚಾರಣೆಗೆ ಕೋರಿಕೊಳ್ಳಬಹುದು. ಆದರೆ ಸಭೆಯು ಇದರ ವಿಚಾರಣೆಯ ಮತ್ತು ಪುನರ್‌ಪರಿಶೀಲನೆಯ ಅರ್ಹತೆ ಅಥವಾ ಅನರ್ಹತೆಯನ್ನು ಅಲೋಚಿಸಿ ಈ ಕೋರಿಕೆಯನ್ನು ಮನ್ನಿಸಬಹುದು ಅಥವಾ ಮನ್ನಿಸದಿರಬಹುದು.

ನಾವು ಹುರಿದುಂಬಿಸುವುದೇನೆಂದರೆ, ಅಂತಹ ಕೆಲವು ಅವಕಾಶಗಳು ಇಲ್ಲದೇ ಹೋದಲ್ಲಿ ಎರಡು ವಿಧವಾದ ಗಂಡಾಂತರಗಳನ್ನು ಎದುರಿಸಬೇಕಾಗುವುದು; ಮೊದಲನೆಯದು, ಈಗ ಕ್ರೈಸ್ತರಾಜ್ಯದಲ್ಲಿನ ನಾಮಾಂಕಿತ ಸಭೆಗಳಲ್ಲಿ ಇರುವ ಪರಿಸ್ಥಿತಿಗೆ ಬೀಳುವುದು. ಇದರಲ್ಲಿ ಅವರ ವ್ಯವಸ್ಥಿತ ಕೂಟಗಳ ಮೂಲಕ ಕಿವಿಗಳಿಗೆ ಪ್ರವೇಶಮಾರ್ಗವನ್ನು ಕಂಡುಕೊಳ್ಳುವುದು ಅಸಾಧ್ಯವಾದುದರಿಂದ ಇದಕ್ಕೆ ಸಮೀಪಿಸುವ ಎಲ್ಲಾ ಮಾರ್ಗಗಳೂ ಜಾಗರೂಕತೆಯಿಂದ ಹತೋಟಿಯಲ್ಲಿಡಲ್ಪಟ್ಟಿವೆ. ಮತ್ತೊಂದು ಗಂಡಾಂತರವೆಂದರೆ, ಒಬ್ಬ ವ್ಯಕ್ತಿಯು ತನ್ನ ಸೂತ್ರದ ಪ್ರಕಾರ ಸತ್ಯವೆಂದು ಕಂಡುಬರುವುದನ್ನು ಅದು ಎಷ್ಟೇ ತಪ್ಪು ಮತ್ತು ವಿಚಾರಹೀನವಾಗಿದ್ದರೂ ಒಂದು ಯುಕ್ತವಾದ ವಿಚಾರಣೆಯಿಲ್ಲದೆ ತೃಪ್ತಿಹೊಂದಲಾರ ಮತ್ತು ಆತನು ನಿರಂತರವಾಗಿ ಆ ಪ್ರಸ್ತಾಪದಲ್ಲಿ ತಲೆ ಹಾಕುವವನಾಗಿರುತ್ತಾನೆ; ಆದರೆ, ಅದನ್ನು ಯುಕ್ತವಾದ ರೀತಿಯಲ್ಲಿ ಆಲಿಸಿದಾಗ, ಆತನಿಗೆ ತನ್ನ ವಾದದ ತಪ್ಪುಗಳು ಮನದಟ್ಟಾಗದಿದ್ದರೂ ಈಗಾಗಲೇ ತನ್ನ ಆಲೋಚನೆಯನ್ನು ಆಲಿಸಿ ಅದನ್ನು ತಳ್ಳಿಹಾಕಿದವರ ಮೇಲೆ ಪದೇ ಪದೇ ಹೇರುವ ಔಚಿತ್ಯತೆಯನ್ನು ಕಳಕೊಂಡವ ನಾಗುತ್ತಾನೆ.

ನಮ್ಮ ನಾಲ್ಕನೆಯ ಪ್ರಸ್ತಾಪ: ಜ್ಞಾನಾಭಿವೃದ್ಧಿಯು ಕೆಲವೊಮ್ಮೆ ಧರ್ಮ ನಿಷ್ಠೆಯಿಂದ ನಿಂದಾಸ್ಪದವಾಗುತ್ತದೆ. ಇದು ಬಹಳ ವಿಚಿತ್ರಕರವಾಗಿ ಕಂಡುಬರುತ್ತದೆ. ನಮ್ಮ ಯೋಗ್ಯತೆಯು ಬಹಳ ಸ್ವಲ್ಪವಾಗಿದ್ದು, ಧಾರ್ಮಿಕ ಸಂಗತಿಗಳಿಗೆ ನಮ್ಮ ಸಮಯವು ಮಿತಿಯುಳ್ಳದ್ದಾಗಿದೆ ಎಂದು ನಮಗೆ ತೋರಿಬರುತ್ತದೆ. ನಮ್ಮ ಗಮನವನ್ನು ಒಂದು ದಿಸೆಯಲ್ಲಿ ಚೈತನ್ಯಪೂರ್ವಕವಾಗಿ ಹರಿಸಿದರೆ, ಇತರ ಕಡೆಗಳಲ್ಲಿ ಅದು ಕುಬ್ಜವಾಗಿ ಕಂಡುಬರುತ್ತದೆ. ಒಬ್ಬ ಕ್ರೈಸ್ತ ಅನುಯಾಯಿಯು ಎಲ್ಲಾ ತಲೆಯಾಗಿದ್ದು ಹೃದಯಹೀನನಲ್ಲ. "ಸ್ವಸ್ಥವಾದ ಮನಸ್ಸೆಂಬ ಚೈತನ್ಯವು" ನಮ್ಮನ್ನು ಸಂಪೂರ್ಣವಾದ ಗುಣಲಕ್ಷಣಗಳಿಂದ ಸುತ್ತುವರೆದು ಎಲ್ಲಾ ಸುಫಲಗಳನ್ನೂ ಕೃಪೆಯನ್ನೂ ವೃದ್ಧಿಗೊಳಿಸಿಕೊಳ್ಳುವಂತೆ ಮಾಡುತ್ತದೆ. ನಮ್ಮ ದಿನಗಳ ಒಲವು ಎಲ್ಲಾ ವಿಷಯಗಳಲ್ಲಿಯೂ ವಿರುದ್ಧ ದಿಕ್ಕಿನತ್ತ ಅಂದರೆ ಪ್ರಾವೀಣ್ಯತೆ ಹೊಂದುವತ್ತ ಸಾಗಿದೆ. ಒಬ್ಬ ಕೆಲಸಗಾರನು ಒಂದು ಭಾಗವನ್ನು ಮಾಡಿದರೆ ಮತ್ತೊಬ್ಬನು ಮತ್ತೊಂದು ಭಾಗವನ್ನು ಮಾಡುತ್ತಾನೆ. ಆದುದರಿಂದ ಹಿಂದಿನವರಂತೆ ಈಗ ಕೆಲಸಗಾರರಿಗೆ ವ್ಯಾಪಾರದ ಎಲ್ಲಾ ಸಂಗತಿಗಳೂ ತಿಳಿದಿರುವುದಿಲ್ಲ. ನೂತನ ಸೃಷ್ಟಿಗಳು ಇಂತಹ ಧೋರಣೆಯನ್ನು ಪ್ರತಿಭಟಿಸಬೇಕು ಮತ್ತು ತನ್ನ ಪಾದಗಳಿಗೆ ನೇರವಾದ ಪಥವನ್ನು ಮಾಡಿಕೊಳ್ಳಬೇಕು. ಇಲ್ಲವಾದಲ್ಲಿ ಕೃಪೆಯ ಒಂದು ಸಂಗತಿಯನ್ನು ಅಭಿವೃದ್ಧಿಪಡಿಸಿಕೊಳ್ಳುವ ಸಮಯದಲ್ಲಿ ಆತನು ದೈವದತ್ತವಾದ ಮತ್ತೊಂದು ಶಕ್ತಿ ಅಥವಾ ಸವಲತ್ತಿನ ಸರಿಯಾದ ಪ್ರಯೋಗದ ಕೊರತೆಯುಳ್ಳವನಾಗುತ್ತಾನೆ.

ಧರ್ಮನಿಷ್ಠೆಯ ಗುಣಲಕ್ಷಣಗಳು ಎಲ್ಲಾ ಮಾನವ ಜೀವಿಗಳಲ್ಲಿಯೂ ಹೆಚ್ಚು ಅಥವಾ ಕಡಿಮೆಯಾದ ಬೆಳವಣಿಗೆಯಲ್ಲಿ ಕಂಡುಬರುತ್ತದೆ. ಈ ಮಾನಸಿಕ ಲಕ್ಷಣವನ್ನು ಶ್ರದ್ಧೆ ಅಥವಾ ಆಧ್ಯಾತ್ಮಿಕತೆ ಎಂದು ಕರೆಯುತ್ತಾರೆ. ಇವರುಗಳು ಆತ್ಮಸಾಕ್ಷಿ, ನಿರೀಕ್ಷೆ, ಮುಂತಾದಗಳನ್ನು ದಾಟಿ ಮತಧರ್ಮದ ಮಾಧ್ಯಮವನ್ನು ತಮ್ಮ ಸಹಾಯಕ್ಕೆ ಬರಮಾಡಿಕೊಳ್ಳುತ್ತಾರೆ. ಇವುಗಳನ್ನು ನಿರ್ಲಕ್ಷಿಸಿದರೆ ಉಂಟಾಗುವ ಫಲವೆಂದರೆ ಸತ್ಯದ ಪ್ರೀತಿಯಲ್ಲಿನ ಆಸಕ್ತಿಯು ಅವನತಿ ಹೊಂದುತ್ತದೆ. ಈ ಕಾರಣ ನಮ್ಮ ಹೃದಯಗಳು ದೇವರ ಕಡೆಗೆ ಆತನ ಪ್ರೀತಿಯ ಬಗ್ಗೆ ಹೆಚ್ಚಿನ ಮೆಚ್ಚುಗೆ ವ್ಯಕ್ತಪಡಿಸುತ್ತಾ ಮತ್ತು ಆತನನ್ನು ತೃಪ್ತಿಗೊಳಿಸುವಲ್ಲಿ, ಗೌರವಿಸುವಲ್ಲಿ ಮತ್ತು ಸೇವಿಸುವುದರಲ್ಲಿ ಹೆಚ್ಚಿನ ಆಸಕ್ತಿಯಲ್ಲಿ ಸಾಗುವುದರ ಬದಲು ನಾವು ಕೆಳಮಟ್ಟದ ಮಾಧ್ಯಮವು ಮೇಲಿನ ಮಾಧ್ಯಮಗಳ ಸ್ಥಾನವನ್ನು ತೆಗೆದುಕೊಂಡು ಹೆಚ್ಚಾದ ವಾಗ್ವಾದಗಳಿಗೆ ಒಳಗಾಗುವುದನ್ನು ಕಾಣುತ್ತೇವೆ. ತನಿಖೆಗಳು ಮಾನಸಿಕ ತತ್ವಶಾಸ್ತ್ರದ ಬೆಳಕಿನಲ್ಲಿ ಬರುತ್ತವೆ ಮತ್ತು ಇದರೊಳಗೆ ಹೋರಾಟದ ಸ್ವಭಾವ ಮತ್ತು ನಾಶಗೊಳಿಸುವಿಕೆ, ಮಹತ್ವಾಕಾಂಕ್ಷೆ ಮತ್ತು ಒಣಹೆಮ್ಮೆ ಇವುಗಳು ಸೇರಿಕೊಳ್ಳುತ್ತವೆ. ಆದುದರಿಂದ ನೂತನ ಸೃಷ್ಟಿಗಳು ಉಪಾಸನಾ ಆರಾಧನೆಗಳು, ಪ್ರಾರ್ಥನೆಗಳು, ಮತ್ತು ಎಲ್ಲಾ ಕೂಟಗಳ ಭಾಗವಾಗಿ ಸ್ತೋತ್ರಾರ್ಪಣೆ ಇವುಗಳಲ್ಲಿ ಮಾತ್ರವೇ ಕೂಡಿಬರುವುದಲ್ಲದೆ ಅವರಿಗೆ ವಾರಕ್ಕೊಮ್ಮೆಯಾದರೂ ಉಪಾಸನಾ ರೀತಿಯ ವಿಶೇಷ ಕೂಟಗಳ ಅಗತ್ಯವಿದೆ ಎಂದು ನಾವು ನಂಬುತ್ತೇವೆ. ಇದರಲ್ಲಿ ಅವರು ಕೂಡಿಬರುವಾಗ ಅವರಿಗೆ ಕ್ರಿಸ್ತೀಯ ಅನುಭವಗಳ ಬಗ್ಗೆ ಸಾಕ್ಷಿಯನ್ನು ನೀಡುವ ಅವಕಾಶಗಳನ್ನು ಒದಗಿಸಬೇಕು. ಆದರೆ, ಇಂತಹ ಸಾಕ್ಷಿಗಳಲ್ಲಿ ಒಂದರಿಂದ ಇಪ್ಪತ್ತು ವರ್ಷಗಳ ಅಥವಾ ಅದಕ್ಕೂ ಹಿಂದೆ

ಹೋಗಿ ಕ್ರಿಸ್ತನೆಡೆಗೆ ತಿರುಗಿಕೊಂಡ ತಮ್ಮ ಪ್ರಥಮ ಅನುಭವ ಇತ್ಯಾದಿಗಳ ಬಗ್ಗೆ ಮಾತ್ರವೇ ಹೇಳದೆ, ಇತ್ತೀಚಿನವರೆಗಿನ ಅನುಭವ ಸಾಕ್ಷಿ, ಮುಖ್ಯವಾಗಿ ತಮ್ಮ ಇಂದಿನ ಮಾನಸಿಕ ಪರಿಸ್ಥಿತಿ, ಕಳೆದ ಕೂಟದಿಂದ ಇಂದಿನವರೆಗೆ ಎಂಟು ದಿನಗಳಲ್ಲಿ ಆದ ವಿಶೇಷ ಅನುಭವಗಳು ಇವುಗಳನ್ನು ಒಳಗೊಂಡಿರಬೇಕು. ಇಂತಹ ಇತ್ತೀಚಿನವರೆಗಿನ ಸಾಕ್ಷಿಗಳು ಕೇಳುವವರಿಗೆ ಸಹಾಯಕವಾಗುತ್ತವೆ. ಕೆಲವೊಮ್ಮೆ ಅನುಕೂಲಕರ ಅನುಭವಗಳನ್ನು ಅಭ್ಯಾಸ ಮಾಡುವುದರಿಂದ ಪ್ರೋತ್ಸಾಹ ದೊರೆಯುತ್ತದೆ. ಕೆಲವೊಮ್ಮೆ ಶೋಧನೆ, ಸಂಕಟ, ಕಳವಳಗಳನ್ನು ಹೇಳಿಕೊಳ್ಳುವುದರಿಂದ ಸಮಾಧಾನ ದೊರೆಯುತ್ತದೆ. ಯಾಕೆಂದರೆ ಈ ರೀತಿ ಮಾಡುವುದರಿಂದ ಪರೀಕ್ಷಾ ಅನುಭವ ಮತ್ತು ಅಸಫಲತೆಯನ್ನು ಕಂಡವರು ತಾವು ಮಾತ್ರವೇ ಅಲ್ಲ ಎಂಬ ಗ್ರಹಿಕೆಯುಂಟಾಗುತ್ತದೆ.

ಈ ಮೂಲಕ ಪ್ರತಿಯೊಬ್ಬರೂ "ಪ್ರಿಯರೇ, ನೀವು ಪರಿಶೋಧನೆಗಾಗಿ ಪುಟಕ್ಕೆ ಹಾಕಲ್ಪಟ್ಟದ್ದಕ್ಕೆ ಆಶ್ಚರ್ಯಪಡಬೇಡಿರಿ; ವಿಪರೀತವಾದ ಸಂಗತಿ ಸಂಭವಿಸಿತೆಂದು ಯೋಚಿಸಬೇಡಿರಿ" (1ಪೇತ್ರನು4:12)ಎಂಬ ಅಪೋಸ್ತಲನ ಮಾತುಗಳ ಪೂರ್ಣವಾದ ಅರ್ಥವನ್ನು ಕಲಿತುಕೊಳ್ಳಬಹುದು. ಕರ್ತನ ಜನರೆಲ್ಲರಿಗೂ ಶೋಧನೆಗಳೂ, ಸಂಕಟಗಳು ಉಂಟಾಗುತ್ತವೆಂಬುದನ್ನು ಅವರು ಕಲಿತುಕೊಳ್ಳುತ್ತಾರೆ ಮತ್ತು ಪ್ರತಿಯೊಬ್ಬರೂ ಇತರರ ಬಗ್ಗೆ ಸಹಾನುಭೂತಿ ತೋರಿಸುವುದನ್ನೂ ಕಲಿಯುತ್ತಾರೆ. ಸಹಾನುಭೂತಿಯ ಬಂಧನವು ಹೆಚ್ಚಿದಂತೆಲ್ಲಾ ಸಹಾಯ ಮಾಡುವ ಉತ್ಸಾಹವೂ, ಪ್ರೀತಿಯ ಉತ್ಸಾಹವು ಅಂದರೆ ಪವಿತ್ರಾತ್ಮವೂ ಹೆಚ್ಚುತ್ತಾ ಹೋಗುತ್ತದೆ. ಇಂತಹ ವಾರದ ಮಧ್ಯದ ಕೂಟದಲ್ಲಿ ಕಳೆದ ಭಾನುವಾರ ನೀಡಲ್ಪಟ್ಟ ವಿಷಯವು ಪ್ರಸ್ತಾಪಿಸಲ್ಪಡುತ್ತದೆ. ಆದುದರಿಂದ ಈ ಪ್ರಸ್ತಾಪವು ಪ್ರತಿವರ್ಗದವರ ಮನದಲ್ಲಿದ್ದು ಪ್ರತಿಯೊಬ್ಬರಿಗೂ ಮುಂದುವರೆದ ಜೀವನದ ಅನುಭವವನ್ನು ವಾರದ ಪ್ರಸ್ತಾಪದ ಪಥದಲ್ಲಿ ಲಕ್ಷ್ಯದಲ್ಲಿಟ್ಟು ಅದನ್ನು ಗಮನಿಸಲು ಹುರಿದುಂಬಿಸುತ್ತದೆ. ಆದರೆ ಹೆಚ್ಚಿನವರು ಇಂತಹ ಅಮೂಲ್ಯ ಪಾಠಗಳ ಬಗ್ಗೆ ಆಲೋಚಿಸುವುದಿಲ್ಲ, ಗಮನಿಸುವುದಿಲ್ಲ ಮತ್ತು ಇಂತಹ ಅಮೂಲ್ಯ ಪಾಠಗಳನ್ನು ಗ್ರಹಿಸದೇ ಹೋಗುತ್ತಾರೆ. ನಂತರದಲ್ಲಿ ದೇವರು ತಮ್ಮ ನಿತ್ಯಜೀವನದ ಒದಗಿಸುವ ವ್ಯವಹಾರದಲ್ಲಿ ಗಳಿಸಿಕೊಳ್ಳಬಹುದಾಗಿದ್ದನ್ನು ಇನ್ನೂ ಹೆಚ್ಚಿನ ಕಠಿಣತರ ಅನುಭವಗಳ ಮೂಲಕ ಕಲಿತುಕೊಳ್ಳುತ್ತಾರೆ.

ಉದಾ : ವಾರದ ಪ್ರಸ್ತಾಪವು "ಎಲ್ಲಾ ಗ್ರಹಿಕೆಯನ್ನು ಮೀರುವ ದೇವಶಾಂತಿಯು ನಿಮ್ಮ ಹೃದಯಗಳನ್ನೂ ಯೋಚನೆಗಳನ್ನೂ ಕ್ರಿಸ್ತಯೇಸುವಿನಲ್ಲಿ ಕಾಯುವುದು" (ಫಿಲಿಪ್ಪಿ 4:7) ಎಂಬ ದೇವರ ವಾಕ್ಯದಲ್ಲಿನ "ದೇವಶಾಂತಿ' ಎಂದಿರಲಿ. ಪ್ರತಿಯೊಬ್ಬ ಸಹೋದರನೂ ಕಳೆದ ವಾರದಲ್ಲಿ ಈ ದೇವ ವಾಕ್ಯವು ಯಾವ ರೀತಿಯಲ್ಲಿ ತಮ್ಮ ವೈಯುಕ್ತಿಕ ಜೀವನದಲ್ಲಿ ಈಡೇರಿದೆ ಎಂಬುದನ್ನು ಅಥವಾ ಯಾವ ಯಾವ ಸಂಗತಿಗಳು ಶಾಂತಿಭಂಗಪಡಿಸಿದವು ಮತ್ತು ದೇವಶಾಂತಿಗೆ ಅಡ್ಡಿಪಡಿಸಿದವು ಎಂಬುದನ್ನು ಗಮನಿಸಲಿ. ಹೆಚ್ಚು ಪ್ರವೀಣರೂ, ಕಡಿಮೆ ಪ್ರವೀಣರೂ ಆದ ಪ್ರತಿಯೊಬ್ಬರೂ (ಸ್ತ್ರೀಯರೂ, ಪುರುಷರೂ) ವಾರದ ಮೊದಲನೆಯ ಭಾಗದಲ್ಲಿ ತಮ್ಮ ಅನುಭವಗಳನ್ನು ಹೇಳಿಕೊಳ್ಳುವಾಗ, ಎರಡನೆಯ ಭಾಗದಲ್ಲಿ ತಮ್ಮ ಅನುಭವಗಳೊಂದಿಗೆ ಇತರರ ಅನುಭವಗಳು ಒಂದಾಗುವಾಗ ಪ್ರತಿಯೊಬ್ಬರ ಸಹಾನುಭೂತಿಯು ವಿಶಾಲಗೊಳ್ಳುವುದಲ್ಲದೆ, ಶಾಂತಿಯ ಸೌಂದರ್ಯ ಮತ್ತು ಕಚ್ಚಾಟ ಇವುಗಳ ಬೇಧದ ಅರಿವಾಗಿ, ಹೃದಯಗಳಲ್ಲಿ ಶಾಂತಿಯ ಅನುಭವದ ಆಶೀರ್ವಾದ ಉಂಟಾಗುತ್ತದೆ. ನಾವು ನಿಯಂತ್ರಿಸಲಾಗದ ತುಮುಲ, ಗಲಿಬಿಲಿ ಮತ್ತು ದುರವಸ್ಥೆಯ ಪರಿಸ್ಥಿತಿಯು ನಮ್ಮನ್ನು ಸುತ್ತುವರೆದಿದ್ದರೂ ಯಾವ ರೀತಿಯಲ್ಲಿ ದೇವಶಾಂತಿಯನ್ನು ಪಡೆಯಲು ಸಾಧ್ಯವೆಂಬುದು ತಿಳಿದುಬರುತ್ತದೆ. ಈ ಕೂಟಗಳ ಶ್ರದ್ಧಾಪೂರ್ವಕ ಲಕ್ಷಣಗಳು ಅವರಿಗೆ ಹೆಚ್ಚಿನ ಲಾಭವನ್ನು ಉಂಟು ಮಾಡುತ್ತದೆ. ಯಾವಾತನು ತನ್ನ ಸ್ವಂತ ದೋಷಗಳನ್ನು ಹೆಚ್ಚು ಆಸಕ್ತಿಯಿಂದ ಕಂಡುಕೊಳ್ಳುವನೋ ಮತ್ತು ಅತಿಯಾದ ನಿಷ್ಠೆಯಿಂದ ಆತ್ಮೀಕ ಕೃಪೆಯಲ್ಲಿ ಬೆಳೆಯಲು ಹೆಣಗುವನೋ ಅಂಥವನು ತನ್ನ ಶ್ರದ್ಧಾಭಕ್ತಿಯಲ್ಲಿ ಮತ್ತು ದೇವರನ್ನು ಸಂತೃಪ್ತಿಗೊಳಿಸುವ ಆಕಾಂಕ್ಷೆಯಲ್ಲಿ ಮತ್ತು ಆತನ ಪವಿತ್ರಾತ್ಮನ ಕ್ರಿಯೆಯಲ್ಲಿ ಭಾಗವಹಿಸಲು ಬಹಳಷ್ಟು ಪ್ರಾಮಾಣಿಕ ನಾಗಿರುವನು*

ಬೇರೆ ಕೂಟಗಳಲ್ಲಿದ್ದಂತೆ ಈ ಕೂಟಗಳಲ್ಲಿಯೂ ಸಹಜವಾಗಿ ಕ್ರಮವನ್ನು ಕಾಪಾಡುವುದರಿಂದ ಹೆಚ್ಚಿನ ಒಳಿತನ್ನು ಸಾಧಿಸಬಹುದಾಗಿದೆ. ಆದರೆ ಇದು ಕೂಟದ ಜೀವ ಮತ್ತು ಸ್ವಾತಂತ್ರ್ಯವನ್ನು ಹಾಳುಮಾಡುವ ಮಟ್ಟಿಗೆ ಇರಬಾರದು ಆದರೆ ಅದರ ಸ್ವಾತಂತ್ರ್ಯವನ್ನು ಉತ್ತಮ ರೀತಿಯಲ್ಲಿ ಕಾಪಾಡುವ ಮಟ್ಟಿಗೆ ಇರಬೇಕು. ಯಾವುದೇ ಅರಾಜಕತೆಗೂ, ಅಕ್ರಮಕ್ಕೂ, ಮೂಢತ್ವಕ್ಕೂ, ಪ್ರೀತಿ ಮತ್ತು ನಮ್ರತೆಯ ನಿರ್ಬಂಧತೆಗೂ ಅವಕಾಶವಿರಬಾರದು. ಉದಾಹರಣೆಯಾಗಿ :

ಕೂಟದ ಗುಣಲಕ್ಷಣಗಳನ್ನು ಮುಂಚಿತವಾಗಿ ಅರ್ಥಮಾಡಿ ಕೊಂಡಿರಬೇಕು; ಅದನ್ನು ನಿರ್ಧಾರಿತ ಉದ್ದೇಶಕ್ಕನುಸಾರವಾಗಿ ವಿವೇಚನಾಪೂರಕವಾದ ಪ್ರೀತಿಯುತ ಸಡಿಲತೆಯಿಂದ ಜರುಗಿಸುವುದು ನಾಯಕನ ಕರ್ತವ್ಯ. ಇವುಗಳು ಸಾಮಾನ್ಯವಾದ ಪ್ರಶ್ನೆಗಳ ಕೂಟಗಳಲ್ಲ ಅಥವಾ ಚರ್ಚಾಕೂಟಗಳಲ್ಲ ಅಥವಾ ಪ್ರಸಂಗಕೂಟವಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಇವೆಲ್ಲವೂ ಇತರ ಕೂಟಗಳಲ್ಲಿರುತ್ತವೆ ಮತ್ತು ಇದಕ್ಕೆ ಇಷ್ಟವುಳ್ಳವರು ಸೇರಿಬರಲು ಸ್ವಾಗತವಿದೆ. ಆದರೆ ಈ ಕೂಟಗಳಿಗೆ ಮಿತವಾದ ಅವಕಾಶಗಳಿವೆ. ಈ ರೀತಿಯಲ್ಲಿ ಕೂಟಗಳನ್ನು ಸರಿಯಾದ ಪಥದಲ್ಲಿಡಲು ಮತ್ತು ಖಾಸಗಿ ಚರ್ಚೆಗಳನ್ನು ಮತ್ತು ಒಬ್ಬರಿಂದ ಒಬ್ಬರಿಗೆ ಉತ್ತರ ಹೇಳುವುದನ್ನು ತಪ್ಪಿಸಲು ಎಲ್ಲವನ್ನು ಪ್ರತಿನಿಧಿಸುವಂತೆ ಒಬ್ಬ ನಾಯಕನನ್ನು ಆಯ್ಕೆ ಮಾಡಲಾಗುವುದು. ಆತನೊಬ್ಬನೇ ಇತರರಿಗೆ ಉತ್ತರಿಸಬಹುದು

*** ಈ ರೀತಿಯ ಕೂಟಗಳು ಇಂದು ನೂರಾರು ಸಮುದಾಯಗಳಲ್ಲಿ ಜರುಗುತ್ತಿವೆ. ಹೆಚ್ಚಾದ ಸಂದರ್ಭಗಳಲ್ಲಿ** (Daily Heavenly Manna) **"ದಿನನಿತ್ಯದ ಪರಲೋಕದ ಮನ್ನ" ದಿಂದ ಪ್ರಸ್ತಾಪವನ್ನು ಆರಿಸಿಕೊಳ್ಳಲಾಗುತ್ತಿದೆ.**

ಅಥವಾ ಟೀಕಿಸಬಹುದು ಆದರೆ ಅವಶ್ಯವಿದ್ದಾಗ ಮಾತ್ರ. ನೀಡಲಿರುವ ಸಾಕ್ಷ್ಯಗಳು ಸಾಕಷ್ಟು ಉದ್ಧವಾಗಿದ್ದು ಬೇಸರ ತರಿಸದಂತೆ ಮತ್ತು ಇತರರ ಅವಕಾಶಕ್ಕೆ ಅಡ್ಡಿಮಾಡದಿರುವಂತೆ ನೋಡಿಕೊಳ್ಳುವುದು ನಾಯಕನ ಆದ್ಯ ಕರ್ತವ್ಯ. ಇದರಿಂದ ಕೂಟಗಳು ಒಪ್ಪಿಕೊಂಡಿರುವ ಕಾಲಾವಕಾಶವನ್ನು ಮೀರಿಸಬಾರದು. ಈ ಎಲ್ಲಾ ಸಂಗತಿಗಳನ್ನು ನಾಯಕನೊಬ್ಬ ಸಭೆಯ ಹಿರಿಯ ಎಂಬ ಅಭಿಪ್ರಾಯದಿಂದ ಆತನಿಗೆ ವಹಿಸಲಾಗಿದೆ. ಸಾಕಷ್ಟು ಅನುಭವದ ಕೊರತೆಯಿರುವವರನ್ನು ಆರಿಸಿಕೊಳ್ಳಬಾರದು, ಅವರಿಗೆ ಉತ್ತಮವಾದ ಉದ್ದೇಶಗಳಿದ್ದರೂ, ಅಂಥಾ ಸಂದರ್ಭಗಳಲ್ಲಿ ಬಹಳ ಸಡಿಲಾದ ಅಥವಾ ಗಡಸಾದ ತತ್ವಗಳನ್ನು ಅನ್ವಯಿಸುವುದರಲ್ಲಿ ಆತನ ಕೂಟಗಳನ್ನು ದಾಕ್ಷಿಣ್ಯದಿಂದಾಗಿ ಹಾಳು ಮಾಡಬಹುದು ಅಥವಾ ತನ್ನ ಬುದ್ಧಿಹೀನತೆಯಿಂದ ನೀಡಿದ ತಿದ್ದುಪಡಿಯಿಂದಾಗಿ ಅಥವಾ ಸರಿಯಾದ ಕ್ರಮವನ್ನು ಅನ್ವಯಿಸದೇ ಹೋಗುವುದರಿಂದ ಯಾರಾದರೂ ಯೋಗ್ಯ ಸಹೋದರ ಅಥವಾ ಸಹೋದರಿಯ ಮನನೋಯಿಸಬಹುದು. ಮೇಲಾಗಿ ಅಂಥಹ ಕೂಟಗಳ ನಾಯಕನು ಒಬ್ಬ ಹಿರಿಯನಾಗಿರಬೇಕು ಅಥವಾ ಸಭೆಯಲ್ಲಿ ಹಿರಿಯನ ಸ್ಥಾನವನ್ನು ಹೊಂದಲು ಸಮರ್ಥನಾಗಿರಬೇಕು. ಅದರಂತೆ ಆತನಿಗೆ ಸಾಕಷ್ಟು ವಾಕ್ಯದ ಜ್ಞಾನ, ಕೃಪಾನುಭವ ಮತ್ತು ನೀಡಿದ ಸಾಕ್ಷ್ಯಕ್ಕೆ ತಕ್ಕ ಪ್ರೋತ್ಸಾಹ ಅಥವಾ ಸಮಾಲೋಚನೆಗಳನ್ನು ಹಾಗೂ ಉಪಯುಕ್ತ ಸಲಹೆಗಳನ್ನು ನೀಡಬಹುದಾದ ಶಿಕ್ಷಣಾ ಸಾಮರ್ಥ್ಯವಿರಬೇಕು "ತಕ್ಕ ಉತ್ತರ ಕೊಡುವವನಿಗೆ ಎಷ್ಟೋ ಉಲ್ಲಾಸ! ಸಮಯೋಚಿತವಾದ ವಚನದಲ್ಲಿ ಎಷ್ಟೋ ಸ್ವಾರಸ್ಯ!" (ಜ್ಞಾನೋಕ್ತಿ 15:23).

ಮೇಲಿನ ಪರಿಚ್ಛೇದದಲ್ಲಿ ನಾವು ಕೂಟಗಳಿಗೆ ಒದಗಿಸಬಹುದಾದ ವಿವಿಧ ಆಸಕ್ತಿಗಳನ್ನು ಸೂಚಿಸಿದ್ದರೂ, ನಾವು ವಿಶೇಷವಾಗಿ ಕಡೆಯದನ್ನು ವಿವರಿಸಿದ್ದೇವೆ. ಇದನ್ನು ನಾವು ಎಲ್ಲವುಗಳಿಗಿಂತ ಮುಖ್ಯವಾದುದೆಂದು ಪರಿಗಣಿಸುತ್ತೇವೆ; ಇಂತಹ ಕೂಟವು ಆತ್ಮೀಕ ಬೆಳವಣಿಗೆಗೆ ಸಹಾಯಕವಾಗಿದೆ. ನಾವೀಗ ಇತರ ಕೂಟಗಳಿಗೆ ಯಾವುದು ಒಳ್ಳೆಯ ವ್ಯವಸ್ಥೆ ಯಾಗಬಹುದೆಂಬುದರ ಬಗ್ಗೆ ನಮ್ಮ ಕುಡಿನೋಟ ಹರಿಸೋಣ. ಇವುಗಳು ಸಂದರ್ಭ, ಪರಿಸ್ಥಿತಿ ಮತ್ತು ಕೂಟದಲ್ಲಿ ಸೇರುವ ಜನಸಂಖ್ಯೆ – ದೇಹ ಅಥವಾ ಸಭೆ ಇವುಗಳಿಗನುಸಾರ ಬದಲಾ ಗುತ್ತವೆ. ಈ ಸಂಖ್ಯೆಯು ಸುಮಾರು ಐವತ್ತರಷ್ಟಿದ್ದು ಅದರಲ್ಲಿ ಕೆಲವರು ಸಾರ್ವಜನಿಕವಾಗಿ ಮಾತನಾಡುವ ಮತ್ತು ಸತ್ಯದ ಸ್ಪಷ್ಟವಾದ ವಿವರಣೆ ನೀಡಬಲ್ಲ ಸಾಮರ್ಥ್ಯ ಹೊಂದಿದ್ದಲ್ಲಿ ವಾರಕ್ಕೆ ಒಮ್ಮೆ ವಿಶೇಷವಾಗಿ ಸ್ನೇಹಿತರು, ನೆರೆಹೊರೆಯವರು ಮತ್ತಿತರನ್ನು ಆಹ್ವಾನಿಸುವ ಕೂಟಗಳಲ್ಲಿ ಪ್ರಸಂಗದ ಆರಾಧನೆಯು ಸಾಮಾನ್ಯವಾಗಿ ಪ್ರಯೋಜನಕಾರಿಯಾದೀತೆಂಬ ಸಲಹೆಯನ್ನು ನಾವು ನೀಡುತ್ತೇವೆ. ಆದರೆ ದೇವರ ಚಿತ್ತದಂತೆ ಕೊರತೆಯಿರುವವರನ್ನು ಆರಿಸಿಕೊಳ್ಳಬಾರದು ದೇವರ ವಾಕ್ಯದ ಬಗ್ಗೆ ತರ್ಕಬದ್ಧ ಮತ್ತು ವಿವೇಚನಾಶೀಲವಾದ ಪ್ರವಚನ ನೀಡಲು ಯಾರೊಬ್ಬರೂ ಅರ್ಹರಾಗಿಲ್ಲವಾದಲ್ಲಿ ಇಂಥಾಃ ಕೂಟಗಳನ್ನು ಪ್ರಯತ್ನಿಸದಿರುವುದೇ ಒಳ್ಳೆಯದೆಂದು ಮತ್ತು ಅಂಥಾಃ ದೇವರ ವಾಕ್ಯದ ಸಂಬಂಧವಿರುವ ಸಾರ್ವಜನಿಕ ವಿಷಯಗಳಲ್ಲಿ ಸ್ವಲ್ಪಮಟ್ಟಿನ ಸಾಮರ್ಥವಿರುವವರ ನಡುವೆ ಈ ಸಮಯವನ್ನು ಹಂಚಬಹುದೆಂದು ನಾವು ನಂಬುತ್ತೇವೆ. ವಿಷಯವು ಅದೇ ಆಗಿದ್ದು ಸಹೋದರರು ಅದರಲ್ಲಿ ಮುನ್ನಡೆಸುವ ಪಾತ್ರವನ್ನು ನಿರ್ವಹಿಸಬಹುದು. ಅಥವಾ ಅಂತಹ ಹಿರಿಯರು ಒಂದು ಭಾನುವಾರ ಅಥವಾ ಎರಡು ವಾರಕ್ಕೊಮ್ಮೆ ಪರ್ಯಾಯವಾಗಿ ನಡೆಸಬಹುದು. ಎಲ್ಲಾ ಸಹೋದರರಿಗೆ ಅವರವರ ಸಾಮರ್ಥ್ಯದ ಅನುಪಾತ ಕ್ಕನುಸಾರವಾಗಿ ಪ್ರತಿಯೊಬ್ಬ ಸಹೋದರನನ್ನು ಮುಂದೆ ತಂದು ಅವಕಾಶಗಳನ್ನು ನೀಡುವುದು ಸಭೆಯ ಹಿತವನ್ನು ಕಾಪಾಡುತ್ತದೆ. ಸತ್ಯದ ನಮ್ರತೆ ಮತ್ತು ಶುಭ್ರತೆಯು ಸದಾ ಪ್ರಾಥಮಿಕ ಅಗತ್ಯತೆಗಳಾಗಿವೆಯೇ ಹೊರತು ಅಲಂಕಾರಿಕ ಮಾತುಗಳಾಗಲೀ, ವಾಕ್ಚಾತುರ್ಯವಾಗಲೀ ಅಲ್ಲ.

ಮೊದಲು ವಿವರಿಸಿರುವ ಪ್ರಾರ್ಥನಾಪೂರ್ವಕ ಸಭೆಗಿಂತ ಒಬ್ಬ ಅಧ್ಯಕ್ಷನ, ಅಥವ ನಾಯಕನ, ಅಥವಾ ಕೆಲವು ವೇಳೆ ಮತ್ತೊಬ್ಬನ ಅಡಿಯಲ್ಲಿ ವಿಶ್ವಾಸಿಗಳ ದೊಡ್ಡ ಗುಂಪು ಭಾಗವಹಿಸುವ ಸಭೆ ಬಹಳ ಪ್ರಾಮುಖ್ಯವಾದ ಮತ್ತು ಹೆಚ್ಚು ಪ್ರಯೋಜನಕಾರಿಯಾದ ಸಭೆ ಎಂಬುದು ನಮ್ಮ ತೀರ್ಮಾನ. ಇಂತಹ ಸಭೆಗಳಲ್ಲಿ ದೈವೋಕ್ತಿಗಳಿಂದ ಆಯ್ದ ಒಂದು ವಚನ ಅಥವ ಒಂದು ಪಾಠವನ್ನು ಚರ್ಚಿಸಬಹುದು. ಸಭೆಯನ್ನು ನಡೆಸುವ ನಾಯಕನು ಪ್ರಸ್ತಾಪಿಸುವ ವಿಷಯವನ್ನು ಭಾಗಗಳನ್ನಾಗಿ ಮಾಡಿ ಮುಂದಾಗಿ ಅವುಗಳನ್ನು ಮಾತನಾಡುವ ಸಹೋದರರಿಗೆ ಒಪ್ಪಿಸುವ ಅಧಿಕಾರವುಳ್ಳವನಾಗಿರತಕ್ಕದ್ದು. ಸಾಧ್ಯವಾದರೆ ಒಂದು ವಾರ ಮುಂಚಿತವಾಗಿಯೇ ಅವರಿಗೆ ತಿಳಿಸಿ ಅವರು ಸಭೆಗೆ ಹಾಜರಾಗುವ ಮೊದಲು ತಮಗೆ ನೇಮಕವಾಗಿರುವ ವಿಷಯದ ಬಗ್ಗೆ ಸಿದ್ಧರಾಗಲು ಅವರಿಗೆ ಅವಕಾಶ ಕಲ್ಪಿಸಿಕೊಡಬೇಕು. ಈ ವಿಷಯವನ್ನು ವಿಮರ್ಶಿಸಲು ಹಾಗೂ ಅದನ್ನು ಚರ್ಚಿಸಲು ಭಾಗವಹಿಸುವ ಪ್ರಮುಖರು (ಇಬ್ಬರು ಅಥವ ಆರು ಮಂದಿ ಅಥವಾ ಅದಕ್ಕಿಂತ ಹೆಚ್ಚು ಅರ್ಹರಾದ ವ್ಯಕ್ತಿಗಳು ಸಭೆಯ ಗಾತ್ರ, ಪಾಠದ ಸಾಂದ್ರತೆ ಮತ್ತು ಅದರ ಅವಶ್ಯಕತೆಗೆ ತಕ್ಕಂತೆ) ಹೊಸ ಬೆಯೋರದ ವೇದ (Berean Bible) ಅದಕ್ಕೆ ಸಂಬಂಧಿಸಿದ Studies Reprints ಮತ್ತು Tower ಹಾಗೂ Topical Index ಗಳು ಅವರಿಗೆ ಸಹಾಯಕವಾಗಿರುವುದು ಆದರೂ ವಿಷಯವನ್ನು ತಮ್ಮ ಭಾಷೆಯಲ್ಲಿ, ತಮ್ಮದೇ ಆದ ರೀತಿಯಲ್ಲಿ ಪ್ರಸ್ತಾಪಿಸಬಹುದು. ತಾವು ಮಾತನಾಡುವಾಗ ನೀಡುವ ಅಭಿಪ್ರಾಯಕ್ಕೆ ಹೊಂದಾಣಿಕೆಯಾಗುವ ಕೆಲವು ಅಂಶಗಳನ್ನು ಅಥವಾ ಭಾಗವನ್ನು STUDIES, REPRINTS and TOWERS ನಿಂದ ಆಯ್ದುಕೊಂಡು ಸಭಿಕರ ಮುಂದೆ ಓದಬಹುದು.

ದೇವರನ್ನು ಪ್ರಾರ್ಥಿಸಿ ಕೊಂಡಾಡಿ ಕೂಟವನ್ನು ಪ್ರಾರಂಭಿಸುವಾಗ ಅಧ್ಯಕ್ಷನು ಮಾತನಾಡುವ ವಿಷಯವನ್ನು ಒಂದಾದ ಮೇಲೆ ಒಂದರಂತೆ ಸೂಚಿಸಬಹುದು. ನೇಮಕವಾದ ಮಾತನಾಡುವ ಒಬ್ಬರು ತಾವು ಮಾತನಾಡಿದ ವಿಷಯವನ್ನು ಪ್ರಸ್ತಾಪಿಸಿದ ಮೇಲೆ ಅದರ ಬಗ್ಗೆ ಪ್ರಶ್ನಿಸಲು ಅಥವಾ ತಮ್ಮ ನಿಲುವನ್ನು ಅದರ ಪರವಾಗಿಯೋ ಅಥವಾ ವಿರುದ್ಧವಾಗಿಯೋ

ಸಭೆಯಾಗಿ ಕೂಡಿಬಂದಿರುವವರೆಲ್ಲರ ಮುಂದೆ ತಮ್ಮ ಹೇಳಿಕೆಗಳನ್ನು ಇಡತಕ್ಕದ್ದು ಸಭೆಯಲ್ಲಿ ಕೂಡಿರುವ ಸದಸ್ಯರು ಚರ್ಚಿಸಲು ಇಷ್ಟಪಡದೆ ಹಿಂದೆ ಸರಿದಾಗ ಅಧ್ಯಕ್ಷನು ಅಂತಹ ಸಂದರ್ಭದಲ್ಲಿ ಸಹೋದರರಿಗೆ ಸೂಕ್ಷ್ಮವಾದ ಪ್ರಶ್ನೆಗಳನ್ನು ಕೇಳಬಹುದು. ಈ ಸಂದರ್ಭದಲ್ಲಿ ಅಧ್ಯಕ್ಷನು ಮಾತನಾಡಿದವರನ್ನು ಕುರಿತು ಅಥವಾ ಅವರ ಪ್ರಸ್ತಾಪಿಸಿರುವ ನಿಲುವು ಕುರಿತು ಅಥವಾ ಅಭಿಪ್ರಾಯಕ್ಕೆ ಉತ್ತರವನ್ನು, ಅದನ್ನು ಸಾಮರಸ್ಯಗೊಳಿಸುವುದೂ ಮಾಡಬಹುದು. ಇದಲ್ಲದೆ ಮಾತನಾಡಿರುವವರನ್ನು ಕರೆದು ಆತನು ತೆಗೆದುಕೊಂಡಿರುವ ನಿಲುವು ಅಥವಾ ಅಭಿಪ್ರಾಯಕ್ಕೆ ಕಾರಣವೇನು ಎಂಬುದರ ಬಗ್ಗೆ ವಿವರಣೆ ಕೊಡಲು ಅವಕಾಶ ಕೊಡಬೇಕು. ಹೀಗೆ ತನ್ನ ನಿಲುವಿನ ವಿಷಯವನ್ನು ನೇರವಾಗಿ ಅಧ್ಯಕ್ಷನೊಂದಿಗೆ ಪ್ರಸ್ತಾಪಿಸಬೇಕೇ ಹೊರತು ವ್ಯಕ್ತಿಗತವಾಗಿ ಮಾತನಾಡಿ ತೀವ್ರ ವಿವಾದಗಳಿಗೆ, ಅದರಿಂದಾಗುವ ಅನಾಹುತಕ್ಕೆ ಎಡೆಗೊಡದಂತೆ ತಪ್ಪಿಸಬೇಕು. ಅಧ್ಯಕ್ಷನು ಮೇಲ್ಕಂಡ ವಿಷಯವನ್ನು ಮಾತ್ರ ಕುರಿತು ಚರ್ಚಿಸಬೇಕೇ ಹೊರತು ಬೇರೆ ಯಾವದನ್ನೂ ಪ್ರಸ್ತಾಪಿಸದೆ ಈ ಚರ್ಚೆ ವಿಷಯಕ್ಕೆ ಸಂಬಂದಿಸಿದ ಸಂಗತಿಗಳನ್ನೆಲ್ಲಾ ಸಂಗ್ರಹಿಸಿ ಕೂಲಂಕುಶವಾಗಿ ಸಂಕ್ಷೇಪ ಮಾಡಿ ಅದರ ಸಾರಾಂಶವನ್ನು ಸಭೆಯ ಪ್ರಾರ್ಥನೆಯೊಂದಿಗೆ ಮತ್ತು ದೇವರನ್ನು ಕೊಂಡಾಡಿ ಮುಗಿಸುವ ಮುಂಚೆ ತಿಳಿಸಬೇಕು.

ಪ್ರತಿಯೊಂದು ಅಂಶದ ವಿಷಯದಲ್ಲಿ ಆಳವಾಗಿ ಹೋಗಿ ಆ ವಿಷಯವನ್ನು ಪೂರ್ತಿಯಾಗಿ ವಿಮರ್ಶಿಸಿ ಸಭೆಯಲ್ಲಿರುವ ಪ್ರತಿಯೊಬ್ಬರೂ ಅದನ್ನು ಸ್ಪಷ್ಟವಾಗಿ ಗ್ರಹಿಸುವಂತೆ ಮಾಡತಕ್ಕದ್ದು ಅಥವಾ ಪ್ರತಿಯೊಂದು ಶೀರ್ಷಿಕೆಯ ಕಠಿಣವಾದ ವಿಷಯದಲ್ಲಿ ಅಧ್ಯಕ್ಷನು ತನ್ನ ನಿಲುವು ಅಥವಾ ತೀರ್ಮಾನವನ್ನು ನೀಡಬೇಕು ದೇವರ ವಾಕ್ಯವನ್ನು ಆಳವಾಗಿ ಅಧ್ಯಯನ ಮಾಡುವ ಇಂತಹ ರೀತಿಗಿಂತ ಬೇರೆ ಯಾವುದೂ ಸೂಕ್ತವಾಗಿರಲಾರದು. ಇದು ಸಾದಾರಣವಾಗಿ ಪ್ರಸಂಗ ಮಾಡುವ ಕೂಟಗಳಿಗಿಂತ ಬಹು ಸಂಖ್ಯೆಯಲ್ಲಿ ಕೂಡಿಬರುವ ಈ ಸಭೆಯ ನಡವಳಿಕೆಯು ಅತಿ ಹೆಚ್ಚು ಪ್ರಯೋಜನಕಾರಿಯಾಗಿದೆ.

ಮೇಲೆ ಸೂಚಿಸಿರುವ 1, 2, ಮತ್ತು 3 ಸೂಚನೆಗಳ ಎಲ್ಲಾ ಅಂಶಗಳನ್ನೂ ಇಂತಹ ಕೂಟಗಳು ಆವರಿಸುತ್ತವೆ. ಮೊದಲನೆಯದರ ಬಗ್ಗೆ, ಮುಂದಾಳತ್ವ ವಹಿಸಿದವರಿಗೆ ಅವರಲ್ಲಿರುವ ಸಾಮರ್ಥ್ಯವನ್ನೆಲ್ಲಾ ಇಲ್ಲಿ ಪ್ರಯೋಗಿಸುವ ಪೂರ್ಣ ಅವಕಾಶ ದೊರೆಯುತ್ತದೆ. ಎರಡನೆಯ ಅಂಶದ ಬಗ್ಗೆ, ನಾಯಕರುಗಳು ವಿವಿಧ ಪ್ರಸ್ತಾಪಗಳನ್ನು ಮಾಡಿದ ನಂತರ ಭಾಗವಹಿಸಿದ ಎಲ್ಲರಿಗೂ ಅದರ ಬಗ್ಗೆ ಪ್ರಶ್ನೆಗಳನ್ನು ಕೇಳುವ, ತಮ್ಮ ಸಲಹೆಗಳನ್ನು ನೀಡುವ ಮುಂತಾದ ಎಲ್ಲಾ ಅವಕಾಶಗಳು ದೊರೆಯುತ್ತವೆ. ಮೂರನೆಯ ಅಂಶದ ಬಗ್ಗೆ, ಇಂಥಹಃ ಕೂಟಗಳಲ್ಲಿನ ಪ್ರಸ್ತಾಪವನ್ನು ಒಂದು ವಾರದ ಮುಂಚೆಯೇ ಸಮಗ್ರ ತರಗತಿಯವರಿಂದ ನಿರ್ಧರಿಸಲ್ಪಡುತ್ತದೆಯೇ ಹೊರತು ಕೇವಲ ನಾಯಕರುಗಳಿಂದಲ್ಲ.

ಇಂತಹ ತರಗತಿಗಳಿಗೆ ಹಾಜರಾಗುವ ಯಾರಿಗೇ ಆಗಲಿ ತಮ್ಮ ಪ್ರಶ್ನೆಯನ್ನಾಗಲೀ, ಪ್ರಸ್ತಾಪವನ್ನಾಗಲೀ ಪ್ರಸ್ತುತಿಪಡಿಸುವ ಅಧಿಕಾರ ಇರಬೇಕು ಮತ್ತು ಎಲ್ಲಾ ಸೂಕ್ತ ಪ್ರಸ್ತಾಪಗಳಿಗೆ ಗೌರವಯುತವಾದ ಆಲಿಸುವಿಕೆ ದೊರೆಯುವಂತೆ ಬೇಕಾದ ಪ್ರೀತಿ, ಸಹಾನುಭೂತಿ ಮತ್ತು ಸಹಾಯಕತೆಯ ಸ್ಫೂರ್ತಿ ಇವುಗಳು ಅವರಲ್ಲಿ ಪ್ರಸರಿಸಿರಬೇಕು. ಸಭೆಯ ಸಾಮಾನ್ಯ ದೃಷ್ಟಿಗೆ ಭಿನ್ನವಾಗಿದ್ದರೂ ಸುವಾರ್ತೆಯ ಆಧಾರದ ತತ್ವಗಳಿಗೆ ಸಮವಾಗಿರುವ ಪ್ರಸ್ತಾಪವನ್ನು ಚರ್ಚಿಸಬೇಕೆಂದು ಯಾರಾದರೂ ವಿಶೇಷ ವಿನಂತಿ ಮಾಡಿಕೊಂಡಲ್ಲಿ ಅದನ್ನು ಪ್ರಸ್ತುತಿಪಡಿಸಲು ಅದರ ಮುಖ್ಯ ಭಾಷಣಕಾರನಿಗೆ ಮಿತವಾದ ಅಂದರೆ ಹೆಚ್ಚು ಕಡಿಮೆ ಮೂವತ್ತು ನಿಮಿಷಗಳ ಕಾಲಾವಧಿಯನ್ನು ವಿಷಯದ ಪ್ರಾಮುಖ್ಯತೆಗೆ ಮತ್ತು ಆ ಬಗ್ಗೆ ತರಗತಿಯ ಆಸಕ್ತಿಗನುಸಾರವಾಗಿ ನೀಡತಕ್ಕದ್ದು. ಆತನ ಪ್ರಸ್ತುತಿಯನ್ನು ಅನುಸರಿಸಿ ತರಗತಿಯ ಇತರರಿಗೆ ಪ್ರಶ್ನಿಸುವ ಮುಕ್ತ ಅವಕಾಶ ನೀಡಬೇಕು. ಪ್ರಶ್ನಿಸುವವರಿಗೆ ಮತ್ತು ವಿರೋಧ ಸೂಚಿಸುವವರಿಗೆ ಕೆಲವು ನಿಮಿಷಗಳನ್ನು ನೀಡಿ ಅವಕ್ಕೆ ಉತ್ತರ ಪಡಕೊಳ್ಳಬಹುದು. ಸಭಾಧ್ಯಕ್ಷನು ಕೂಟವನ್ನು ಮುಗಿಸುವ ಮುನ್ನ ತನ್ನ ಅಂತಿಮ ಮಾತುಗಳನ್ನು ಹೇಳಬಹುದು.

ದೇವರ ವಾಕ್ಯಾಧ್ಯಯನಕ್ಕೆ ಬಹಳಷ್ಟು ಸಹಾಯಕಾರಿ ಯೆಂದು ರುಜುವಾತಾದ ಮತ್ತೊಂದು ಪದ್ಧತಿಯೆಂದರೆ "Berean Circle for Bible study" ಇದು ಕೇವಲ ವೃತ್ತಾಕಾರವಾಗಿ ಕುಳಿತು ಓದುವುದಲ್ಲ, ಆದರೆ ದೇವರ ಯೋಜನೆಯನ್ನು ಅದರ ಎಲ್ಲಾ ಹಂತಗಳಲ್ಲಿ ಪ್ರಸ್ತಾಪವನ್ನು ಒಂದರ ನಂತರ ಒಂದನ್ನು ತೆಗೆದುಕೊಂಡು ಕ್ರಮಬದ್ಧವಾಗಿ ಅಧ್ಯಯನಮಾಡುವುದು. ಸತ್ಯವೇದಾಧ್ಯಯನದ ಹಲವಾರು ಸಂಪುಟಗಳು ಪ್ರಸ್ತಾಪವನ್ನು ಒಂದಕ್ಕೊಂದು ಸಂಬಂಧ ವಿರುವಂತೆ ಮತ್ತು ಒಂದರ ನಂತರ ಒಂದರಂತೆ ಕ್ರಮಬದ್ಧವಾಗಿ ವ್ಯವಹರಿಸಿ ಸತ್ಯವೇದದೊಂದಿಗೆ ಅದರ ಅಧ್ಯಯನಕ್ಕೆ ಪುಸ್ತಕಗಳನ್ನೂ ರಚಿಸಿಕೊಳ್ಳುವುದು, ಈ ತರಗತಿಯು ಪ್ರಯೋಜನಕಾರಿಯಾಗುವಂತೆ ನಾಯಕನು ಮತ್ತು ತರಗತಿಯವರು ಓದುವುದಕ್ಕೂ ಮತ್ತು ಅಭ್ಯಾಸಕ್ಕೂ ಇರುವ ಅಂತರವನ್ನು ಸ್ಪಷ್ಟವಾಗಿ ತಿಳಿದಿರಬೇಕು. ಓದುವುದಕ್ಕೆ ಸಂಬಂಧಿಸಿದಂತೆ ಪ್ರತಿಯೊಬ್ಬ ಪ್ರಿಯ ಸ್ನೇಹಿತನೂ ಇದನ್ನು ಬಹುಶಃ ಉತ್ತಮವಾಗಿ ತನ್ನ ಮನೆಗಳಲ್ಲೇ ಸ್ವತಃ ಮಾಡಬಹುದು. ಪ್ರತಿಯೊಂದು ಅಥವಾ ಹೆಚ್ಚಿನ ಪರಿಚ್ಛೇದದಲ್ಲಿರುವ ಪ್ರಸ್ತಾಪದ ಕೆಲವು ಭಾಗಗಳನ್ನು ತೆಗೆದುಕೊಂಡು ಅಕ್ಕಪಕ್ಕದ ಪರಿಚ್ಛೇದ ಮುಂತಾದುವುಗಳನ್ನು ನೋಡಿಕೊಂಡು ಪ್ರಸ್ತಾಪದ ಎಲ್ಲಾ ಕಠಿಣ ಸಮಸ್ಯೆಗಳನ್ನು ಕೂಲಂಕುಷವಾಗಿ ತಮ್ಮೊಳಗೆ ಚರ್ಚಿಸುವುದು ಅಧ್ಯಯನದ ಉದ್ದೇಶವಾಗಿದೆ. ಇದರಲ್ಲಿ ಸಾಧ್ಯವಾದಲ್ಲಿ ತರಗತಿಯ ಪ್ರತಿಯೊಬ್ಬ ಸದಸ್ಯನೂ ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದಂತೆ ತನ್ನ ಅಭಿಪ್ರಾಯಗಳನ್ನು ಹೇಳಬಹುದು. ನಂತರ ಮುಂದಿನ ಪ್ರಸ್ತಾಪಕ್ಕೆ ಹೋಗಬಹುದು. ಈ ರೀತಿಯ ಬೇರಿಯನ್ ಅಧ್ಯಯನವು ಕೆಲವೊಮ್ಮೆ ಸತ್ಯವೇದಾಧ್ಯಯನದ ಒಂದು ಸಂಪುಟದ ಅಧ್ಯಯನಕ್ಕೆ ಒಂದು ಅಥವಾ ಎರಡು ವರ್ಷಗಳ ಕಾಲಾವಧಿಯನ್ನು ತೆಗೆದುಕೊಳ್ಳುವುದುಂಟು. ಅದು ಹೆಚ್ಚಿನ ಆಸಕ್ತಿ ಮತ್ತು ಪ್ರಯೋಜನದ ಸಲುವಾಗಿ*

## "ಪ್ರತಿಯೊಬ್ಬನು ತನ್ನ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡಿರಬೇಕು"

## "Let Every Man Be Fully Persuaded in His Own Mind" - Rom. 14:5

ಎಲ್ಲಾ ತರ್ಕಬದ್ಧ ಮನಸ್ಸಿನವರೂ ಸಾಧ್ಯವಾದರೆ ಸತ್ಯದ ಪ್ರತಿಯೊಂದು ಅಂಶದ ಬಗ್ಗೆಯೂ ಒಂದು ನಿರ್ಣಯವನ್ನು ತಲುಪಲು ಸಂತೋಷಿಸುತ್ತಾರೆ; ಇದಕ್ಕಾಗಿ ಸಭೆಯ ಪ್ರತಿಯೊಬ್ಬ ಸದಸ್ಯನೂ "ತನ್ನ ಸ್ವಂತ ಮನಸ್ಸಿನಲ್ಲಿ" ತನ್ನಷ್ಟಕ್ಕೆ ವಿಶೇಷ ಪ್ರಯತ್ನ ಮಾಡಬೇಕೆಂದು ಅಪೋಸ್ತಲನು ಹೇಳುತ್ತಾನೆ. ವ್ಯಕ್ತಿಗತವಾಗಿ ಒಂದು ಒಳ್ಳೆಯ ನಿಯಮವಾಗಿರುವ ಇದನ್ನು ಸತ್ಯವೇದಾಧ್ಯಯನದಲ್ಲಿ ಒಂದು ಸಭೆ ಅಥವಾ ವರ್ಗಕ್ಕೆ ಅನ್ವಯಿಸುವ ಪ್ರಯತ್ನವು ಅಂದರೆ ಎಲ್ಲರೂ ಕರ್ತನ ಮಾತುಗಳ ಅರ್ಥವನ್ನು ಒಂದೇ ರೀತಿಯಾಗಿ ಊಹಿಸಬೇಕೆಂದು ಒತ್ತಾಯಿಸುವುದು ಸಾಮಾನ್ಯವಾದ ತಪ್ಪಾಗುತ್ತದೆ. ಪ್ರತಿಯೊಬ್ಬರೂ "ಕಣ್ಣಲ್ಲಿ ಕಣ್ಣಿಟ್ಟು" ನೋಡಬೇಕೆಂಬುದು ನಾವು ಬಯಸುವುದು ಸರಿಯಾಗಿದೆ. ಆದರೆ ಎಲ್ಲರೂ ಸಮರ್ಪಕತೆಯಿಂದ ದೇಹದಲ್ಲಿ ಮಾತ್ರವಲ್ಲ ಮನಸ್ಸಿನಲ್ಲಿಯೂ ಸಹಾ ಬಿದ್ದುಹೋಗಿದ್ದಾರೆ ಎಂದು ನಮಗೆ ತಿಳಿದಿರುವಾಗ ಇದನ್ನು ಅಪೇಕ್ಷಿಸುವುದು ಸಮಂಜಸವಲ್ಲ. ಈ ಬಾಗುವಿಕೆಯು (ದಾರಿತಪ್ಪುವಿಕೆ) ವಿವಿಧ ದಿಕ್ಕಿನಲ್ಲಿ ಸಾಗಿದೆ ಎಂಬುದು ಕೂಡಿಬಂದ ಜನರ ತಲೆಯ ಅನೇಕ ಆಕಾರಗಳಿಂದ ತಿಳಿದುಬರುತ್ತದೆ. ನಮ್ಮ ವಿವಿಧ ಬಗೆಗಳು ಮತ್ತು ವಿದ್ಯೆಯ ಹಂತ ಇವುಗಳು ದೃಷ್ಟಿಕೋನದ ಏಕತೆಗೆ ಸಹಾಯ ಮಾಡಲು ಅಥವಾ ಅದನ್ನು ಅಡ್ಡಿಪಡಿಸಲು ಮುಖ್ಯವಾದ ಅಂಶಗಳು. ನಾವೆಲ್ಲರೂ ಒಂದೇ ರೀತಿಯಲ್ಲಿ ಆಲೋಚಿಸಬೇಕೆಂದು, ನಾವೆಲ್ಲರೂ ದೇವರಿಂದ ಕಲಿಸಲ್ಪಟ್ಟವರಾಗಿರಲಾಗಿ ಎಲ್ಲರಲ್ಲೂ ಸ್ವಸ್ಥವಾದ ಮನಸ್ಸಿನ ಸ್ಫೂರ್ತಿ ಇರಬೇಕೆಂದು, ನಾವು ದೇವರ ಕೃಪೆಯಲ್ಲಿಯೂ ಜ್ಞಾನದಲ್ಲಿಯೂ ಬೆಳೆದು ಒಬ್ಬರನ್ನೊಬ್ಬರೂ ಪವಿತ್ರ ವಿಶ್ವಾಸದಲ್ಲಿ ವೃದ್ಧಿಗೊಳಿಸಬೇಕೆಂದು ಅಪೋಸ್ತಲನು ಹೇಳಿಲ್ಲವೆ?.

ಹೌದು, ಇದೆಲ್ಲವೂ ಸತ್ಯ; ಆದರೆ ಇದೆಲ್ಲವನ್ನೂ ಒಂದೇ ಕೂಟದಲ್ಲಿ ಸಾಧಿಸಲಾಗುವುದೆಂದು ಹೇಳಿಲ್ಲ. ಕರ್ತನ ಜನರಲ್ಲಿ ವಿವಿಧ ರೀತಿಯಲ್ಲಿ ಬೆಳವಣಿಗೆ ಹೊಂದಿದ ವರ್ಗವಿರುವುದು, ಅನುಭವಗಳಲ್ಲಿ ಮತ್ತು ವಿದ್ಯಾರ್ಹತೆಗಳಲ್ಲಿ ವ್ಯತ್ಯಾಸಗಳಿರುವುದು ಮಾತ್ರವಲ್ಲ, ಇದರೊಂದಿಗೆ ಅವರು ನೂತನ ಸೃಷ್ಟಿಯ ವಿವಿಧ ಪ್ರಾಯದಲ್ಲಿ ಅಂದರೆ ಎಳೆಯ ಮಕ್ಕಳಾಗಿ, ಯುವಕರಾಗಿ, ಪ್ರಬುದ್ಧರಾಗಿ ಇರುತ್ತಾರೆ. ಆದುದರಿಂದ, ಕೆಲವರು ಇತರರಿಗಿಂತ ಧಾರಣ ಶಕ್ತಿಯಲ್ಲಿ ನಿಧಾನರಾಗಿದ್ದು ದೇವರ ಕೆಲವೊಂದು ಆಳವಾದ ಸಂಗತಿಗಳನ್ನು ಪೂರ್ಣವಾಗಿ ಒಡಂಬಡಿಸಿಕೊಳ್ಳಲು ತಡಮಾಡಿದಲ್ಲಿ ನಾವು ಆಶ್ಚರ್ಯಪಡಬೇಕಾದುದಿಲ್ಲ. ಅವರುಗಳು ಮೂಲಭೂತವಾದವುಗಳನ್ನು ಅಂದರೆ ಎಲ್ಲರೂ ಪಾಪಿಗಳಾಗಿದ್ದವರು, ನಮ್ಮ ನಾಯಕ ಕರ್ತನಾದ ಯೇಸುವು ತನ್ನನ್ನು ಸಮರ್ಪಿಸಿಕೊಳ್ಳುವುದರ ಮೂಲಕ ನಮ್ಮನ್ನು ಪಾಪದಿಂದ ವಿಮೋಚಿಸಿದ್ದಾನೆ ಎಂದು ಗ್ರಹಿಸಿಕೊಳ್ಳಬೇಕು ಈ ಕಾರ್ಯವು ಕಲ್ವಾರಿಯಲ್ಲಿ ಪೂರ್ಣಗೊಂಡಿದೆ; ನಾವೀಗ ಕ್ರಿಸ್ತನ ಶಾಲೆಯಲ್ಲಿದ್ದು ಆತನ ರಾಜ್ಯಕ್ಕೆ ಮತ್ತು ಸೇವೆಗೆ ಯೋಗ್ಯರಾಗಲು ಕಲಿಸಲ್ಪಡುತಿದ್ದೇವೆ; ಯಾರೂ ತಮ್ಮನ್ನು ಕರ್ತನಿಗೆ ಸಂಪೂರ್ಣವಾಗಿ ಸಮರ್ಪಿಸಿಕೊಳ್ಳದೆ ಈ ಶಾಲೆಯಲ್ಲಿ ಪ್ರವೇಶಿಸಲು ಸಾಧ್ಯವಿಲ್ಲ ಎಂಬಿತ್ಯಾದಿಗಳನ್ನು ಚೆನ್ನಾಗಿ ಗ್ರಹಿಸಿಕೊಳ್ಳಬೇಕು. ಈ ಎಲ್ಲಾ ಸಂಗತಿಗಳನ್ನು ನೋಡಬೇಕು ಮತ್ತು ಸದಾ ಸಂಪೂರ್ಣವಾಗಿ ಒಪ್ಪಿಕೊಳ್ಳಬೇಕು ಇಲ್ಲವಾದಲ್ಲಿ ನಾವು ನೂತನ ಸೃಷ್ಟಿಯ ಮಕ್ಕಳಾಗಿಯೂ ಇವುಗಳನ್ನು ಅಂಗೀಕರಿಸಲು ಸಾಧ್ಯವಿಲ್ಲ. ಆದರೆ ನಮ್ಮಲ್ಲಿ ಪ್ರತಿಯೊಬ್ಬರ ನಡುವೆ ತಾಳ್ಮೆ ಇರಬೇಕು ಮತ್ತು ಒಬ್ಬರು ಮತ್ತೊಬ್ಬರ ವಿಶಿಷ್ಟತೆಯನ್ನು ಸಹಿಸಿಕೊಳ್ಳುವವರಾಗಿರಬೇಕು. ಇವುಗಳೆಲ್ಲಾದರ ಹಿಂದೆ ಪ್ರೀತಿ ಇರಬೇಕು. ಇದು ಆತ್ಮನ ಎಲ್ಲಾ ಕೃಪೆಯನ್ನೂ ನಾವು ಹೊಂದಿದಂತೆಲ್ಲಾ ಪೂರ್ಣ ಪ್ರಮಾಣದಲ್ಲಿ ಹೆಚ್ಚಿಸುತ್ತದೆ.

ಹೀಗಿರುವುದರಿಂದ, ಹಲವರು ಭಾಗವಹಿಸುವ ಸಭೆಯಲ್ಲಿ ಹುಟ್ಟುವ ಎಲ್ಲಾ ಪ್ರಶ್ನೆಗಳೂ, ಎಲ್ಲಾ ಉತ್ತರಗಳೂ, ಎಲ್ಲಾ ಟೀಕೆಗಳೂ ಅದರಲ್ಲಿ ಪಾಲು ತೆಗೆದುಕೊಳ್ಳುತ್ತಿರುವ ಎಲ್ಲರಿಗಾಗಿಯೂ ಇರಬೇಕೇ ಹೊರತು ಯಾವ ವ್ಯಕ್ತಿಗಾಗಲೀ ಅಥವಾ ಸಂಖ್ಯೆಗಾಗಲೀ ಖಾಸಗಿಯಾಗಿ ಸೀಮಿತ ಅಲ್ಲ. ಆದುದರಿಂದ ಇವುಗಳನ್ನು ಎಲ್ಲರನ್ನು ಪ್ರತಿನಿಧಿಸುವ ಸಭಾಧ್ಯಕ್ಷರಿಗೆ ಉದ್ದೇಶಿಸಿ ಹೇಳಬೇಕು. ಆದರೂ ಸಭಾಧ್ಯಕ್ಷನು ಅನುಕೂಲಕ್ಕಾಗಿ ನೇರವಾಗಿ ಪ್ರೇಕ್ಷಕರನ್ನು ನಿಭಾಯಿಸುವಂತೆ ಭಾಷಣಕಾರನನ್ನು ಕೇಳಿಕೊಳ್ಳಬಹುದು. ಅದ್ದರಿಂದ, ತನ್ನ ಸ್ವಂತ ಅಭಿಪ್ರಾಯವನ್ನು ತಿಳಿಸಿದ ಮೇಲೆ, ಪ್ರತಿಯೊಬ್ಬರೂ ಶಾಂತಚಿತ್ತರಾಗಿ ಇತರರ ಅಭಿಪ್ರಾಯಗಳನ್ನು ಕೇಳಿಸಿಕೊಳ್ಳಬೇಕು. ಆದರೆ ಚರ್ಚಿಸುವುದಕ್ಕಾಗಲೀ, ಈಗಾಗಲೇ ತಿಳಿಸಿದ ಸ್ಥಿತಿಯನ್ನು ಪುನಃ ತಿಳಿಸುವುದಕ್ಕಾಗಿ ಕರೆದಿದ್ದಾರೆ ಎಂದು ಭಾವಿಸಲಾಗದು. ತನ್ನ ಅವಕಾಶವನ್ನು ಉಪಯೋಗಿಸಿಕೊಂಡ ನಂತರ ಪ್ರತಿಯೊಬ್ಬರೂ ಕರ್ತನು ತಮಗೆ ಮಾರ್ಗದರ್ಶನ ನೀಡುತ್ತಾನೆ, ಬೋಧಿಸುತ್ತಾನೆ ಮತ್ತು ಸತ್ಯಕ್ಕೆ ನಮ್ಮನ್ನು ನಡಿಸುತ್ತಾನೆ ಎಂದು ನಂಬಬೇಕು. ಸಂಗತಿಗಳನ್ನು ತಾನು ನೋಡುವಂತೆ ಅಥವಾ ಹೆಚ್ಚಿನವರು ನೋಡುವಂತೆ ಎಲ್ಲರೂ ನೋಡಬೇಕೆಂದು ಹಠ ಹಿಡಿಯಬಾರದು. "On essentials, Unity; on non-essentials Charity" (ಅಗತ್ಯವಾದವುಗಳು ಅನ್ಯೋನತೆಯಲ್ಲಿ; ಅನಗತ್ಯವಾದುವುಗಳು ಧರ್ಮದಲ್ಲಿ) ಎಂಬ ನಿಯಮವನ್ನು ಇಲ್ಲಿ ಪಾಲಿಸುವುದು ಸೂಕ್ತವೆನಿಸುತ್ತದೆ.

ಏನೇ ಆದರೂ, ಸತ್ಯದ ಎಲ್ಲಾ ಸಂಗತಿಗಳೂ ಮುಖ್ಯವಾದುವುಗಳು ಮತ್ತು ತಪ್ಪಿನ ಒಂದು ಸಣ್ಣ ಅಂಶವೂ ಹಾನಿಕರ ಹಾಗೂ ದೇವಜನರು ಅನ್ಯೋನ್ಯತೆ ಮತ್ತು ಜ್ಞಾನಕ್ಕಾಗಿ ಶ್ರಮಿಸಬೇಕೆಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಇದನ್ನು ಬಲವಂತವಾಗಿ ಪಡೆಯಬೇಕೆಂದು ನಾವು ನಿರೀಕ್ಷಿಸುವುದಿಲ್ಲ. ಅನ್ಯೋನ್ಯತೆಯ ಸ್ಫೂರ್ತಿಯು ಸತ್ಯದ ಪ್ರಾಥಮಿಕ ತತ್ವವಾಗಿದೆ. ಇದು ಎಲ್ಲಿ ಕಾಪಾಡಲ್ಪಡುತ್ತದೆಯೋ ಅಲ್ಲಿ ನಮ್ಮ ಕರ್ತನು ಇದನ್ನು ಹೊಂದಿದವರೆಲ್ಲರನ್ನು ತನಗೆ ಸಲ್ಲಬೇಕಾದ ಮತ್ತು ಅಗತ್ಯವಾದ ಎಲ್ಲಾ ಸತ್ಯಸಂಗತಿಗಳಿಗೆ ನಮ್ಮನ್ನು ನಡೆಸುತ್ತಾನೆಂದು ನಾವು ದೃಢವಾಗಿ ನಂಬಬಹುದು. ಈ ಸಂಬಂಧವಾಗಿ ಕರ್ತನ ಹಿಂಡಿನ ನಾಯಕರಿಗೆ ವಿಶೇಷವಾದ

ಜ್ಞಾನದ, ಪ್ರೀತಿಯ, ಗುಣನಡತೆಯ ರಭಸ ಮತ್ತು ಸತ್ಯದ ಸ್ಪಷ್ಟತೆ ಇವುಗಳ ಅಗತ್ಯವಿದೆ. ಇವುಗಳಿಂದ ಪ್ರತಿಕೂಟವು ಮುಕ್ತಾಯಗೊಳ್ಳುವಾಗ ಮುಂದಾಳತ್ವವಹಿಸಿದವನು ಎಲ್ಲರ ಮನಸ್ಸುಗಳನ್ನು ಆಶೀರ್ವಾದ ಪ್ರಭಾವದಲ್ಲಿರಿಸುವಂತೆ ತಾನು ಕಂಡುಕೊಂಡ ದೇವರ ವಾಕ್ಯದ ಸಂಗತಿಗಳನ್ನು ಕ್ರೋಢೀಕರಿಸಿಕೊಂಡು ಸ್ಪಷ್ಟವಾಗಿ, ಸಕಾರಾತ್ಮಕವಾಗಿ ಮತ್ತು ಪ್ರೀತಿಯಿಂದ ಮೂಲ ತತ್ವಗಳ ಹೊರತಾಗಿ ಬೇರೆ ಯಾವುದೇ ವಿಷಯದಲ್ಲಿ ಎಂದಿಗೂ ಹಠಮಾಡದೆ ಹೇಳಲು ಶಕ್ತನಾಗುತ್ತಾನೆ.

## ಶವ ಸಂಸ್ಕಾರದ ಆರಾಧನೆಗಳು
## Funeral Services

ಶವಸಂಸ್ಕಾರದ ಸಂಧರ್ಭಗಳಲ್ಲಿ, ಭಾಗವಸಿದ ಸ್ನೇಹಿತರುಗಳನ್ನು ಹೆಚ್ಚುಕಡಿಮೆ ಹಾಜರಾತಿಯಲ್ಲಿ, ತಣ್ಣಗೆ ಸ್ಥಬ್ದವಾಗಿರುವ ಶವ, ನೊಂದ ಹೃದಯಗಳು, ಆಶ್ರುತುಂಬಿದ ಕಣ್ಣುಗಳು ಮತ್ತು ಸೂತಕ ಛಾಯೆಯ ಕಪ್ಪು ಬಟ್ಟೆ ಮುಂತಾದವುಗಳು. ಮರಣವು ಮಾನವ ಜಾತಿಗೆ ಆಪ್ತವಾದುದಲ್ಲ, ಅದೊಂದು ಶತ್ರು ಎಂಬ ವಿಶಿಷ್ಟಗುರುತನ್ನು ಹಾಕಲು ಸಹಾಯ ಮಾಡುತ್ತವೆ. ಆದುದರಿಂದ ಅಂತಹ ಸಂಧರ್ಭಗಳು ಸತ್ಯವನ್ನು ಪ್ರಸ್ತುತಿ ಪಡಿಸಲು ಬಹಳ ಅನುಕೂಲಕರ ಮತ್ತು ಇದನ್ನು ಸದುಪಯೋಗ ಪಡಿಸಿಕೊಳ್ಳಬೇಕು. ಶವಸಂಸ್ಕಾರದ ಪ್ರವಚನದಿಂದ ಅನೇಕರು ಆಸಕ್ತಿಯಿಂದ ಅದರ ಸ್ಪಷ್ಟವಾದ ಪ್ರಸ್ತುತ ಸತ್ಯವನ್ನು ಪ್ರಥಮವಾಗಿ ಪಡೆದುಕೊಂಡಿರುವರು. ಇವುಗಳೊಂದಿಗೆ, ದುರಾಗ್ರಹದಿಂದಿದ್ದ ಸ್ನೇಹಿತರ ಅಪೇಕ್ಷೆಗಳನ್ನು ವಿರೋಧಿಸಲು ಮತ್ತು ಸತ್ಯದ ಸೇವಾ ಕಾರ್ಯಗಳಲ್ಲಿ ಭಾಗವಹಿಸಲು ಅಂಜುತ್ತಿದ್ದ ಅನೇಕರು ಇಂತಹ ಸಂಧರ್ಭಗಳಲ್ಲಿ ಭಾಗವಹಿಸಿ ಕೇಳಿಸಿಕೊಳ್ಳುತ್ತಾರೆ. ಈ ಪ್ರಕಾರವಾಗಿ ಅಂಥಹ ಸಂಧರ್ಭಗಳು ಅನುಮತಿಸುವಂತೆ ಅವುಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಬೇಕೆಂದು ನಾವು ಬುದ್ಧಿಹೇಳುತ್ತೇವೆ. ತೀರಿಕೊಂಡವನು ನಂಬಿಗಸ್ತನಾಗಿದ್ದು ಆತನ ಕುಟುಂಬದವರು ಅದಕ್ಕೆ ವಿರೋಧವಾಗಿದ್ದಲ್ಲಿ ಆತನು ತನ್ನ ಮರಣಕಾಲದ ವಿನಂತಿಯಲ್ಲಿ ತನ್ನ ಶವಸಂಸ್ಕಾರದ ಸಂಧರ್ಭದಲ್ಲಿ ಸತ್ಯವನ್ನು ಪ್ರತಿನಿಧಿಸುವ ಯಾರಾದರೂ ಒಬ್ಬರು ಪ್ರತಿನಿಧಿಸಿ ದುಃಖಿತರನ್ನು ಉದ್ದೇಶಿಸಿ ಸತ್ಯ ಉಪನ್ಯಾಸ ಮಾತನಾಡಬೇಕೆಂದು ಕೋರಿಕೊಳ್ಳಬೇಕು. ತೀರಿಕೊಂಡದ್ದು ಒಂದು ಮಗುವಾಗಿದ್ದು ಅದರ ತಂದೆ ತಾಯಿಗಳಿಬ್ಬರೂ ಸತ್ಯವನ್ನು ತಿಳಿದಿದ್ದರೆ ಈ ವಿಷಯದಲ್ಲಿ ಸಮಸ್ಯೆಯೇ ಇರುವುದಿಲ್ಲ. ಆದರೆ ಅವರಲ್ಲಿ ಒಬ್ಬರು ಮಾತ್ರವೇ ಅನುಕಂಪವುಳ್ಳವರಾಗಿದ್ದು, ಮತ್ತೊಬ್ಬರು ವಿರೋಧಿಯಾಗಿದ್ದರೆ ತಾಯಿಗೆ ತನ್ನ ಅಭಿಪ್ರಾಯಗಳನ್ನು ಹೇಳಿಕೊಳ್ಳುವ ಸಂಪೂರ್ಣ ಹಕ್ಕು ಇರುವುದಾದರೂ ವಿಷಯದ ಜವಾಬ್ದಾರಿ ಮಾತ್ರ ತಂದೆಯ ಮೇಲಿರುತ್ತದೆ, ಆತನು ಆಕೆಗೆ ವಿವೇಚನಾ ಯುಕ್ತವಾದ ಪರಿಗಣನೆಗೆ ಅವಕಾಶ ನೀಡಬೇಕು. ಕುಟುಂಬದ ಮುಖ್ಯಸ್ಥನಾಗಿ ದೇವರಲ್ಲಿ ತನಗಿರುವ ಜವಾಬ್ದಾರಿಗಳಿಂದ ಜಾರಿಕೊಳ್ಳುವಂತಿಲ್ಲ.

ಚಿಕ್ಕ ಚಿಕ್ಕ ಗುಂಪುಗಳಲ್ಲಿ ಕೆಲವು ಸಹೋದರರುಗಳು ಅಂತಹ ಸಂಧರ್ಭಗಳಲ್ಲಿ ನಮ್ಮ ಅಥವಾ ಬೇರೆ ಯಾರ ಸಲಹೆಗಳಿಲ್ಲದೆ ಹೃದಯಂಗಮವಾದ ಮತ್ತು ಪ್ರಯೋಜನಕರವಾದ ಪ್ರವಚನಗಳನ್ನು ನೀಡಲು ಅರ್ಹರಾಗಿರುತ್ತಾರೆ. ಆದರೆ ಅಭಿಷಕ್ತರ ಹೆಚ್ಚಾದ ಚಿಕ್ಕ ಗುಂಪುಗಳಲ್ಲಿ ಅಂತಹ ಪ್ರವಚನ ನೀಡುವ ವಿಶೇಷ ಧೀಮಂತ ಶಕ್ತಿಯ ಕೊರತೆ ಇರುತ್ತದೆ. ಆದುದರಿಂದ ನಾವು ಅಂತಹ ಸಂಧರ್ಭಗಳಲ್ಲಿ ನಡೆಸಬಹುದಾದ ಆರಾಧನೆಗಳ ಬಗ್ಗೆ ಪ್ರಯೋಜನಕಾರಿ ಸಲಹೆಗಳನ್ನು ನೀಡಲಿದ್ದೇವೆ. ಈ ಆರಾಧನೆಯನ್ನು ನಡೆಸುವ ಸಹೋದರನು ತೀರಿಕೊಂಡವರ ಹತ್ತಿರದ ಸಂಬಂಧಿಯಾಗಿರ ಬಾರದು. ಆದರೂ ಹತ್ತಿರ ಸಂಬಂಧಿಯ ಹೊರತಾಗಿ ಬೇರೆ ಯಾರೂ ದೊರೆಯದೇ ಹೋದಲ್ಲಿ ಮೃತನ ಮಗ, ಗಂಡ ಅಥವಾ ತಂದೆಯು ಆರಾಧನೆ ನಡೆಸಿದರೆ ಅದೇನು ತಪ್ಪಾಗಲಾರದು. ಸಾರ್ವಜನಿಕ ಮಾತನಾಡುವಿಕೆಯಲ್ಲಿ ಮತ್ತು ಈ ಪ್ರಸ್ತಾಪದ ಬಗ್ಗೆ ಆತನಿಗೆ ಸರಿಯಾದ ಅನುಭವವಿಲ್ಲವಾದಲ್ಲಿ ಕೆಳಗೆ ನೀಡಿರುವ ಕೆಲವೊಂದು ಸಲಹೆಗಳನ್ನು ಆತನು ಒಂದು ಹಾಳೆಯಲ್ಲಿ ಬರೆದಿಟ್ಟುಕೊಳ್ಳುವುದು ಒಳ್ಳೆಯದು. ಅವುಗಳನ್ನು ಆತನು ಕೂಡಿಬಂದವರಿಗೆ ಓದಿ ತಿಳಿಸಬಹುದು. ಈ ಬರಹವು ಕೈಬರಹ ಅಥವಾ ಟೈಪ್ ಮುದ್ರಿತವೂ ಆಗಿರಬಹುದು. ಇದನ್ನು ಸಭೆಯಲ್ಲಿ ಓದಿ ಹೇಳುವ ಮೊದಲು ಕೆಲವು ಸಾರಿ ಒಬ್ಬನೇ ಘಟ್ಟಿಯಾಗಿ ಓದಿ ಅಭ್ಯಾಸ ಮಾಡಿಕೊಳ್ಳಬೇಕು. ಇದರಿಂದ ಮಾತುಗಳು ಸರಾಗವೂ, ಸ್ಪಷ್ಟವೂ, ಮತ್ತು ಸಾಧ್ಯವಾದ ಮಟ್ಟಿಗೆ ಅರ್ಥವಾಗುವಂತಾದ್ದು ಆಗುತ್ತವೆ. ಇನ್ನೂ ಮುಂದುವರೆದು ನಾವು ನೀಡುವ ಸಲಹೆ ಏನೆಂದರೆ, ಸಂಧರ್ಭಕ್ಕೆ ಸೂಕ್ತನಾದ ಯಾವ ಒಬ್ಬ ಸಹೋದರನೂ ದೊರೆಯದೇ ಹೋದಲ್ಲಿ ಅದನ್ನು ಒಬ್ಬ ಸಹೋದರಿ ಯಾವುದಾದರೂ ರೀತಿಯ ತಲೆಯ ಮುಸುಕನ್ನು ಹಾಕಿಕೊಂಡು ಅವನ್ನು ಓದಿ ಹೇಳುವುದರಲ್ಲಿ ಯಾವ ಅನೌಚಿತ್ಯತೆಯೂ ಇರುವುದಿಲ್ಲ.

ಕರ್ತನಲ್ಲಿ ನಿದ್ರೆಹೋದ ಸಹೋದರನ ಅಂತಿಮ ಸಂಸ್ಕಾರದ ಆರಾಧನೆಯನ್ನು ನಡೆಸಲು ಮತ್ತು ಓದಿ ಹೇಳಲು ನಾವು ಕೆಳಕಂಡ ಕೆಲವು ಸಲಹೆಗಳನ್ನು ನೀಡುವವರಾಗಿದ್ದೇವೆ :–

(1) ಆರಾಧನೆಯನ್ನು ಒಂದು ಸೂಕ್ತವಾದ ಅಂದರೆ " ಕ್ರಿಸ್ತ ನಿತ್ಯ ಶೈಲವೆ, ಶರಣಾಗು ನನಗೆ ! ( Rock of Ages . . . ) "ಮತ್ತಷ್ಟು ಹತ್ತರ ನನ್ನ ತಕ್ಕೋ ! ( Nearer my God to Thee) " ಕರುಣಾಳು ಬಾ ಬೆಳಕೆ " (Lead Kindly Light) " Many sleep but not for ever " ಇವೇ ಮುಂತಾದ ಕೆಲವು ಸೌಮ್ಯ ಸ್ವರದ ಸಂಗೀತ ಹಾಡುವುದರ ಮೂಲಕ ಆರಂಭಿಸಬೇಕು.

(2) ಕುಟುಂಬದಲ್ಲಿ ಯಾರಾದರೂ ಬೇರೆ ಪಂಗಡದ ಸಭೆಯ ಸದಸ್ಯರಾಗಿದ್ದು ಅವರು ದೇವರ ಸೇವಕರಿಗೆ ಆರಾಧನೆಯ ಕೆಲವು ಭಾಗವನ್ನು ನೀಡಬೇಕೆಂದು ಬಯಸಿದಲ್ಲಿ ಅವರಿಗೆ ಪುನರುತ್ಥಾನದ ಬಗ್ಗೆ ಕೆಲವೊಂದು ದೇವರ ವಾಕ್ಯದ ವಚನಗಳನ್ನು ಓದುವಂತೆ ಅಥವಾ ಪ್ರಾರ್ಥಿಸುವಂತೆ ಇಲ್ಲವೆ ಎರಡನ್ನೂ ಮಾಡುವಂತೆ ಹೇಳಲು ಇದು ಬಹಳಷ್ಟು ಸೂಕ್ತವಾದ ಸಮಯ. [ಹಾಗೇನೂ ಇಲ್ಲವಾದಲ್ಲಿ ಈ(2)ರ ಸಲಹೆಯನ್ನು ತೆಗೆದು ಹಾಕಿ (3) ರಿಂದ ಮುಂದುವರಿಸಿ]

(3) ಶವಸಂಸ್ಕಾರದ ಸಮಯದಲ್ಲಿ ನೀಡಬೇಕಾದ ಪ್ರವಚನದಲ್ಲಿರಬೇಕಾದ ಮುಖ್ಯ ಅಂಶಗಳು:–

ಪ್ರಿಯ ಸ್ನೇಹಿತರೆ, ನಾವುಗಳು ತೀರಿಕೊಂಡಿರುವ ಈ ನಮ್ಮ ಸ್ನೇಹಿತರು ಹಾಗೂ ಸಹೋದರರ ಸ್ಮರಣಾರ್ಥ ಗೌರವಾರ್ಪಣೆ ಅರ್ಪಿಸಲು ಇಲ್ಲಿ ಕೂಡಿಬಂದಿದ್ದೇವೆ. ಇವರ ಪಾರ್ಥಿವ ಶರೀರವನ್ನು "ಮಣ್ಣು ಮಣ್ಣಿಗೆ, ಬೂದಿ ಬೂದಿಗೆ"ಎಂಬಂತೆ ನಾವು ಸಧ್ಯದಲ್ಲಿಯೇ ಸಮಾಧಿಗೆ ಸೇರಿಸುವವರಾಗಿದ್ದೇವೆ. ಈ ಲೋಕದಲ್ಲಿ ಮರಣ ಮತ್ತು ಅದರೊಂದಿಗೆ ಬರುವ ಅಸೌಖ್ಯ, ಬೇನೆ ಬೇಸರಗಳಿಗಿಂತ ಸರ್ವಸಾಮಾನ್ಯವಾದ ಸಂಗತಿ ಮತ್ತೊಂದಿಲ್ಲ ಎಂಬ ಸತ್ಯವನ್ನು ಎದುರಿಸಲಾಗದೆ ನಾವು ಬುದ್ದಿವಂತರಾಗಿದ್ದರೂ ಸಹಾ ನಮ್ಮ ಸ್ನೇಹ ಬಂಧನ, ಪ್ರೀತಿ ಮತ್ತು ಸಹೋದರತ್ವ ಇವುಗಳ ವೇದನಾಪೂರಿತ ಅಗಲುವಿಕೆಗೆ ಹೊಂದಿಕೊಳ್ಳುವುದು ನಮಗೆ ಅಸಾಧ್ಯವಾಗಿ ಕಂಡು ಬರುತ್ತಿದೆ. ನಾವು ಈ ವ್ರಣವನ್ನು ಲೇಪಿಸುವವರಾದರೂ, ಅಪೋಸ್ತಲನು ಹೇಳುವಂತೆ "ಕ್ರೈಸ್ತರು ನಿರೀಕ್ಷೆ ಇಲ್ಲದವರಾದ ಇತರರಂತೆ ದುಃಖಿಸಬಾರದು"(1 ಥೆಸ. 4:13 ) ಎಂದು ಹೇಳಿದಾಗ್ಯೂ ಅದು ಇನ್ನೂ ನೋವುಳ್ಳದ್ದಾಗಿದೆ. ಇಂದು ಇಂತಹ ಉತ್ತಮವಾದ ನಿರೀಕ್ಷೆಯನ್ನು ಪರೀಕ್ಷಿಸುವುದಕ್ಕಿಂತ ಹೆಚ್ಚು ಸೂಕ್ತವಾದುದು. ಗಿಲ್ಯಾದದ ಲೇಪನವು ಬೇರೆ ಯಾವುದೂ ಮಾಡಲಾಗದ ರೀತಿಯಲ್ಲಿ ಲೋಕದ ದುಃಖವನ್ನೆಲ್ಲಾ ಗುಣಪಡಿಸುವುದಾಗಿದೆ ಎಂದು ಸತ್ಯವೇದದಲ್ಲಿ ನಮಗೆ ತಿಳಿಸಲಾಗಿದೆ.

ಹೀಗಿದ್ದಾಗ್ಯೂ, ಸತ್ಯವೇದದಲ್ಲಿ ನಮಗೆ ದಯಪಾಲಿಸಿರುವ ನಿರೀಕ್ಷೆಗಳನ್ನು ಅಂದರೆ ಸತ್ತವರ ಪುನರುತ್ಥಾನ, ಮುಂದಿನ ಜೀವಿತದಲ್ಲಿ ಈಗಿನ ಜೀವನಕ್ಕಿಂತಲೂ ಹೆಚ್ಚಾದ ಸಂತೋಷಕರ ಸ್ಥಿತಿ ಇವುಗಳನ್ನು ಪರಿಗಣಿಸುವ ಮುನ್ನ "ನಮಗೆ ಅಂತಹ ನಿರೀಕ್ಷೆ ಯಾಕೆ ಬೇಕು? ಸತ್ತ ನಂತರ ಪುನರುತ್ಥಾನ ಹೊಂದುವ ಬದಲಾಗಿ ಮರಣದಿಂದಲೇ ನಮ್ಮನ್ನು ಪಾರುಮಾಡಲು ಸಾಧ್ಯವಿಲ್ಲವೆ? ದೇವರು ನಮ್ಮನ್ನು ಸ್ವಲ್ಪ ಕಾಲ ಮತ್ತು ವರ್ಷಗಳು ಮಾತ್ರವೇ ಈ ಲೋಕದಲ್ಲಿ ಜೀವಿಸಲು ಬಿಟ್ಟಿರುವಾಗ ಅದರಲ್ಲಿ ಅನೇಕ ತೊಂದರೆಗಳನ್ನು ಎದುರಿಸಬೇಕಾದುದಾದರೂ ಏಕೆ? ನಂತರ ಹುಲ್ಲನ್ನು ಕತ್ತರಿಸಿಹಾಕುವಂತೆ ನಮ್ಮನ್ನು ಈ ಲೋಕದಿಂದ ಕಿತ್ತುಹಾಕುವುದಾದರೂ ಏಕೆ? ಮತ್ತು ನಮ್ಮ ಜನಾಂಗದ ಬಹುದೊಡ್ಡ ಶತ್ರುವಾದ ಮರಣವು ಧಾವಿಸಿ ಬಂದು ನಮ್ಮ ಹೃದಯದ ಸಂಪರ್ಕವನ್ನು ಕಡಿದುಹಾಕಿ, ನಮ್ಮ ಮನೆಯ ಮತ್ತು ಕುಟುಂಬದ ವ್ಯವಸ್ಥೆಗಳನ್ನೆಲ್ಲಾ ಬುಡಮೇಲು ಮಾಡುವುದಾದರೂ ಏಕೆ? (ಇದು ಕಳೆದ ಆರು ಸಾವಿರ ವರ್ಷಗಳಲ್ಲಿ ಆದಾಮ ಸಂತಾನದ ಸುಮಾರು 50 ಸಾವಿರ ಮಿಲಿಯನ್ ಮಾನವ ಜೀವಿಗಳನ್ನು ಬಲಿ ತೆಗೆದುಕೊಂಡಿದೆ ಎಂದು ಅಂದಾಜು ಮಾಡಲಾಗಿದೆ) ಎಂಬಿತ್ಯಾದಿ ಅನೇಕ ಪ್ರಶ್ನೆಗಳು ನಮಗೆ ಸಮರ್ಪಕವಾದ ರೀತಿಯಲ್ಲಿ ಎದುರಾಗುತ್ತವೆ. ಆಲೋಚಿಸುವ ಮನಸ್ಸುಗಳು ಇದಕ್ಕಿಂತ ಹೆಚ್ಚು ಕುತೂಹಲಕಾರಿ ಪ್ರಶ್ನೆಗಳನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ.

ಮಾನವನು ಕೇವಲ ಮೇಲ್ತರಗತಿಯ ಪ್ರಾಣಿಯಾಗಿ ಜನಿಸಿ, ಇತರ ಪಶುಗಳಂತೆ ಜೀವಿಸಿ ಸತ್ತು ಹೋಗುತ್ತಾನೆಂದೂ ಆತನಿಗೆ ಮುಂದಣ ಜೀವಿತವೆಂಬುದೇ ಇಲ್ಲವೆಂದು ಧರ್ಮನಿಂದಕರು ಹೇಳುತ್ತಾರೆ, ಅಂತಹ ಆಲೋಚನೆಗಳಿಂದ ಕಂಪಿಸುತ್ತಿರುವಾಗ, ನಮ್ಮ ಅನುಭವದ ಮೂಲಕ ಇದಕ್ಕೆ ವ್ಯತಿರಿಕ್ತವಾಗಿ ಏನೂ ಹೇಳದಾದಾಗ ದೇವರ ಮಕ್ಕಳಾದ ನಮಗೆ "ನಮ್ಮ ಕರ್ತನಾದ ಕ್ರಿಸ್ತನ ಮೂಲಕ ಶಾಂತಿಯ ಮಾತುಗಳು" ತಂದೆಯಿಂದ ಕೇಳಿಬರುತ್ತವೆ. ನಮ್ಮ ವಿಮೋಚಕನು ಆತನ ಅನುಯಾಯಿಗಳಿಗೆ ನೀಡುವ ಶಾಂತಿಯ ಮಾತುಗಳು ಈ ಸಂಬಂಧ ನಿರಾಕರಿಸುವ ಮಾತುಗಳಲ್ಲ, ಅಥವಾ ನೋವಿಲ್ಲ, ದುಃಖವಿಲ್ಲ, ಮರಣವಿಲ್ಲ ಎಂಬ ಪ್ರಕಟನೆಯ ಮಾತುಗಳೂ ಅಲ್ಲ ಆದರೆ ಅದಕ್ಕೆ ವಿರೋಧ ದಿಕ್ಕಿನವು. "ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ"(ಯೋಹಾನ 11:25) ಎಂದು ಆತನು ಪ್ರಕಟಿಸುವವನಾಗಿದ್ದಾನೆ. ಸಮಾಧಿಯಲ್ಲಿ ಇರುವವರೆಲ್ಲರೂ ತನ್ನ ಮಾತುಗಳನ್ನು ಕೇಳಿ ಹೊರಬರುವರು ಎಂದು ಆತನು ಮೇಲಿಂದ ಮೇಲೆ ಹೇಳುತ್ತಾನೆ. ಧರ್ಮನಿಂದಕರ ಮಾತುಗಳಿಗೆ ವ್ಯತಿರಿಕ್ತವಾದ ಈ ಮಾತುಗಳು ನಮಗೆ ಎಷ್ಟೋ ಮಧುರವಾಗಿವೆ ! ಇದು ನಿರೀಕ್ಷೆಯನ್ನು ಉಂಟು ಮಾಡುತ್ತದೆ, ಈ ನಿರೀಕ್ಷೆಯು ನಾವು ತಂದೆಯನ್ನು ಮತ್ತು ನಾವು ಕೇಳಿದ ಮಾತುಗಳನ್ನು ಹೇಳಿದ ಮತ್ತು ದೇವರ ಕೃಪಾಭರಿತ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದ ಮಗನನ್ನು ಸಹಾ ಅರಿತುಕೊಂಡು ಅವರಲ್ಲಿಡುವ ವಿಶ್ವಾಸದ ಪ್ರಮಾಣಕ್ಕೆ ಅನುಗುಣವಾಗಿ ಶಾಂತಿಯನ್ನು ತರುತ್ತದೆ.

ಕರ್ತನು ಮೊದಲು ಪುನರುತ್ಥಾನವನ್ನು ಉದ್ಧೇಶ ದಲ್ಲಿಟ್ಟುಕೊಂಡು, ಪುನರುತ್ಥಾನದ ಸಂದೇಶವು ಶಾಂತಿ, ವಿರಾಮ ಮತ್ತು ನಿರೀಕ್ಷೆ ಇವುಗಳನ್ನು ತರುವುದಾದಲ್ಲಿ 'ದೇವರು ಮಾನವರಾದ ನಮ್ಮನ್ನು ಮೊದಲು ವಿನಾಶದ ಕಡೆಗೆ ಯಾಕೆ ತಿರುಗಿಸಬೇಕು? ಮತ್ತು ನಂತರದಲ್ಲಿ ಮಾನವಜಾತಿಗೆ ಕೀರ್ತನಾಗಾರನ ಮಾತುಗಳಂತೆ ಮನುಷ್ಯರೇ, ಸಾಯಿರಿ ಎಂದು ಆಜ್ಞಾಪಿಸಿ ಮಣ್ಣಿಗೇಕೆ ಸೇರಿಸಬೇಕು? (ಕೀರ್ತನೆ 90:3 ನೋಡಿರಿ) ಅವರನ್ನು ಯಾಕೆ ಜೀವಂತವಾಗಿರಲು ಬಿಡಬಾರದು? ದುಃಖ, ನೋವು ಮತ್ತು ಮರಣವನ್ನು ಯಾಕೆ ತಡೆಯಬಾರದು? ಎಂಬಿತ್ಯಾದಿಯಾಗಿ ವಿಚಾರಿಸುವುದು ಯುಕ್ತವಾಗಿಯೇ ಇದೆ. ನಾವು ಉತ್ತರಿಸುವುದೇನೆಂದರೆ ದೇವರ ವಾಕ್ಯಗಳು ಮಾತ್ರವೇ ಪ್ರಸ್ತುತ ಪರಿಸ್ಥಿತಿಯ ವಿವರವನ್ನು ನಮಗೆ ನೀಡುತ್ತವೆ. ಬೇರೆ ಯಾವುದೂ ಈ ಪ್ರಸ್ತಾಪದ ಮೇಲೆ ಸ್ವಲ್ಪವಾದರೂ ಬೆಳಕನ್ನು ಚೆಲ್ಲುವುದಿಲ್ಲ. ದೇವರ ವಾಕ್ಯಗಳ ಸಾಕ್ಷ್ಯವೇನೆಂದರೆ ದೇವರು ಮೂಲದಲ್ಲಿ ಮಾನವನನ್ನು ತನ್ನ ಸ್ವರೂಪದಲ್ಲಿ ಮತ್ತು ತನ್ನಂತೆ ಪರಿಪೂರ್ಣವಾಗಿಯೇ ಸೃಷ್ಟಿಸಿದನು. ಆದರೆ ಅವಿಧೇಯತೆಯ ಕಾರಣ ನಮ್ಮ ಆದಿ ತಂದೆ ತಾಯಿಗಳು ಆ ಸ್ಥಿತಿಯಿಂದ ಬಿದ್ದು ಪಾಪದ ಫಲವಾದ ಮರಣ ದಂಡನೆಗೆ ತುತ್ತಾದರು. ತಂದೆಯಾದ ಆದಾಮನಿಗೆ ನೀಡಲ್ಪಟ್ಟ ಮರಣದಂಡನೆ ಎಂಬ ಶಾಪವು ಆತನ ಸಮಸ್ತ ಜನಾಂಗಕ್ಕೆ ಸ್ವಾಭಾವಿಕ ರೀತಿಯಲ್ಲಿ ತೊಡರಿಸಿಕೊಂಡಿತು. ಪಾಪದ ತೀವ್ರತೆಯು ಮಾನವ ಜನಾಂಗದ ಮೇಲೆ ಹೆಚ್ಚಿತು ಮತ್ತು ರೋಗ, ವೇದನೆ ಮತ್ತು ಮರಣವು ಇದರ ಪ್ರಮಾಣಕ್ಕೆ ತಕ್ಕಂತೆ ತ್ವರೆಪಟ್ಟವು.

ತಂದೆಯಾದ ಆದಾಮನ ಪಾಪದ ಸಂಬಳವಾದ ಮರಣವು ಶಾಪವೂ ದಂಡನೆಯೂ ಆಗಿದ್ದು ನಿತ್ಯಕಾಲದ ಬಾಧೆಯಾಗಿದೆ ಹಾಗೂ ನಾವು ಮತ್ತು ಎಲ್ಲಾ ಮಾನವ ಜಾತಿಯೂ

ವರ್ಣಿಸಲಾಗದ ಆ ದಂಡನೆಯನ್ನು ಮೂಲ ಪಾಪದ ಫಲವಾಗಿ ಅನುವಂಶಿಕವಾಗಿ ಪಡೆದಿದ್ದೇವೆ; ಕ್ರಿಸ್ತನ ಅನುಯಾಯಿಗಳು ಮತ್ತು ಪ್ರತಿಷ್ಠೆ ಹೊಂದಿದ ಸಂತರುಗಳು ಮಾತ್ರವೇ ಇದರಿಂದ ಪಾರಾಗುತ್ತಾರೆ ಎಂದು ನಮಗೆ ತಪ್ಪಾಗಿ ಕಲಿಸಿಕೊಡಲಾಯಿತು. ಆದರೆ ಪ್ರಿಯ ಸ್ನೇಹಿತರೆ, ದೇವರ ಮಾತುಗಳು ಅಂತಹ ಯಾವುದೇ ವಿವೇಚನಾರಹಿತವಾದ, ಅನ್ಯಾಯವಾದ ಮತ್ತು ಪ್ರೀತಿಯಿಲ್ಲದ ಯೋಜನೆಯನ್ನು ಬೆಂಬಲಿಸುವುದಿಲ್ಲ. ಬದಲಾಗಿ ದೇವರ ವಾಕ್ಯವು ಸ್ಪಷ್ಟವಾಗಿ ಇದಕ್ಕೆ ವ್ಯತಿರಿಕ್ತವಾಗಿ "ಪಾಪದ ಸಂಬಳ ಮರಣ ದೇವರ ಉಚಿತಾರ್ಥ ವರವು ನಮ್ಮ ಕರ್ತನಾದ ಕ್ರಿಸ್ತಯೇಸುವಿನಲ್ಲಿರುವ ನಿತ್ಯಜೀವ" (ರೋಮಾಪುರದವರಿಗೆ 6:23) ಎಂದು ಹೇಳುತ್ತದೆ. ಈ ಉಚಿತಾರ್ಥ ವರವನ್ನು ದೇವರ ಪ್ರೀತಿಯ ಮಗನೊಂದಿಗೆ ಅತಿ ಮಹತ್ವವಾದ ರೀತಿಯಲ್ಲಿ ಅನ್ಯೋನ್ಯತೆ ಹೊಂದಿದವರಲ್ಲದೇ ಬೇರೆ ಯಾರೂ ಹೊಂದಿಕೊಳ್ಳಲಾರರು. ಹೀಗಿರುವಲ್ಲಿ ನಾವು ನೋಡಿರುವಂತೆ ದುಷ್ಟರಿಗೆ ನಿತ್ಯಜೀವವು ದೊರೆಯುವುದಿಲ್ಲ ಆದರೂ ಅವರು ನಿರಂತರ ಹಿಂಸೆ ಯಾತನೆಗೆ ಒಳಗಾಗುವುದಿಲ್ಲ. ದೇವರ ವಾಕ್ಯದ ಪ್ರಕಟನೆಯು ಬಹಳ ಸ್ಪಷ್ಟವೂ ಸಮಂಜಸವೂ ಆಗಿದೆ – "ಕರ್ತನು ತನ್ನನ್ನು ಪ್ರೀತಿಸುವವರೆಲ್ಲರನ್ನೂ ಕಾಪಾಡುತ್ತಾನೆ ; ಆದರೆ ಎಲ್ಲಾ ದುಷ್ಟರನ್ನು ಸಂಹರಿಸುತ್ತಾನೆ" (ಕೀರ್ತನೆ 145:20)

ತಂದೆಯಾದ ಆದಾಮನು ಪರೀಕ್ಷೆಗೊಳಪಟ್ಟಾಗ ಬೇರೆ ಎಲ್ಲವುಗಳಿಗಿಂತ ಅದೇ ಸಮಯ ಮತ್ತು ಸ್ಥಳದಲ್ಲಿ ಪರಲೋಕದ ನಮ್ಮ ತಂದೆಯಾದ ದೇವರ ಪ್ರಮಾಣಿಕವಾದ ರೌದ್ರಕ್ಕೆ ದಂಡನೆ ಏನೆಂಬ ಹೇಳಿಕೆಯನ್ನು ನಾವು ಸ್ಪಷ್ಟವಾಗಿ ಗಮನಿಸಬೇಕು. ಆ ಹೇಳಿಕೆಯೇನೆಂದರೆ ನಮ್ಮ ಆದಿ ತಂದೆತಾಯಿಗಳಿಗೆ ದೇವರು ಸಮೃದ್ಧವಾಗಿ ವಿವಿಧ ರೀತಿಯ ಜೀವದಾಯಕ ಫಲನೀಡುವ ವೃಕ್ಷಗಳನ್ನು ಏದೇನ್‌ನಲ್ಲಿ ದಯಪಾಲಿಸಿದ್ದನು. ಆದರೆ ವಿಧೇಯತೆಯ ನೆಲೆಯಲ್ಲಿ ಒಂದು ನಿರ್ಧಿಷ್ಟವಾದ ಮರದ ಫಲವನ್ನು ಮುಟ್ಟಬಾರದೆಂಬ ಪರೀಕ್ಷೆಯನ್ನು ಒಡ್ಡಿದನು. ಇದಕ್ಕೆ ಅವಿಧೇಯನಾದುದೇ ಅವರನ್ನು ಪರದೈಸಿನಿಂದ – ಜೀವದಾಯಕ ವೃಕ್ಷಗಳಿಂದ (ತೋಪಿನಿಂದ) ಹೊರಹಾಕಲು ಕಾರಣ. ಕ್ರಮೇಣವಾಗಿ ಆತನನ್ನು ಸಾಯುವ ಪರಿಸ್ಥಿತಿಗೆ ತರಲಾಯಿತು ಮತ್ತು ಇದು ಇನ್ನೂ ಉಳಿದುಕೊಂಡಿದೆ ಮತ್ತು ಹೆಚ್ಚುತ್ತಾ ಹೋಗುತ್ತಿದೆ. ಇಂದು ಮಾನವನ ಆಯುಷ್ಕಾಲವು ಆದಾಮನ ಸರಾಸರಿ ಪ್ರಾಯದಿಂದ ಬಹಳಷ್ಟು ಕುಸಿದಿದೆ ಎಂದು ಎಲ್ಲರೂ ಬಲ್ಲವರಾಗಿದ್ದಾರೆ. ಯಾಕೆಂದರೆ ಆದಾಮನು ಒಂಬೈನೂರ ಮೂವತ್ತುವರ್ಷ ಕಾಲ ಜೀವಿಸಿದನು.

ಆದಿಕಾಂಡದಲ್ಲಿ ನೀಡಿರುವ ದೇವರ ವಾಕ್ಯದಲ್ಲಿ "ಒಳ್ಳೆಯದರ ಕೆಟ್ಟದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು; ತಿಂದ ದಿನ ಸತ್ತೇ ಹೋಗುವಿ" (ಆದಿಕಾಂಡ 2:17) ಎಂಬುದಾಗಿದೆ. "ದಿನ' ಎಂಬ ಈ ಶಬ್ಧವನ್ನು ಅಪೋಸ್ತಲನಾದ ಪೇತ್ರನು ವಿವರಿಸುತ್ತಾ ಅದು ದೇವರ ದಿನವೆಂದೂ "ಕರ್ತನ ಎಣಿಕೆಯಲ್ಲಿ ಒಂದು ದಿನವು ಸಾವಿರ ವರ್ಷಗಳಂತೆಯೂ ಸಾವಿರ ವರ್ಷಗಳು ಒಂದು ದಿನದಂತೆಯೂ ಅವೆ ಎಂಬುದನ್ನು ಮಾತ್ರ ಮರೆಯಬೇಡಿರಿ" (2 ಪೇತ್ರ 3:8). ಈ ರೀತಿಯ ಒಂದು ದಿನದಲ್ಲಿ (ಒಂದು ಸಾವಿರ ವರ್ಷದೊಳಗೆ) ಆದಾಮನು ಸತ್ತನು. ಆತನ ಮುಂದಿನ ಪೀಳಿಗೆಯಲ್ಲಿ ಯಾರೂ ಸಾವಿರ ವರ್ಷಗಳಿಗಿಂತ ಹೆಚ್ಚು ಕಾಲ ಬಾಳಲಿಲ್ಲ. ಆದಾಮನು ಪಾಪಮಾಡಿದ ಮೇಲೆ ದೇವರ ದಂಡನೆಯ ಮಾತುಗಳು ಆತನಿಗೆ ತನ್ನ ಸೃಷ್ಟಿಗಳನ್ನು ಹಿಂಸಿಸುವ ಅಲೋಚನೆ ಇಲ್ಲವೆಂದು ಸ್ಪಷ್ಟವಾಗಿ ತೋರಿಸಿಕೊಡುತ್ತವೆ. ಶಾಪವು ಪ್ರಸ್ತುತ ಜೀವನವನ್ನು ನಾಶಗೊಳಿಸುವುದಕ್ಕಿಂತ ಮತ್ತು ಮರಣ ಸ್ಥಿತಿಗೆ ಸಂಬಂಧಿಸಿದ ಸಂಭವನೀಯವಾದ ನರಳಾಟ ಇವುಗಳನ್ನು ಮೀರಿ ಹೋಗಿರುವುದಿಲ್ಲ. ಆದಾಮನಿಗೆ ದೇವರು ನೀಡಿದ ಶಾಪದ ಹೇಳಿಕೆಯೆಂದರೆ " ನೀನು ತಿರುಗಿ ಮಣ್ಣಿಗೆ ಸೇರುವ ತನಕ ಬೆವರಿಡುತ್ತಾ ಬೇಕಾದ ಆಹಾರವನ್ನು ಸಂಪಾದಿಸಬೇಕು. ನೀನು ಮಣ್ಣಿನಿಂದ ತೆಗೆಯಲ್ಪಟ್ಟವನಲ್ಲವೋ; ನೀನು ಮಣ್ಣೇ; ಪುನಃ ಮಣ್ಣಿಗೆ ಸೇರತಕ್ಕವನಾಗಿದ್ದೀ" (ಆದಿಕಾಂಡ 2:17; 3:19; 2 ಪೇತ್ರ 3:8).

ನಿತ್ಯವಾದ ಬಾಧೆ ಅದರ ದಂಡನೆಗಳೊಡನೆ ನಮ್ಮ ಆದಿ ತಂದೆತಾಯಿಗಳಿಗೆ ಮಾತ್ರವಲ್ಲ ಅವರ ಎಲ್ಲಾ ಸಂತಾನದವರ ಮೇಲೂ ಪರಿಣಾಮವನ್ನುಂಟುಮಾಡುತ್ತದೆ ಎಂಬ ಧಾರುಣವಾದ ಸಿದ್ಧಾಂತವು ಸುಳ್ಳು ಎಂದು ಗ್ರಹಿಸುವುದು ಬಹಳ ಸಂತೋಷಕ್ಕೆ ಕಾರಣವಾಗುತ್ತದೆ. ಈ ಸಿದ್ಧಾಂತವು ಸತ್ಯವೇದದ ಮೂಲಕ ಬಂದುದಲ್ಲ ಆದರೆ ಕತ್ತಲೆಯ ಯುಗದಿಂದ ಬಂದದ್ದಾಗಿದೆ. ಕರ್ತನ ಪ್ರಕಟನೆಯು ಯಾವ ಮಾತುಗಳಲ್ಲಿಯೂ ಇಂತಹ ಅರ್ಥವು ಕಂಡು ಬರುವುದಿಲ್ಲ. ಆದಿಕಾಂಡದಲ್ಲಿನ ಈ ಸಂಬಂಧಿತ ಪ್ರಸ್ತಾಪಕ್ಕೆ ಅಪೋಸ್ತಲನಾದ ಪೌಲನು ನೀಡುವ ವಿವರಣೆ ಏನೆಂದರೆ – "ಒಬ್ಬ ಮನುಷ್ಯನಿಂದಲೇ ಪಾಪವೂ, ಪಾಪದಿಂದ ಮರಣವು ಲೋಕದೊಳಗೆ ಸೇರಿದವು; ಎಲ್ಲರು ಪಾಪ ಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು" (ರೋಮಾ.5:12) ಮರಣದ ಬಗ್ಗೆ ಈ ದೈವಿಕ ವಿವರಣೆಗಿಂತ ಹೆಚ್ಚು ವಿವೇಚನಾ ಶಾಲಿಯಾದ, ಅರ್ಥಗರ್ಭಿತವಾದ ಮತ್ತು ತೃಪ್ತಿಕರವಾದ ವಿವರಣೆ ಬೇರೆ ಯಾವುದಿದೆ? ಇದುವೇ ಪಾಪದ ಫಲ; ನಮ್ಮ ಮೂಲ ತಂದೆಯಾದ ಆದಾಮನು ಪರೀಕ್ಷೆಗೊಳಗಾದಾಗ ತನ್ನ ಅವಿಧೇಯತೆಯ ಕಾರಣ ತನ್ನೆಲ್ಲಾ ಸೌಕರ್ಯಗಳನ್ನು ಕಳೆದುಕೊಂಡನು ಮತ್ತು ರೋಗ, ವೇದನೆ, ತೊಂದರೆ ಮತ್ತು ಮರಣ ಮುಂತಾದ ಶಾಪಕ್ಕೊಳಗಾದನು. ನಾವು ಯಾವ ಪರೀಕ್ಷೆಗೂ ಒಳಗಾಗದೆ (ಪಾಪ ಭರಿತವಾದ ಪ್ರವೃತ್ತಿ ಮತ್ತು ಬಲಹೀನತೆಯನ್ನು ಅನುವಂಶಿಕವಾಗಿ ಪಡೆದಿರುವ ನಮಗೆ ಈ ಪರೀಕ್ಷೆಯು ಅಪ್ರಯೋಜಕವಾಗಿದೆ) ದೇವರ ಈ ದಂಡನೆಯಲ್ಲಿ ಅಂದರೆ ಮರಣದಲ್ಲಿ ಪಾಲುದಾರರಾಗಿದ್ದೇವೆ – ಒಂದು ಸಂತಾನವಾಗಿ ನಾವು ಕ್ರಮೇಣವಾಗಿ ಬಲಹೀನತೆ, ರೋಗ, ವೇದನೆ ಮತ್ತು ತೊಂದರೆಗಳಲ್ಲಿ ಸಮಾಧಿ ಸೇರುತ್ತೇವಲ್ಲವೋ??

ವಿವರಣೆಯು ನಮ್ಮ ತೀರ್ಪಿಗೆ ತೃಪ್ತಿಕರವಾಗಿದೆ ಮತ್ತು ಇದು ಒಂದು ಘಂಟೆ, ಒಂದು ದಿನ, ಕೆಲವು ವಾರ ಅಥವಾ ತಿಂಗಳಿನ ಕೂಸು ಸಹಾ ನೋವಿನ ಹಾಗೂ ಸಾವಿನ ಪ್ರಕ್ರಿಯೆಯಲ್ಲಿ ದೀರ್ಘ ಕಾಲ ಬಾಳಿದವರೊಡನೆ ಪಾಲುಗಾರರಾಗುತ್ತದೆ ಮತ್ತು ವ್ಯಕ್ತಿಗತವಾಗಿ ನೀತಿಯ ನಿಯಮಗಳನ್ನು ಉಲ್ಲಂಘನೆಯಲ್ಲಿ ಭಾಗವಹಿಸುತ್ತದೆಂಬ ಸತ್ಯಕ್ಕೆ ಕಾರಣ ನೀಡುತ್ತದೆ. "ಹುಟ್ಟಿದಂದಿನಿಂದಲೂ ನಾನು ಪಾಪಿಯೇ; ಮಾತೃಗರ್ಭವನ್ನು ಹೊಂದಿದ ದಿನದಿಂದಲೂ ದ್ರೋಹಿಯೇ" (ಕೀರ್ತನೆ 51:5) ಎಂಬುದು ಈ ಆಂಶದ ಬಗ್ಗೆ ಸತ್ಯವೇದದ

ಪ್ರಕಟನೆ– "ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೇ ಹೋಗಿದ್ದಾರೆ" (ರೋಮಾ. 3:23).

ಆದರೆ ಈಗ ನಿರೀಕ್ಷೆ ಎಲ್ಲಿದೆ? ಇಂತಹ ಶೋಚನೀಯ ಪರಿಸ್ಥಿತಿಗೆ ಯಾವ ಸಹಾಯವಿದೆ? ಈಗ ಪ್ರಪಂಚದಾದ್ಯಂತ ಕಷ್ಟಪಡುವವರಿಗೆ, ದುಃಖ ಪಡುವವರಿಗೆ, ಸಾಯುವವರಿಗೆ ಏನು ಮಾಡಬಹುದು? ಈಗಾಗಲೇ ಮರಣವೆಂಬ ಬಂದೀಖಾನೆಯನ್ನು ಸೇರಿಹೋಗಿರುವ ಸುಮಾರು 50 ಸಾವಿರ ಮಿಲಿಯಕ್ಕೂ ಹೆಚ್ಚು ಜನರಿಗೆ ಏನು ಮಾಡಬಹುದು? ಅವರು ತಮಗೆ ತಾವೇ ನಿಶ್ಚಯವಾಗಿ ಏನೂ ಮಾಡಲು ಸಾಧ್ಯವಿಲ್ಲ ವೆಂದು ನಾವು ಉತ್ತರಿಸುತ್ತೇವೆ. ಕಾಯಿಲೆಗಳಿಂದ, ನೋವು ಮತ್ತು ಮರಣದಿಂದ ಹೊರಬರಲು ಆರು ಸಾವಿರ ವರ್ಷಗಳವರೆಗೆ ಹೆಣಗಿರುವುದೇ ಇಂತಹ ನಿರೀಕ್ಷೆಗೆ ಆಧಾರವಿಲ್ಲವೆಂದು ಪ್ರಶ್ನಾತೀತವಾಗಿ ರುಜುವಾತು ಪಡಿಸಿದೆ. ನಿರೀಕ್ಷೆಯನ್ನಿಡುವವರು ಅದನ್ನು ನಮ್ಮ ರಕ್ಷಣೆಯ ದೇವರ ಕಡೆಗೆ ನೋಡಿಕೊಂಡು ಇಡಬೇಕು. ಆತನು ಒಂದು ವಿಮೋಚನೆಯನ್ನು ಸೂಚಿಸಿದ್ದಾನೆ ಮತ್ತು ದೇವರು ತನ್ನ ಬಹುಕಾಲದ ಯೋಜನೆಯನ್ನು ಹಂತ ಹಂತವಾಗಿ ನಿರ್ವಹಿಸುತ್ತಿದ್ದಾನೆಂದು ಸತ್ಯವೇದವು ನಮಗೆ ತಿಳಿಯಪಡಿಸುತ್ತದೆ. ಮೊದಲನೆಯ ಹಂತವು ಬಿಡುಗಡೆ, ನಮ್ಮ ವಿರುದ್ಧವಿದ್ದ ದಂಡನೆಯನ್ನು ಪಾವತಿಸುವುದು ಮರಣದಂಡನೆ. ಇದನ್ನು ನಮ್ಮ ಕರ್ತನಾದ ಯೇಸುವು ತೆತ್ತಿದ್ದಾನೆ "ನಮ್ಮನ್ನು ದೇವರ ಬಳಿಗೆ ಸೇರಿಸುವುದಕ್ಕಾಗಿ ಆತನು ನೀತಿವಂತನಾಗಿದ್ದರೂ ಅನೀತಿವಂತರಿಗೋಸ್ಕರ ಪ್ರಾಣಕೊಟ್ಟನು" ನಮ್ಮನ್ನು ದೇವರ ಬಳಿ ಸೇರಿಸುವುದಕ್ಕಾಗಿ (1ಪೇತ್ರ 3:18). ಕೀರ್ತನೆಗಾರನು ಹೇಳುವಂತೆ " ಯಾರಾದರೂ ತನ್ನ ಸಹೋದರನು ಸಮಾಧಿಯಲ್ಲಿ ಸೇರದೆ ಶಾಶ್ವತವಾಗಿ ಬದುಕಿರುವುದಕ್ಕಾಗಿ ದೇವರಿಗೆ ಈಡನ್ನು ಕೊಟ್ಟು ಅವನ ಪ್ರಾಣವನ್ನು ಬಿಡಿಸಲಾರನು" (ಕೀರ್ತ 49:7–8). ಆದರೆ ಮಾನವನ ದುಸ್ಥಿತಿಯು ದೇವರಿಗೆ ಒಂದು ಅವಕಾಶವನ್ನು ಒದಗಿಸಿತು. ಆತನು ತನ್ನ ಒಬ್ಬನೇ ಮಗನಾದ ಯೇಸುವನ್ನು ಕಳುಹಿಸಿಕೊಟ್ಟನು. ಆ ಯೇಸುವು ನಮಗಾಗಿ ತನ್ನ ಕುಂದಿಲ್ಲದ ಪ್ರಾಣವನ್ನೇ ಅರ್ಪಿಸಿದನು. ಆತನ ಈ ಪ್ರಾಣವು ಪವಿತ್ರವೂ, ಹಾನಿಕರವಲ್ಲದ್ದೂ, ಪಾಪಿಗಳಿಂದ ಪ್ರತ್ಯೇಕವಾದುದೂ ಆಗಿತ್ತು. ಸಾಯುವ ಜನಾಂಗದಿಂದಲೂ ಪ್ರತ್ಯೇಕವಾಗಿತ್ತು. ಈ ರೀತಿ ತೆತ್ತ ಪ್ರಾಣವನ್ನು ದೇವರು ಅನುರೂಪವಾದ ಕ್ರಯವನ್ನಾಗಿ ಅಂಗೀಕರಿಸಿದವರು ಮತ್ತು ಧಿಕ್ಕರಿಸಲ್ಪಟ್ಟ ತಂದೆಯಾದ ಆದಾಮನ ಪ್ರಾಣಕ್ಕೆ ಸರಿದೂಗಿಸಿದರು. ಈ ರೀತಿಯಲ್ಲಿ ಇದು ಆದಾಮನ ಮಕ್ಕಳಾದ ನಮ್ಮೆಲ್ಲರಿಗೂ ಲಭ್ಯವಾಗಿದೆ. ಯಾಕೆಂದರೆ ನಾವು ನಮ್ಮ ಸ್ವಂತ ಕಾರಣಕ್ಕಾಗಿ ಧಿಕ್ಕರಿಸಲ್ಪಟ್ಟವರಲ್ಲ. ಆದರೆ "ಒಬ್ಬನ ಅವಿಧೇಯತೆಯಿಂದ"; ಆದುದರಿಂದ ದೇವರು ನ್ಯಾಯವಂತನಾಗಿದ್ದು ಒಬ್ಬನ ವಿಧೇಯತೆ ಮತ್ತು ಈಡುಬಲಿಯಿಂದ ನಮ್ಮನ್ನು ಬಿಡುಗಡೆ ಮಾಡಿದ್ದಾನೆ. ಆತನೇ ನಮ್ಮ ಕರ್ತನಾದ ಯೇಸುಕ್ರಿಸ್ತನು. ಆತನ ಬಗ್ಗೆ "ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಕೊಟ್ಟನು" (1 ತಿಮೋ. 2:6) ಎಂದು ಬರೆದದೆ.

ಪ್ರಿಯ ಸ್ನೇಹಿತರೆ, ನಾವು ಹೀಗೆ ಹೇಳುವಾಗ ನಮ್ಮ ಕರ್ತನಾದ ಯೇಸುವು ಸಭೆಯನ್ನು ಮಾತ್ರ ವಿಮೋಚಿಸಲಿಲ್ಲ ಎಂಬುದನ್ನು ಗಮನಿಸೋಣ. ದೇವ ವಾಕ್ಯವು ಹೇಳುವಂತೆ "ಆತನು ನಮ್ಮ (ಕ್ರೈಸ್ತ ಸಭೆಯ) ಪಾಪಗಳನ್ನು ನಿವಾರಣೆಮಾಡುವ ಯಜ್ಞವಾಗಿದ್ದಾನೆ. ನಮ್ಮ ಪಾಪಗಳನ್ನು ಮಾತ್ರವಲ್ಲದೆ ಸಮಸ್ತ ಲೋಕದ ಪಾಪಗಳನ್ನು ಸಹಾ ನಿವಾರಣೆ ಮಾಡುತ್ತಾನೆ" (1 ಯೋಹಾನ 2:2) ದೇವರಿಗೆ ಸ್ತೋತ್ರವಾಗಲಿ! ಇಲ್ಲಿ ನಮಗೆ ಒಳ್ಳೆಯ ನಿರೀಕ್ಷೆಗೆ ಆಧಾರವುಂಟು. ಅಪೊಸ್ತಲನು ಸಲಹೆ ಮಾಡುವಂತೆ "ನಿರೀಕ್ಷೆಯಿಲ್ಲದ ಇತರರಂತೆ ಅಥವಾ ದೇವರ ವಾಕ್ಯದಲ್ಲಿನ ಸಕಾರಣವಾದ ಪ್ರಕಟನೆಗಳನ್ನು ಆತುಕೊಳ್ಳದ ನಿಸ್ಸಾರವಾದ ನಿರೀಕ್ಷೆಯುಳ್ಳವರಂತೆ ನಾವು ದುಃಖಿಸಬಾರದು".

ಆದರೆ, "ಯೇಸು ಕ್ರಿಸ್ತನು ಮರಣಹೊಂದಿ ಬಹಳ ಕಾಲವಾಯಿತು. ಪಾಪ ಮತ್ತು ಮರಣವು ತನ್ನ ಆಳ್ವಿಕೆಯನ್ನು ನಡಿಸಿ ಮಾನವ ಸಂತತಿಯನ್ನು ನುಂಗಿ ಬಿಡಲು ಇನ್ನೂ ಯಾಕೆ ಬಿಡಬೇಕು?" ಎಂದು ಒಬ್ಬರು ಪ್ರಶ್ನಿಸುತ್ತಾರೆ. ನಾವು ಉತ್ತರಿಸುವುದೇನೆಂದರೆ, ದೇವರು ಈ ಬಲಿಯನ್ನು ಕಳುಹಿಸಲು ನಾಲ್ಕು ಸಾವಿರ ವರ್ಷ ತಡ ಮಾಡಿದನು. ಅದರಂತೆ ಅದರ ಆಶೀರ್ವಾದಗಳು ಪ್ರಾಪ್ತವಾಗಲು ಇನ್ನೂ ತಡ ಮಾಡುತ್ತಾನೆ ಮತ್ತು ಈ ಆಶೀರ್ವಾದಗಳು ದೇವರ ಸೂಕ್ತ ಸಮಯದಲ್ಲಿ ನಿಶ್ಚಯವಾಗಿ ಪ್ರಾಪ್ತವಾಗಲಿವೆ. ಈ ರೀತಿಯಲ್ಲಿ ತಡವಾಗುವ ಉದ್ದೇಶವು ದೇವರ ವಾಕ್ಯಗಳಲ್ಲಿ ಎರಡು ಬಗೆಯಾಗಿದೆ :

ಮೊದಲನೆಯದಾಗಿ, ಸಾಕಷ್ಟು ಸಂಖ್ಯೆಯಲ್ಲಿ ಮಾನವ ಕುಟುಂಬಗಳು ಹುಟ್ಟಿಬಂದು ಲೋಕದಾದ್ಯಂತ ವ್ಯಾಪಿಸುವಂತೆ ಅವಕಾಶ ಕಲ್ಪಿಸುವುದಕ್ಕಾಗಿಯೂ ಆಗ ಅದನ್ನು ಏದೇನಿನ ಪರಿಪೂರ್ಣತೆಗೆ ತಂದು ಒಟ್ಟಾರೆ ದೇವರ ಪರದೈಸು ಪೂರ್ಣಪ್ರಮಾಣದಲ್ಲಿ ಪೂರ್ವಸ್ಥಿತಿ (ಪುನರ್‌ವಶ) ಪಡೆಯುವುದು. ಇವು ಪ್ರಸ್ತುತ ಸಮಯದಲ್ಲಿ ಪಾಪ ಮತ್ತು ಮರಣದೊಂದಿಗೆ ಕೆಲಮಟ್ಟಿನ ಅನುಭವವನ್ನು ಪಡಕೊಳ್ಳುವುದು ಮತ್ತು ಮುಖ್ಯವಾದ ಪಾಠದ ಸ್ವಲ್ಪಭಾಗವನ್ನು ಅಂದರೆ ಪಾಪದ ಅತಿರೇಕ ಮತ್ತು ಅದರ ಅನಿಷ್ಟಗಳಿಂದ ಕಲಿತುಕೊಳ್ಳುವುದು. ದೇವರ ಸಮಯವು ಬಂದಕೂಡಲೇ, ಇದು ಬಹಳ ದೂರವಿಲ್ಲವೆಂದು ನಾವು ನಂಬುತ್ತೇವೆ, ಆತನು ತನ್ನ ವಾಗ್ದಾನವನ್ನು ನೆರವೇರಿಸಿ ಈ ಲೋಕದಲ್ಲಿ ತನ್ನ ರಾಜ್ಯವನ್ನು ಪ್ರತಿಷ್ಠಾಪಿಸುವನು. ಇದು ಸೈತಾನನ್ನು ಬಂಧಿಸುತ್ತದೆ, ಪಾಪ ಮತ್ತು ಮರಣದೆಡೆಗೆ ಕಾರ್ಯವೆಸಗುತ್ತಿರುವ ಆತನ ಎಲ್ಲಾ ಶಕ್ತಿ ಮತ್ತು ಪ್ರಭಾವಗಳನ್ನು ನಿಗ್ರಹಿಸುವುದು ಹಾಗೂ ದೇವಜ್ಞಾನವು ವಿಶ್ವ ವ್ಯಾಪಿಯಾಗುವಂತೆ ಮಾಡುತ್ತದೆ. ಈ ರೀತಿಯಲ್ಲಿ ಕ್ರಿಸ್ತನು ಎಲ್ಲಾ ಮಾನವ ಕುಟುಂಬಗಳನ್ನು ಆಶೀರ್ವದಿಸುತ್ತಾನೆ ಮತ್ತು ಹಂತ ಹಂತವಾಗಿ ಅವನ್ನು ಲೋಕವು ಸೃಷ್ಟಿಗೊಂಡ ಭವ್ಯವಾದ ಸಮರ್ಪಕತೆಗೆ ಅಂದರೆ ತಂದೆಯಾದ ಆದಾಮನಲ್ಲಿ ಪ್ರತಿನಿಧಿಸಲ್ಪಟ್ಟ ದೇವರ ಸ್ವಾರೂಪ್ಯಕ್ಕೆ ಕೊಂಡೊಯ್ಯುತ್ತಾನೆ. ಈ ಆಶೀರ್ವಾದ ಕಾಲವನ್ನು ಧರ್ಮಯುಗವೆಂದು ಕರೆಯಬಹುದು. ಇದರ ಸಲುವಾಗಿಯೇ " ನಿನ್ನ ರಾಜ್ಯವು ಬರಲಿ, ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ" ಎಂದು ಪ್ರಾರ್ಥಿಸಬೇಕೆಂದು

ಕರ್ತನು ನಮಗೆ ಕಲಿಸಿಕೊಟ್ಟ ಪ್ರಾರ್ಥನೆಯಲ್ಲಿ ಹೇಳಿದ್ದಾನೆ. (ಮತ್ತಾಯ 6: 10–11) ಈ ಲೋಕದಲ್ಲಿ ನೈತಿಕತೆಯನ್ನು ದೃಢವಾದ ನೆಲೆಯಲ್ಲಿ ಸ್ಥಾಪಿಸಲು ಮತ್ತು ಮಾನವರಲ್ಲಿ ಕ್ರಿಸ್ತನಿಗೆ ವಿಧೇಯರಾಗಿ ಯಾರು ನಿತ್ಯಜೀವಕ್ಕೆ ಅರ್ಹರು ಎಂದು ಮಾನವ ಜಾತಿಯ ಲೋಕವನ್ನು ಪರೀಕ್ಷಿಸಲು ಮತ್ತು ಪೂರ್ಣ ತಿಳುವಳಿಕೆಯಿಂದ ಪಾಪವನ್ನು ಆರಿಸಿಕೊಂಡು ಎರಡನೆಯ ಮರಣಕ್ಕೆ ಅಂದರೆ ಕರ್ತನ ಪ್ರಸನ್ನತೆ ಮತ್ತು ಆತನ ಶಕ್ತಿಯ ಮಹಿಮೆಯಿಂದ ನಿತ್ಯವಾದ ನಾಶನಕ್ಕೆ ಗುರಿಯಾಗುತ್ತಾರೆಂದು ತಿಳಿಯಲು ಸಾವಿರ ವರ್ಷಗಳ ಆಶೀರ್ವಾದಭರಿತ ಮತ್ತು ಪುನರ್‌ವಶದ ಕಾಲದ ಅಗತ್ಯವಿದೆ. ಧರ್ಮಯುಗದ ಈ ಆಶೀರ್ವಾದವು ಈಗ ಲೋಕದಲ್ಲಿ ಜೀವಿಸುತ್ತಿರುವ ಸಹಸ್ರಾರು ಕೋಟಿ ಜನರಿಗೆ ಮಾತ್ರವೇ ಅನ್ವಯಿಸುವುದಲ್ಲ, ಈಗಾಗಲೇ ಮರಣದ ಮಹಾ ಸೆರೆಮನೆಯಾದ ಸಮಾಧಿ ಸೇರಿರುವ ಸುಮಾರ ಹದಿನೈದು ಮಿಲಿಯ ಜನರಿಗೂ ಅನ್ವಯವಾಗುತ್ತದೆ. "ಮರಣದ ಮತ್ತು ಪಾತಾಳದ ಬೀಗದಕೈಗಳು ನನ್ನಲಿ ಅವೆ" (ಪ್ರಕಟನೆ 1:18) ಎಂದು ಸಾರಿ ತಿಳಿಸಿದ ನಮ್ಮ ಕರ್ತನು ಇದರಿಂದ ಅವರನ್ನು ಸಹಾ ಆ ರಾಜ್ಯದ ಅವಕಾಶಗಳಿಗೆ ಕರೆಯುವವನಾಗಿದ್ದಾನೆ.

ಎರಡನೆಯದಾಗಿ, ಪ್ರಿಯ ಸ್ನೇಹಿತರೆ, ನಮ್ಮ ಕರ್ತನ ವಿಮೋಚನ ಯಜ್ಞವಾದ ನಂತರ ದೇವರು ಸರ್ವಸಾಮಾನ್ಯ ಅನುಗ್ರಹ ಮತ್ತು ಅವಕಾಶಗಳನ್ನು ತಡೆಹಿಡಿದ ಮತ್ತೊಂದು ಕಾರಣವೆಂದರೆ ಈ ಸುವಾರ್ತಾ ಯುಗದಲ್ಲಿ ಆತನು ತಾನು ವಿಮೋಚಿಸಿದ ಮಾನವ ಜೀವಿಗಳಲ್ಲಿ 'ಚಿಕ್ಕ ಹಿಂಡನ್ನು' ಆಯ್ದವರ್ಗವನ್ನಾಗಿ, ಶಿಷ್ಯರುಗಳನ್ನಾಗಿ, ಕ್ರಿಸ್ತನ ಹೆಜ್ಜೆಜಾಡಿನಲ್ಲಿ ನಡೆಯುವವರನ್ನಾಗಿ, ಸಂತರನ್ನಾಗಿ, ಪವಿತ್ರರನ್ನಾಗಿ ಒಂದುಗೂಡಿಸಬಹುದೆಂದು ಈ ರೀತಿಯಲ್ಲಿ ಆತನು ಲೌಕಿಕ ಪರಿಸ್ಥಿತಿಯ ಪುನರ್‌ವಶದಲ್ಲಿ ಈ ಲೋಕದವರು ಏದೇನಿನ ಪರಿಸ್ಥಿತಿಗೆ ಎಷ್ಟೇ ಸಮರ್ಪಕರೂ, ಭವ್ಯರೂ, ಮಹಿಮೆಯುಳ್ಳವರೂ, ಆನಂದದಾಯಕರೂ ಆಗಿದ್ದರೂ ಅವರೊಂದಿಗೆ ಭಾಗವಹಿಸದೇ ಸಹಸ್ರವರ್ಷಗಳ ಧರ್ಮ ಯುಗದಲ್ಲಿ ತನ್ನೊಂದಿಗಿರಲು ತನ್ನವರೇ ಆದ ಕೆಲವು ವಿಶಿಷ್ಟ ಜನರನ್ನು, ರಾಜ ಯಾಜಕವರ್ಗದವರನ್ನು ಪಡೆದುಕೊಳ್ಳಲು ಬಯಸುತ್ತಾನೆ. ಅವರು ಇನ್ನೂ ಹೆಚ್ಚಿನ ಕೃಪೆಯುಳ್ಳವರೂ ತನ್ನ ಕರ್ತನಂತೆ ಆತ್ಮೀಕರೂ, ದೇವರ ಸ್ವಭಾವದಲ್ಲಿ ಪಾಲುದಾರರೂ, ದೇವದೂತರುಗಳಿಗಿಂತ, ರಾಜತ್ವ, ಅಧಿಕಾರ, ಮಹತ್ವ, ಪ್ರಭುತ್ವಗಳಿಗಿಂತ ಎಷ್ಟೋ ಹೆಚ್ಚಿನವರೂ, ಆತನ ಮಹಿಮೆಯಲ್ಲಿ ಪಾಲುದಾರರೂ ಆಗಿರುತ್ತಾರೆ. ಈ ಆಮಂತ್ರಣವನ್ನು ಕೇಳಿಸಿಕೊಂಡವರೆಲ್ಲರ, ಶಿಷ್ಯತ್ವವನ್ನು ಅಂಗೀಕರಿಸಿಕೊಂಡವರ, ಕ್ರಿಸ್ತನ ಅನುಯಾಯಿಗಳ, ಆತನ ಹೆಜ್ಜೆಜಾಡಿನಲ್ಲಿ ನಡೆಯಲು ಬಯಸುವವರ ಹೃದಯಗಳಿಗೆ ಆತನೇ ಒಂದು ಮಾದರಿಯಾಗಿರುವುದು ಎಂತಹ ಅದ್ಭುತವಾದ ನಿರೀಕ್ಷೆ ಮತ್ತು ಏಷ್ಟೊಂದು ಸ್ಫೂರ್ತಿಧಾಯಕ! ಪ್ರಥಮ ಪುನರುತ್ಥಾನದಲ್ಲಿ ಸಭೆಗೆ ನೀಡಲು ಪ್ರಸ್ತಾಪಿಸಲ್ಪಟ್ಟ ಇಂತಹ ಮಹಿಮೆಯನ್ನು, ಗೌರವವನ್ನು, ನಿರ್ಲಯತ್ವವನ್ನು ಪಡೆದುಕೊಳ್ಳುವುದು ಎಂತಹ ಅನುಗ್ರಹ! ನರಳುವ ಸಮಗ್ರ ಜೀವಿಗಳಿಗೆ ದೈವಿಕ ಕೃಪಾಶೀರ್ವಾದಗಳನ್ನು ವಿತರಿಸುವಲ್ಲಿ ಕರ್ತನೊಂದಿಗೆ ಇರುವುದು, ಮತ್ತು ಆಗ ರಾಜ್ಯವೂ, ಆತ್ಮನೂ ಮತ್ತು ಮದಲಗಿತ್ತಿಯೂ ಅವರಿಗೆ– "ಬಾಯಾರಿದವನು ಬರಲಿ, ಇಷ್ಟವುಳ್ಳವನು ಜೀವಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಲಿ" ಎಂದು ಆತನೊಂದಿಗೆ ಭರವಸ ನೀಡುವುದು ಎಂತಹ ವಿಶೇಷ ಸವಲತ್ತು! (ಆಗ ಒಂದು ವಿವಾಹವವು ನಡೆಯಲಿದ್ದು, ಕುರಿಮರಿಯ ವಿವಾಹವು ಈ ಸುವಾರ್ತಾಯುಗದ ಅಂತ್ಯದಲ್ಲಿ ನೆರವೇರಲಿದೆ) (ಪ್ರಕಟನೆ 22:17). ಕಲ್ವಾರಿಯಲ್ಲಿ ವಿಮೋಚನಾಕಾರ್ಯವು ನೆರವೇರಿದ ಕೂಡಲೇ ಆಶೀರ್ವಾದಗಳನ್ನು ನೀಡಲು ತಡಮಾಡಿದಕ್ಕೆ ಇವೆರಡು ಒಳ್ಳೆಯಕಾರಣಗಳಲ್ಲವೆ? ಹೀಗೆ ತಡವಾದುದಕ್ಕೆ, ಇದರ ಪರಿಣಾಮವಾಗಿ ನಮಗೆ ದೊರೆತ ಕರೆಯ ಅವಕಾಶ ಮತ್ತು ಆಯ್ಕೆಯ ಖಚಿತತೆ ಇವುಗಳಿಗಾಗಿ ನಿಶ್ಚಯವಾಗಿಯೂ ನಾವು ಸಂತೋಷಿಸಬಹುದು.

ಪ್ರಿಯ ಸ್ನೇಹಿತರೇ, ಈ ಮಹಿಮೆಯುಳ್ಳ ನಿರೀಕ್ಷೆಯ ಸಂಕ್ಷಿಪ್ತ ಹೇಳಿಕೆ ನಮ್ಮ ಸಹೋದರನನ್ನು ಉತ್ತೇಜಿಸಿತು. ಆತನ ಸ್ಮರಣೆಯನ್ನು ನಾವು ಇಂದು ಗೌರವಿಸುತ್ತೇವೆ. ಈ ನಿರೀಕ್ಷೆಗಳು ಆತನ ಆತ್ಮಕ್ಕೆ ಲಂಗರಿನಂತಿದ್ದು ಆತನು ಕರ್ತನ ಬದಿಯಲ್ಲಿ ನಿಲ್ಲುವಂತೆ ಮತ್ತು ಆತನು ತಮ್ಮ ಒಡೆಯನನ್ನು ಅರಿಕೆಮಾಡುವವರ ಹಾಗೂ ತಮ್ಮ ತಮ್ಮ ಶಿಲುಬೆಯನ್ನು ಹೊತ್ತುಕೊಂಡು ಆತನನ್ನು ಹಿಂಬಾಲಿಸುವವರ ಗುಂಪಿನಲ್ಲಿ ತನ್ನನ್ನು ಗುರುತಿಸಿಕೊಳ್ಳುವಂತೆ ಮಾಡಿತು. ಆತನಲ್ಲಿ ಶ್ರೀಮಂತ ಗುಣಗಳಿದ್ದವು. ಇದನ್ನು ನಿಸ್ಸಂದೇಹವಾಗಿ ನಿಮ್ಮಲ್ಲಿ ಅನೇಕರು ಗುರುತಿಸಬಹುದು. ಆದರೆ ನಾವು ಆತನು ತನ್ನನ್ನು ಸಮರ್ಪಕನೆಂದು ಭಾವಿಸಿದ್ದುದರ ಮೇಲೆ ನಮ್ಮ ನಿರೀಕ್ಷೆಗಳನ್ನು ಇಡುವವರಲ್ಲ. ಆದರೆ ಕ್ರಿಸ್ತನು ಆತನ ಸಮರ್ಪಕನಾದ ವಿಮೋಚಕನು, ಆತನಲ್ಲಿ ಇವನು ನಂಬಿಕೆ ಇಟ್ಟಿದ್ದಾನೆ; ಆತನಲ್ಲಿ ನಂಬಿಕೆಯಿಟ್ಟವರು ಯಾರೇ ಆಗಲೀ ಅವಮಾನ ಹೊಂದುವುದಿಲ್ಲ ಆದರೆ ಆತನಂತೆ ವಿಜಯಶಾಲಿಗಳಾಗುವರು ಎಂಬ ನಮ್ಮ ತಿಳುವಳಿಕೆಯ ಮೇಲೆ ಆತುಕೊಂಡವರಾಗಿದ್ದೇವೆ. ನಾವೆಲ್ಲರೂ ಅನುಕರಣೆ ಮಾಡಬಹುದಾದ ಪೂಜ್ಯಗುಣವನ್ನು ನಮ್ಮ ಸಹೋದರನು ಹೊಂದಿದ್ದಾನೆಂಬುದರಲ್ಲಿ ಅನುಮಾನವಿಲ್ಲ. ಆದರೆ ನಾವು ಯಾವುದೇ ಲೌಕಿಕ ಮಾದರಿಯನ್ನು ತೆಗೆದುಕೊಳ್ಳುವ ಅಗತ್ಯವಿಲ್ಲ. ದೇವರು ತಾನೇ ತನ್ನ ಮಗನಲ್ಲಿ ಭವ್ಯವಾದ ಮಾದರಿಯನ್ನು ನಮಗೆ ತೋರಿಸಿಕೊಟ್ಟಿದ್ದಾನೆ. ಇದನ್ನು ನಾವು ನಮ್ಮ ಪ್ರಿಯ ಸಹೋದರನಂತೆ ಅನುಕರಣೆ ಮಾಡಲು ಶ್ರಮಿಸಬೇಕು. ನಾವು ಪರಸ್ಪರ ಒಬ್ಬರನ್ನೊಬ್ಬರು ನೋಡುವುದರಿಂದ ಒಳ್ಳೆಯದನ್ನು ಮಾಡದೆ ಕ್ರಿಸ್ತನನ್ನು ನೇರವಾಗಿ ಅನುಕರಣೆ ಮಾಡುವುದರಿಂದ ಮಾತ್ರವೇ ಒಳ್ಳೆಯದನ್ನು ಮಾಡಲು ಸಾಧ್ಯ. ನಾವು ಮಾನವ ಜಾತಿಯು ತನ್ನ ಪತನದ ಕಾರಣ ಹೊಂದಿರುವ ಸ್ವಾಭಾವಿಕ ದೋಷಗಳನ್ನು ನಿರ್ಲಕ್ಷಿಸುತ್ತೇವೆ ಮತ್ತು ಕರ್ತನ ಅನುಯಾಯಿಗಳಲ್ಲಿ ವ್ಯಾಪಿಸಿರುವ ಇವೆಲ್ಲವುಗಳು ಆತನ ನೀತಿಯುತ ನಾರುಮಡಿಯಲ್ಲಿ ಮರೆಯಾಗಿದ್ದು "ಅತ್ಯಂತ ಪ್ರಿಯನಲ್ಲಿ ಅವು ಅಂಗೀಕೃತವಾಗಿವೆ".

ಅಂತಿಮವಾಗಿ ಪ್ರಿಯ ಸ್ನೇಹಿತರೆ, ನಾವು ಪ್ರಸ್ತುತ ಜೀವನದ ಕ್ರೂಢೀಕರಣದಿಂದ ಪಾಠವನ್ನು ಕಲಿಯೋಣ.

ದೇವರು ಈ ಲೋಕಕ್ಕಾಗಿ ಮಹಾ ಆಶೀರ್ವಾದಗಳನ್ನು ತನ್ನಲ್ಲಿ ಶೇಖರಿಸಿಟ್ಟಿರುವಾಗ, ಆತನ ಕೃಪೆ ಮತ್ತು ರಕ್ಷಣೆಯ ಬಗ್ಗೆ ಈಗಾಗಲೇ ಕೇಳಿರುವ ನಮಗೆ ವಿಶೇಷ ಸವಲತ್ತುಗಳು, ವಿಶೇಷ ಅವಕಾಶಗಳು ಮತ್ತು ಅದಕ್ಕೆ ಅನುಗುಣವಾಗಿ ವಿಶೇಷ ಜವಾಬ್ದಾರಿಗಳೂ ನಮ್ಮ ಜ್ಞಾನದ ಸಂಬಂಧವಾಗಿ ಅವೆ. ಅಪೋಸ್ತಲನು ಹೇಳುವಂತೆ "ಆತನ ಮೇಲೆ ಈ ನಿರೀಕ್ಷೆಯನ್ನಿಟ್ಟಿರುವ ಪ್ರತಿಯೊಬ್ಬನೂ ಕ್ರಿಸ್ತನು ಶುದ್ಧ ವಾಗಿರುವಂತೆಯೇ ತನ್ನನ್ನು ಶುದ್ಧ ಮಾಡಿಕೊಳ್ಳುತ್ತಾನೆ" (1 ಯೋಹಾ. 3:3). ನಾವು ಕರ್ತನಲ್ಲಿರಲು ಬಯಸಿ ಆತನ ಮಹಿಮೆಯಲ್ಲಿ ಪಾಲುದಾರರಾಗಲು ಮತ್ತು ಇನ್ನು ಮುಂದೆ ಆತನ ಕಾರ್ಯದಲ್ಲಿ ಸಹಭಾಗಿಗಳಾಗಲು ಬಯಸಿದಲ್ಲಿ ಅದರ ಅರ್ಥ ನಮ್ಮ ಗುಣಲಕ್ಷಣಗಳು ಪರಿವರ್ತನೆಗೊಳ್ಳಬೇಕು, ನಮ್ಮ ಹೃದಯಗಳು ನವೀಕರಿಸಲ್ಪಡಬೇಕು, ನಾವು ಹೃದಯದಲ್ಲಿ ಮಾತ್ರವೇ ನೂತನಗೊಳ್ಳದೆ ಅಂದರೆ ದೇವರೆಡೆಗಿರುವ ನಮ್ಮ ಅಭಿಪ್ರಾಯದಲ್ಲಿ, ಚಿತ್ತದಲ್ಲಿ, ಉದ್ದೇಶದಲ್ಲಿ ಮಾತ್ರವಲ್ಲದೆ ಸಾಧ್ಯವಾದ ಮಟ್ಟಿಗೆ ಮಾತುಗಳಲ್ಲಿಯೂ ಮತ್ತು ಕ್ರಿಯೆಗಳಲ್ಲಿಯೂ ಸಹಾ ನೂತನಗೊಳ್ಳಬೇಕೆಂದು ನಾವು ಅರಿತಿದ್ದೇವೆ. ವಿವಿಧ ಪರಿಸ್ಥಿತಿಗಳಲ್ಲಿ ಪತನದ ಕಾರಣ ಅಸಮರ್ಪಕಗೊಂಡ ನಮ್ಮ ದೇಹಗಳನ್ನು ಈ ನೂತನ ಹೃದಯವು ನಿಯಂತ್ರಿಸಬೇಕು. ನಾವು ಕ್ರಿಸ್ತನಲ್ಲಿ ನೆಲೆಗೊಳ್ಳುವುದನ್ನು ಮತ್ತು ಆತನ ಅರ್ಹತಾ ಉಡುಪುಗಳ ಮರೆಯಲ್ಲಿರುವುದನ್ನು ಮಾತ್ರವೇ ನೆನಪಿನಲ್ಲಿಟ್ಟುಕೊಳ್ಳದೆ ನಮ್ಮ ಹೃದಯಗಳಲ್ಲಿ ಆತನ ಆತ್ಮನ ಕೃಪೆಯನ್ನು ಹೆಚ್ಚೆಚ್ಚಾಗಿ ಬೆಳೆಸಿಕೊಳ್ಳಬೇಕು. ಒಳ್ಳೆಯ ನಿರ್ಣಯಗಳು ಈ ದೆಸೆಯಲ್ಲಿ ಬಹಳಷ್ಟು ಸಹಾಯಕ. ಈ ಗಂಭೀರವಾದ ಪರಿಸ್ಥಿತಿಯಲ್ಲಿ ನಾವು ಸಂತೋಷದಾಯಕ ಅಲೋಚನೆಗಳನ್ನು ನಮ್ಮ ಮನದ ಎದುರು ಇಟ್ಟುಕೊಂಡು ನೂತನ ನಿರ್ಣಯಗಳನ್ನು ಕೈಗೊಳ್ಳಬೇಕು. ನಾವು ಇನ್ನು ಮುಂದೆ ನಮ್ಮ ಒಡೆಯನ ಹೆಜ್ಜೆಜಾಡಿನಲ್ಲಿ ನಡೆಯಲು ಹೆಚ್ಚು ಹೆಚ್ಚು ಪ್ರಯಾಸ ಪಡಬೇಕು ಮತ್ತು ಆತನ ಸತ್ಯದ ಮತ್ತು ಕೃಪೆಯ ಪ್ರಕಾಶವು ನಮ್ಮ ಜೀವಿತದ ಮೂಲಕ ಬೆಳಗಬೇಕು ಆದುದರಿಂದ, ಈ ಲೋಕದಲ್ಲಿ ಜೀವಿಸುವ ಪ್ರತಿಯೊಂದು ದಿನವೂ ಉತ್ತಮವಾಗಿರುವಂತೆ, ಸಂತೋಷವಾಗಿರುವಂತೆ ನಾವು ಪ್ರಯಾಸಪಡಬೇಕು ಮತ್ತು ಸಾಧ್ಯವಾದ ಮಟ್ಟಿಗೆ ನಾವು ನಮ್ಮ ಶರೀರಗಳಲ್ಲಿ ಮತ್ತು ಆತ್ಮದಲ್ಲಿ ನಮ್ಮ ದೇವರನ್ನು ಮಹಿಮೆಪಡಿಸಬೇಕು. ಯಾಕೆಂದರೆ ಅವುಗಳು ಆತನವೇ. ಆಮೆನ್.

(4) ಪ್ರಸಂಗದ ನಂತರ ಪ್ರಾರ್ಥನೆಯನ್ನು ಮಾಡಬಹುದು. ಅದನ್ನು ತಾನೇ ಅಥವಾ ಸತ್ಯದಲ್ಲಿ ಸಮರ್ಥನಾದ ಬೇರೆ ಯಾವ ಸತ್ಯಸಹೋದರನಾಗಲೀ ಮಾಡಬಹುದು. ಪ್ರಸಂಗದ ನಂತರ ಪ್ರಾರ್ಥನೆಗೆ ಹೊರಗಣ ದೇವರ ಸೇವಕರನ್ನು ಎಂದಿಗೂ ಆಹ್ವಾನಿಸಬಾರದು. ಆತನು ತಾಳ್ಮೆಯಿಂದ ಮನುಷ್ಯರಿಗೆ ಪ್ರಾರ್ಥಿಸುತ್ತಾನೆಯೇ ಹೊರತು ದೇವರಿಗಲ್ಲ ಮತ್ತು ಈ ರೀತಿಯಲ್ಲಿ ಆತನಿಂದ ಇದುವರೆವಿಗೂ ಮಾಡಿರುವ ಪ್ರವಚನವನ್ನು ಕೇಳಿದ ಜನರ ಮನಸ್ಸಿನ ಮೇಲೆ ಉಂಟಾಗಿರುವ ಒಳ್ಳೆಯ ಭಾವನೆಯನ್ನು, ಪ್ರತಿಕ್ರಿಯೆಯನ್ನು ಕೆಡಿಸುತ್ತದೆ ಎಂಬುದು ನಿಶ್ಚಿತ. ಪ್ರಾರ್ಥನೆಯಲ್ಲಿ ಕ್ರಿಸ್ತನ ಮೂಲಕ ತೋರಿಸಿದ ಕೃಪೆಗಾಗಿ ಕರ್ತನನ್ನು ವಿಶೇಷವಾಗಿ ಸ್ತುತಿಸಬೇಕು ಮತ್ತು ನೆರೆದವರಿಗೆಲ್ಲರಿಗೆ ನಿರ್ದಿಷ್ಟವಾಗಿ ವಿಯೋಗ ದುಃಖಕ್ಕೊಳಗಾದ ಕುಟುಂಬದವರೆಲ್ಲರಿಗಾಗಿ ಆತನ ಆಶೀರ್ವಾದಗಳನ್ನು ಕೋರಿಕೊಳ್ಳಬೇಕು.

(5) ಈ ಆರಾಧನೆಯನ್ನು ಮೇಲೆ ತಿಳಿಸಿದ ಯಾವುದಾದರೂ ಸಂಗೀತದ ಒಂದು ಅಥವಾ ಎರಡು ಚರಣಗಳನ್ನು ಹಾಡುಹಾಡುವುದರ ಮೂಲಕ ಸಮರ್ಪಕವಾದ ರೀತಿಯಲ್ಲಿ ಮುಕ್ತಾಯಗೊಳಿಸಬಹುದು..

(6) ಸಮಾಧಿಯಲ್ಲಿ ಶವಪೆಟ್ಟಿಗೆಯನ್ನು ಕೆಳಗಿಳಿಸಿದ ನಂತರ ಒಂದೆರಡು ಮಾತುಗಳಿಂದ ಸಂಕ್ಷಿಪ್ತವಾದ ಪ್ರಾರ್ಥನೆಯನ್ನು ಮುಗಿಸಬೇಕೆಂದು ನಾವು ಪ್ರತಿಪಾದಿಸುತ್ತೇವೆ.

**ಪ್ರಸಂಗದಲ್ಲಿ ವಿವಿಧ ಪರಿಸ್ಥಿತಿಗೆ ತಕ್ಕಂತೆ ಮಾಡಿಕೊಳ್ಳಬಹುದಾದ ವಿವಿಧ ಬದಲಾವಣೆಗಳು:–**

## Variations in the Discourse, to suit varying Circumstances:-

ಮೇಲ್ಕಂಡ ಪ್ರವಚನವು ಸಹೋದರಿಗೂ ಅಷ್ಟೇ ಅನ್ವಯವಾಗುತ್ತದೆ; "ಸಹೋದರ' ಎಂಬುದರ ಬದಲಾಗಿ "ಸಹೋದರಿ' ಎಂಬ ಪದವನ್ನು ಬಳಸಬಹುದು, ಆದರೆ ಪ್ರಾಪಂಚಿಕ ವ್ಯಕ್ತಿಯಾಗಿದ್ದ ಪಕ್ಷದಲ್ಲಿ ಅದಕ್ಕೆ ತಕ್ಕಂತೆ ಬದಲಾವಣೆ ಮಾಡಿ ಪ್ರವಚನ ಮಾಡತಕ್ಕದ್ದು ಅಥವಾ ಕರ್ತನಿಗೆ ಸಂಪೂರ್ಣವಾಗಿ ಪ್ರತಿಷ್ಠೆಪಡಿಸಿಕೊಳ್ಳದೇ ಇರುವವರಿಗೆ ಬಹಳಷ್ಟು ಬದಲಾವಣೆಗಳನ್ನು ಮಾಡಿಕೊಳ್ಳುವ ಅಗತ್ಯವಿದೆ. ಅವನ್ನು ಪ್ರಸಂಗ ನೀಡಲು ಅರ್ಹನಾದ ವ್ಯಕ್ತಿಗೆ ಸ್ವತಃ ಸಲಹೆ ನೀಡಬೇಕಾಗುತ್ತದೆ.

ವಿಶ್ವಾಸಿ ಅಥವಾ ಅವಿಶ್ವಾಸಿ ತಂದೆತಾಯಿಗಳ ಮಗುವಾಗಿದ್ದಲ್ಲಿ ಪ್ರಸಂಗವನ್ನು ಅದಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳಬೇಕಾಗುತ್ತದೆ. ಮರಣ ಹೊಂದಿದ ಮಗುವನ್ನು "ನಮ್ಮ ಎಳೆಯ ಸ್ನೇಹಿತನು/ಳು ಪ್ರಾಯಕ್ಕೆ ಮೊದಲೇ ಮೊಳಿಕೆಯಲ್ಲಿಯೇ ಮರಣವೆಂಬ ಕೊಯ್ಲು ಗತ್ತಿಯಿಂದ ಹತನಾಗಿದ್ದಾನೆ/ಳೆ" ಎಂದು ಹೇಳಬಹುದು ಇನ್ನೂ ಎಳೆಯ ಕಂದವಾಗಿದ್ದಲ್ಲಿ "ನಿನ್ನ ಧ್ವನಿಯು ಗೋಳಾಡದಿರಲಿ, ನಿನ್ನ ಕಣ್ಣು ನೀರು ಸುರಿಸದಿರಲಿ; ನಿನ್ನ ಪ್ರಯಾಸವು ಸಾರ್ಥಕವಾಗುವುದು; ಇದು ಕರ್ತನ ನುಡಿ; ನಿನ್ನ ಮಕ್ಕಳು ಶತ್ರುವಿನ ದೇಶದಿಂದ ಹಿಂತಿರುಗುವರು" (ಯೆರೆಮೀಯ 31 :15–17) ಎಂಬ ಮಾತುಗಳನ್ನು ಬಳಸಬಹುದು. ಅಂತಹ ಪ್ರಕರಣಗಳಲ್ಲಿ, ಎಳೆಯ ಪ್ರಾಯದ ಮಕ್ಕಳು ಮರಣಕರವಾದ ಪಾಪವನ್ನೇ ಮಾಡುವುದಿಲ್ಲವೆಂದು ಯಾರೂ ವಾದಿಸದಂತೆ ಒತ್ತಿಹೇಳುವುದು ಸೂಕ್ತವಾಗುತ್ತದೆ. ಅದರಂತೆ ಸರ್ವಸಾಧಾರಣವಾದ ಅವಿಧೇಯತ್ವದಿಂದ ಪಾಪ ಮತ್ತು ಅದರ ಫಲವಾದ ಮರಣವು ಈ ಲೋಕದೊಳಕ್ಕೆ ಪ್ರವೇಶಿಸಿದ್ದಲ್ಲ, "ಒಬ್ಬನ ಅವಿಧೇಯತ್ವದಿಂದ ಪಾಪವೂ, ಪಾಪದಿಂದ ಮರಣವೂ ಲೋಕದೊಳಗೆ ಪ್ರವೇಶಿಸಿತು" ಪಾಪವು ಕೊಡುವ ಸಂಬಳ ಮರಣ (ರೋಮಾ. 5:12) ಎಂಬ ಸತ್ಯವೇದದ ಹೇಳಿಕೆಯಂತಾಗುತ್ತದೆ

## ದಶಮಾಂಶ, ಸಭಾವಂತಿಗೆ ಮುಂತಾದವುಗಳು
## Tithes, Collections, Etc.

ನಮಗೆ ತಿಳಿದಂತೆ ಕರ್ತನ ಚಿಕ್ಕ ಕೂಟದಲ್ಲಿ ಯಾರೂ "ಈ ರೀತಿಯಲ್ಲಿ" (ಅ.ಕೃ. 22:24) ಸಾರ್ವಜನಿಕವಾಗಿ ಯಾವ ವಂತಿಗೆಯನ್ನೂ ಶೇಖರಿಸಿದ್ದಿಲ್ಲ. ನಾವು ಮೊದಲಿನಿಂದಲೂ ಸಾರ್ವಜನಿಕ ವಂತಿಗೆಯನ್ನು ದೂರವಿರಿಸಲು ಪ್ರತಿಪಾದಿಸುತ್ತಲೇ ಬಂದಿರುವುದು ಅದರಲ್ಲಿ ಯಾವುದೇ ಪಾಪಮಯವಾದ ಪ್ರಕ್ರಿಯೆಯುಂಟೆಂಬ ಅಥವಾ ದೇವರ ವಾಕ್ಯದಲ್ಲಿ ಇದನ್ನು ಖಂಡಿಸುವುದೇನಾದರೂ ಇದೆ ಎಂಬ ಕಾರಣಗಳಿಂದಲ್ಲ. ಆದರೆ ಎಲ್ಲಾ ಕ್ರೈಸ್ತ ಪಂಥೀಯರಲ್ಲಿ ಹಣದ ಪ್ರಶ್ನೆಗೆ ಹೆಚ್ಚಿನ ಮಹತ್ವವನ್ನು ನೀಡಲಾಗಿದೆ ಮತ್ತು ನಮ್ಮ ಅಭಿಪ್ರಾಯದಲ್ಲಿ ಇದರಿಂದ ದೂರಿವಿರುವುದು ಕರ್ತನ ಮಹಿಮೆಗಾಗಿಯೇ ಎಂಬ ಕಾರಣದಿಂದ. ಜೀವಮಾನವೆಲ್ಲಾ ಹಣಕ್ಕಾಗಿ ಹಾತೊರೆಯುವವರು ಬೋಧನೆ ಹಾಗೂ ಉಪದೇಶಗಳನ್ನು ಆದಾಯಕ್ಕಾಗಿ, ಮುಖ್ಯವಾಗಿ ಆದಾಯಕ್ಕಾಗಿ ಮಾತ್ರವಲ್ಲದೆ ಕನಿಷ್ಟ ಗಣನೀಯವಾದ ಆದಾಯಕ್ಕಾಗಿಯಾದರೂ ಮಾಡಲಾಗುತ್ತದೆಂಬ ಲೆಕ್ಕದಲ್ಲಿ ನಂಬುತ್ತಾರೆ.

ದೇವರ ವಾಕ್ಯವು ನಮಗೆ ತಿಳಿಸುವಂತೆ ಕರ್ತನ ನಂಬಿಗಸ್ತರಲ್ಲಿ ಹೆಚ್ಚಾದವರು ಈ ಲೋಕದ ಬಡವರೇ ಆಗಿರುತ್ತಾರೆ. ಹೆಚ್ಚಿನವರು ಶ್ರೀಮಂತರಲ್ಲ, ದೊಡ್ಡವರಲ್ಲ, ಕುಲೀನರಲ್ಲ ಎಂದು ನಮ್ಮ ಅನುಭವವು ಸಹಾ ಅದನ್ನೇ ದೃಢಪಡಿಸುತ್ತದೆ. ಅವರಲ್ಲಿ ಹೆಚ್ಚಿನವರು ಈ ಲೋಕದ ಬಡವರು ಆದರೆ ನಂಬಿಕೆಯಲ್ಲಿ ಮಾತ್ರ ಶ್ರೀಮಂತರು. ಇದರಲ್ಲಿ ಕೆಲವರು, ಪ್ರಸ್ತುತ ಸತ್ಯವು ಪ್ರತಿಪಾದಿಸಲ್ಪಡುತ್ತಿರುವ ಸಭೆಗಳಲ್ಲಿ ಭಾಗವಹಿಸುತ್ತಿದ್ದು, ಹಣ ದೋಚುವ ಲೌಕಿಕರಿಂದ ಬಿಡುಗಡೆ ಹೊಂದಿದ್ದೇವೆಂಬ ಭಾವನೆಯನ್ನು ತಾಳಿದ್ದಾರೆ ಎಂಬುದು ನಮಗೆ ಖಚಿತವಾಗಿದೆ. ಕೆಲವು ಪ್ರಕರಣಗಳಲ್ಲಿ ಈ ಲಕ್ಷಣಗಳು ಅವರಿಗೂ ಸತ್ಯವನ್ನು ಒಪ್ಪುವಂತೆ ಮಾಡಿ ಪ್ರಸ್ತುತವಾದ ಸತ್ಯ ಸಂಗತಿಗಳಿಗೆ ಯಾರ ಕಣ್ಣುಗಳು ತೆರೆಯಲ್ಪಟ್ಟಿದೆಯೋ ಅಂಥವರು ಸತ್ಯದ ಸೇವೆಯಲ್ಲಿ ಉತ್ಸಾಹ ಮತ್ತು ಕಾರ್ಯಶಕ್ತಿಯನ್ನು ಹೊಂದಿಕೊಳ್ಳುತ್ತಾರೆ ಮತ್ತು ಅವರ ಪ್ರಕಾಶವು ತಂದೆ ಮತ್ತು ಕುಮಾರನ ಮಹಿಮೆಗಾಗಿ ಬೆಳಗಲಿ ಎಂಬ ಆಕಾಂಕ್ಷೆಯನ್ನು ಹೊಂದಿರುತ್ತಾರೆ. ಬೆಚ್ಚಗೂ ಅಲ್ಲದ, ತಣ್ಣಗೂ ಅಲ್ಲದ ಹೆಚ್ಚಿನ ಕ್ರೈಸ್ತರು– "ನಿಮ್ಮ ಪ್ರೇರಣೆ ಏನು? ಉದ್ದೇಶವೇನು? ಅದು ಯಾವ ರೀತಿಯಲ್ಲಿ ನಿಮಗೆ ಹಣವನ್ನು ಒದಗಿಸುತ್ತದೆ? ನೀವು ಯಾಕೆ ನಮಗೆ ಆಸಕ್ತಿ ಹುಟ್ಟಿಸುತ್ತಿದ್ದೀರಿ? ನೀವು ಪುಸ್ತಕಗಳನ್ನು ಎರವಲು ನೀಡುವುದರಿಂದ ಅಥವಾ ನಿಮ್ಮ ಸಮಯವನ್ನು ನಮ್ಮೊಂದಿಗೆ ಕಳೆಯುವುದರಿಂದ, ಸತ್ಯವೇದದ ವಸ್ತುವಿಷಯಗಳ ಬಗ್ಗೆ ನನ್ನ ಗಮನವನ್ನು ಸೆಳೆಯುವುದರಿಂದ ನಿಮಗಾಗುವ ಪ್ರಯೋಜನಗಳೇನು? ಎಂಬಿತ್ಯಾದಿ ಅನೇಕ ರೀತಿಯಲ್ಲಿ ವಿಚಾರಿಸುತ್ತಾರೆ. ಇಂಥವರು ನಮ್ಮ ಕೂಟಗಳಿಗೆ ಬಂದು ಸಾಮಾನ್ಯವಾದ ಕಾಣಿಕೆ ಡಬ್ಬಿಗಳೂ ಸಹಾ ಇಲ್ಲದಿರುವುದನ್ನು ಕಂಡು ಇವೆಲ್ಲವೂ ಕರ್ತನ ಪ್ರೀತಿ, ಅತನ ಸತ್ಯದ ಮತ್ತು ಹಿಂಡಿನ ಮೇಲಣ ಪ್ರೀತಿಯ ಕಾರಣ ಮತ್ತು ಸತ್ಯವನ್ನು ಕೈಲಾದ ಮಟ್ಟಿಗೆ ಅವರಿಗೆ ಎಟಕುವಂತೆ ತರುವ ಪ್ರಯತ್ನವೇ ಎಂದು ಮನದಟ್ಟು ಮಾಡಿಕೊಳ್ಳಬಹುದು. ಸ್ವಲ್ಪ ಮಟ್ಟಿಗೆ ಸತ್ಯದ ವಿರುದ್ಧ ದುರಭಿಪ್ರಾಯದ ಒಲವು ತೋರಿದರೂ ಈ ನಿಷ್ಠೆ ಮತ್ತು ದೇವರಂಥಹ ಔದಾರ್ಯದ ಮನಸ್ಸು ಮತ್ತು ಉದಾರತೆಗಳು ಅವರನ್ನು ಕರ್ತನ ಆತ್ಮೀಕ ಪ್ರೀತಿಯ ಪ್ರವೃತ್ತಿಗೆ ಒಪ್ಪಿಸಿಕೊಡುತ್ತವೆ.

ಈ ಸಿದ್ಧಾಂತವನ್ನು ಪ್ರತಿಪಾದಿಸುತ್ತಿರುವಾಗ, ಮತ್ತು ಅದನ್ನು ಹೃತ್ಪೂರ್ವಕವಾಗಿ ಎಲ್ಲೆಡೆಯಿರುವ ದೇವಜನರಿಗೆ ಹಂಚುವಾಗ, ಬೇರೆಡೆಯಲ್ಲಿ, ಯಾರಾದರೂ ಕರ್ತನನ್ನು ಅಂಗೀಕರಿಸಿದರೆ, ಆತನು ತನ್ನನ್ನು ಪ್ರತಿಷ್ಠೆಪಡಿಸಿಕೊಳ್ಳುವಾಗ ಆತನು ಎಷ್ಟೇ ಅಧಮನಾಗಿರಲಿ, ಸ್ವಾರ್ಥಿಯಾಗಿರಲಿ, ಜಿಪುಣನಾಗಿರಲಿ ಅಂಥವನು ತನ್ನ ಸ್ವಾರ್ಥ ಪ್ರವೃತ್ತಿಯನ್ನು ಸ್ವಲ್ಪ ಪ್ರಮಾಣದಲ್ಲಿಯಾದರೂ ಜಯಿಸದೆ "ಪರಲೋಕದಲ್ಲಿ ಹೆಸರು ಬರೆಸಿಕೊಂಡಿರುವ ಚೊಚ್ಚಲು ಮಕ್ಕಳ ಸಭೆ" ಯೊಡನೆ ಮತ್ತು ಸಭಾ ಶಿರಸ್ಸಾಗಿರುವ ಕರ್ತನೊಡನೆ ತನ್ನನ್ನು ಗುರುತಿಸಿಕೊಳ್ಳಲಾರನು ಎಂಬುದನ್ನು ಅವರ ಗಮನಕ್ಕೆ ತರುವುದು ನಮ್ಮ ಕರ್ತವ್ಯವಾಗಿದೆ. ನಮ್ಮ ಪರಲೋಕದ ತಂದೆಯ ಮತ್ತು ಕರ್ತನಾದ ಯೇಸುವಿನ ಸ್ಫೂರ್ತಿಗೆ ಸ್ವಾರ್ಥತೆ ಮತ್ತು ಜಿಪುಣತನ ಮುಂತಾದವುಗಳು ಪರಕೀಯವಾಗಿವೆ ಎಂಬುದು ನಮಗೆ ಚೆನ್ನಾಗಿ ತಿಳಿದಿದೆ. ಆದುದರಿಂದ, ಆ ತಂದೆಯ ಮಕ್ಕಳೆಂದು ಅಂತಿಮವಾಗಿ ಗುರುತಿಸಲ್ಪಡುವ ಎಲ್ಲರಿಗೂ ಇದು ಪರಕೀಯವಾಗಿರತಕ್ಕದ್ದು. ಎಲ್ಲರೂ ಕುಟುಂಬದ ಸಾಮ್ಯತೆಯನ್ನು ಹೊಂದಿರತಕ್ಕದ್ದು. ಅದರ ವಿಶೇಷ ಗುಣಲಕ್ಷಣವು ಪ್ರೀತಿ–ಔದಾರ್ಯ. ವಂಶಪಾರಂಪರ್ಯವಾಗಿ ಅಥವಾ ನತದೃಷ್ಟ ಸನ್ನಿವೇಶಗಳ ಮತ್ತು ವಿದ್ಯಾಭ್ಯಾಸದ ಕಾರಣ ನೀಚ ಬುದ್ಧಿಯ ನೂತನ ಸೃಷ್ಟಿಯ ಉಮೇದುವಾರ ಸದಸ್ಯರನ್ನಾಗಿ ಅಂಗೀಕರಿಸಿಕೊಂಡವರ ಮರ್ತ್ಯದೇಹದಲ್ಲಿ ಹೆಚ್ಚಾಗಿ ವಿಕಾಸಗೊಂಡಿದ್ದರೆ ಅವರು ಸಧ್ಯದಲ್ಲಿಯೇ ಈ ದೆಸೆಯಲ್ಲಿ ಒಂದುರೀತಿಯ ಸಂಗ್ರಾಮವನ್ನೇ ಮಾಡಬೇಕಾಗುತ್ತದೆ.. ಅಪೋಸ್ತಲನು ತಿಳಿಸುವಂತೆ, ಶಾರೀರಿಕ ಮನಸ್ಸು ಆತ್ಮದ ಮನಸ್ಸಿನೊಡನೆ ಹೋರಾಡುತ್ತದೆ. ನೂತನ ಸೃಷ್ಟಿಗಳು ಮತ್ತು ನೂತನ ಸೃಷ್ಟಿಯ ಮನಸ್ಸುಳ್ಳವರು ಅಂತಿಮವಾಗಿ ವಿಜಯಶಾಲಿಗಳ ಸ್ಥಾನವನ್ನು ಬಯಸುವಲ್ಲಿ ಅವರು ಜಯವನ್ನು ಹೊಂದಲೇಬೇಕಾಗುತ್ತದೆ, ಸ್ವಾರ್ಥತೆ ಮತ್ತು ಕೀಳುತನಗಳನ್ನು ಗೆಲ್ಲಬೇಕಾಗುತ್ತದೆ ಮನಸ್ಸು ಮತ್ತು ಕಾರ್ಯದಲ್ಲಿ ದೈವತ್ವ, ಉದಾರತೆ ಮತ್ತು ಔದಾರ್ಯ ಇವುಗಳನ್ನು ಪರಿಶ್ರಮದಿಂದ ಬೆಳೆಸಿಕೊಳ್ಳಬೇಕಾಗುತ್ತದೆ. ಅಂಥವರು ತಮ್ಮ ಮರಣದ ದಿನದವರೆಗೂ ತಮ್ಮ ದೇಹದೊಡನೆ ಹೋರಾಡಲೇ ಬೇಕಾಗುತ್ತದೆ. ಆದರೆ ಮನೋವೃತ್ತಿಯ ಬಗ್ಗೆ, ನೂತನ ಚಿತ್ತದ ಬಗ್ಗೆ ಯಾವ ಶಂಕೆಯೂ ಇರಬಾರದು. ಅದನ್ನು ಉತ್ತಮವಾಗಿ ತಿಳಿದವರು ನಿಶ್ಚಯವಾಗಿ ದೈಹಿಕ ಮತ್ತು ಸ್ವಾರ್ಥಮನಸ್ಸಿನ ಮೇಲೆ ಅವರ ಜಯವನ್ನು ಕಂಡುಕೊಳ್ಳುವರು.

ಆದುದರಿಂದ ಹಣಸಂಗ್ರಹವನ್ನು ಮತ್ತು ಸಭೆಯ ಎಲ್ಲಾ ಕೂಟಗಳಲ್ಲಿ ಆರ್ಥಿಕ ಪ್ರಶ್ನೆಯನ್ನು ತಡೆಗಟ್ಟುವ ಬಗ್ಗೆ ನಮ್ಮ ಆಲೋಚನೆಯು ನೀಡುವುದನ್ನು ನಿರುತ್ಸಾಹಗೊಳಿಸಲು ಅಲ್ಲ. ನಮ್ಮ ಗಮನವು ಹರಿಯುವಂತೆ, ಕರ್ತನಿಗೆ ಧಾರಾಳವಾಗಿ ಹೃತ್ಪೂರ್ವಕವಾಗಿ ಮತ್ತು ಸಂತೋಷದಿಂದ ನೀಡುವವರು

ಆತ್ಮೀಕ ಸಂಗತಿಗಳಲ್ಲಿ ಆತನಿಂದ ಹೆಚ್ಚಿನ ಆಶೀರ್ವಾದಗಳನ್ನು ಪಡಕೊಳ್ಳುವರು. ನಾವು "ಸಂತೋಷವಾಗಿ ಕೊಡುವವನ ಮೇಲೆ ದೇವರಿಗೆ ಪ್ರೀತಿಯುಂಟು" (2 ಕೊರಿಂಥ 9:7) ಎಂಬ ಕರ್ತನ ಮಾತುಗಳನ್ನು ನಾವಿಲ್ಲಿ ಹಣ ನೀಡುವಿಕೆಗಷ್ಟೇ ಮಿತಿಗೊಳಿಸುತ್ತಿಲ್ಲ ಎಂಬುದನ್ನು ಗಮನಿಸಬೇಕು. ಆದರೆ ಅದರಲ್ಲಿ ದೇವಜನರು ದೇವರ ಬಲಿಪೀಠದಲ್ಲಿ ಅರ್ಪಿಸುವ ಎಲ್ಲಾ ಕಾಣಿಕೆಗಳನ್ನೂ ಮತ್ತು ತ್ಯಾಗವನ್ನೂ ಸೇರಿಸುತ್ತಿದ್ದೇವೆ ಮತ್ತು ನಮ್ಮ ಪ್ರೀತಿಯ ವಿಮೋಚಕನ ಅರ್ಹತೆಗಳ ಮೂಲಕ ಅವುಗಳನ್ನು ಅನುಮೋದಿಸಿ ತನಗೆ ಪ್ರಿಯವಾಗಿದೆಯೆಂದು ದೇವರು ನಮಗೆ ತಿಳಿಸುತ್ತಾನೆ. ನಿಜವಾಗಿಯೂ ಯಾವಾಗಲಾದರೂ ಮತ್ತು ಎಲ್ಲಿಯಾದರೂ ಈ ಪ್ರಶ್ನೆಯು ಉಂಟಾದಾಗ ಅಂದರೆ ನಾನು ಅಂತಹ ವ್ಯವಹಾರಿಕ ಕ್ರಮವನ್ನು ಉತ್ತಮವಾಗಿ ಮುಂದುವರಿಸಬೇಕೋ ಮತ್ತು ಆ ರೀತಿಯಲ್ಲಿ ನನ್ನ ಕೈ ಮತ್ತು ಬುದ್ಧಿಯ ಉತ್ಪನ್ನವನ್ನು ಸತ್ಯದ ಹರಡುವಿಕೆಗೆ ಹೆಚ್ಚಾಗಿ ನೀಡಬೇಕೋ? ಅಥವಾ ಸತ್ಯದ ಆಸಕ್ತಿಯಲ್ಲಿ ಹೆಚ್ಚು ಸಮಯ ಮತ್ತು ವ್ಯಕ್ತಿತ್ವವನ್ನು ವಿನಿಯೋಗಿಸುವಂತೆ ಮತ್ತು ಸ್ನೇಹಿತರ ಹಾಗೂ ನೆರೆಯವರ ಮಧ್ಯೆ ಪ್ರಸಿದ್ಧಿ ಹೊಂದಿಕೊಳ್ಳುವಂತೆ ಮಾಡುವ ಬೇರೊಂದು ಕ್ರಮವನ್ನು ಅನುಸರಿಸುವುದರ ಮೂಲಕ ನಾನು ಕಡಿಮೆ ಸಾಮರ್ಥ್ಯದಿಂದ ಮತ್ತು ಈ ದೆಸೆಯಲ್ಲಿ ಕಡಿಮೆ ಸೇವೆಯಲ್ಲಿ ತೃಪ್ತಿಗೊಳ್ಳಬೇಕೋ? ಸಾರ್ವತ್ರಿಕವಾದ ನಮ್ಮ ಉತ್ತರವೇನೆಂದರೆ, ಸತ್ಯದ ಸೇವೆಗೆ ನೀಡುವ ನಮ್ಮ ಸಮಯ ಮತ್ತು ಪ್ರಭಾವವು ದೇವರ ದೃಷ್ಟಿಯಲ್ಲಿ ಹಣದ ಕಾಣಿಕೆಗಳಿಗಿಂಥಾ ಮಿಗಿಲಾದುದು.

ಆದುದರಿಂದ ತಮ್ಮಲ್ಲಿ ಸತ್ಯವನ್ನು ಪ್ರಸ್ತುತಪಡಿಸುವ ಮತ್ತು ನ್ಯಾಯಯುತವಾದ ಹಣ ಮಾಡುವ ಮೇಧಾಶಕ್ತಿ ಇದೆಯೆಂದು ಯಾರಾದರೂ ತಿಳಿದಿದ್ದರೆ ಅವರು ಹಣ ಪಡೆಯುವ ತಮ್ಮ ಸಾಮರ್ಥ್ಯವನ್ನು ಸ್ವಲ್ಪ ಪ್ರಮಾಣದಲ್ಲಿ ಮಾತ್ರವೇ ಪ್ರಯೋಗಿಸಲಿ ಎಂಬುದು ನಮ್ಮ ಬುದ್ಧಿಮಾತು. ಹೀಗೆ ಮಾಡಿದಲ್ಲಿ ಆತನು ತನ್ನ ಹೆಚ್ಚಿನ ಸಮಯ ಮತ್ತು ಚೈತನ್ಯವನ್ನು ಸತ್ಯದ ಸೇವೆಗೆ ವಿನಿಯೋಗಿಸಬಹುದು. ಇದು ಯಥೋಚಿತವಾಗಿ ಮುದ್ರಣದ ಹಾಗೂ ಸತ್ಯವೇದ ಹಾಗೂ ಅದರ ಸಂಬಂಧಿತ ಸಾಹಿತ್ಯ ಪ್ರತಿಗಳ ಹಂಚೋಣ ಮುಂತಾದವುಗಳಿಗೂ ಅನ್ವಯವಾಗುತ್ತದೆ.

"ತೆಗೆದುಕೊಳ್ಳುವುಕ್ಕಿಂತ ಕೊಡುವುದೇ ಹೆಚ್ಚಿನ ಭಾಗ್ಯ" (ಅ.ಕೃ. 20:35) ಎಂಬುದು ಒಂದು ಸ್ವಪ್ರತ್ಯಕ್ಷ ಪ್ರಮಾಣ ಸೂತ್ರ. ಇದನ್ನು ದೇವರ ಸಾಮ್ಯತೆಯಲ್ಲಿ ಉತ್ತಮವಾಗಿ ಬೆಳೆದ ದೇವಜನರೆಲ್ಲರೂ ಇದನ್ನು ಬಹಳವಾಗಿ ಮೆಚ್ಚುತ್ತಾರೆ. ದೇವರು ಒಬ್ಬ ಮಹಾ ನೀಡುವಾತನು ಮತ್ತು ಸದಾ ನೀಡುತ್ತಲೇ ಇರುತ್ತಾನೆ. ದೇವರ ಪಾಲಿನ ಔದಾರ್ಯದ ಫಲವಾಗಿ ಇಡೀ ಸೃಷ್ಟಿಯು ತನ್ನ ಎಲ್ಲಾ ಲೆಕ್ಕ-ಖಾತೆಗಳಲ್ಲಿಯೂ ಇರುವುದಾಗಿದೆ. ಆತನು ತನ್ನ ಒಬ್ಬನೇ ಮಗನನ್ನು ಪ್ರಾಣ, ಸುಖಾನುಭವ ತನ್ನೊಂದಿಗಿನ ಆತನ ನಿಕಟತೆಯ ಸಮೇತವಾಗಿ ನಮಗೆ ನೀಡಿದನು. ಆತನು ದೇವದೂತರಂಥಹ ತನ್ನ ಮಕ್ಕಳಿಗೆ ಅಪಾರವಾದ ಆಶೀರ್ವಾದಗಳನ್ನು ದಯಪಾಲಿಸಿದ್ದಾನೆ. ಆತನು ನಮ್ಮ ಜನಾಂಗಕ್ಕೆ ತಂದೆಯಾದ ಆದಾಮನ ವ್ಯಕ್ತಿತ್ವದ ಮೂಲಕವಾಗಿ ಜೀವದ ಆಶೀರ್ವಾದಗಳನ್ನು ಮತ್ತು ಈ ಲೋಕದ ಸಮೃದ್ಧವಾದ ಆಶೀರ್ವಾದಗಳನ್ನು ಸುರಿಸಿದ್ದಾನೆ. ಇದು ಇಂದಿಗೂ ನಮ್ಮ ಪತನದ ಮತ್ತು ಕೀಳುಮಟ್ಟದ ಪರಿಸ್ಥಿತಿಗಳಲ್ಲಿಯೂ ಅದ್ಭುತವಾಗಿವೆ. ಆತನು ನಮಗೆ ಅಹ್ಲಾದಕರವಾದ ಸುವಾಸನೆಯನ್ನು, ಸುಸ್ವಾದವನ್ನು, ಸುಂದರವಾದ ಬಣ್ಣಗಳು ಮತ್ತು ಅವುಗಳ ಮಿಶ್ರಣ ಇವುಗಳನ್ನೆಲ್ಲಾ ಗ್ರಹಿಸುವ ಜ್ಞಾನವನ್ನು ದಯಪಾಲಿಸಿರುವನಲ್ಲದೆ ಆತನು ಪ್ರಕೃತಿಯಲ್ಲಿ ಅವುಗಳನ್ನು ಅದ್ಭುತವಾಗಿ, ಸಮೃದ್ಧಿಯಾಗಿ ತೃಪ್ತಿಯಿಂದ ಸವಿಯುವಂತೆ ಅನುಗ್ರಹಿಸಿ ಕೊಟ್ಟಿದ್ದಾನೆ; ಹಣ್ಣುಗಳಲ್ಲಿ, ಹೂವುಗಳಲ್ಲಿ ರತ್ನಾದಿ ಅಭರಣಗಳಲ್ಲಿ, ನಕ್ಷತ್ರ ಭರಿತ ಆಕಾಶದಲ್ಲಿ ಸ್ವಾಭಾವಿಕ ಮಾನವನಿಗೆ ಇವನ್ನು ದಯಪಾಲಿಸುವಲ್ಲಿ ಆತನು ಧಾರಾಳಿಯಾಗಿದ್ದಾನೆ.

ದೇವರ ವಾಕ್ಯಗಳಲ್ಲಿ ತಿಳಿದುಬರುವಂತೆ ನೂತನ ಸೃಷ್ಟಿಯ "ಚಿಕ್ಕಹಿಂಡಿಗೆ" ದೇವರು ತನ್ನ ಭಂಡಾರದಲ್ಲಿಟ್ಟಿರುವ ಆಶೀರ್ವಾದಗಳನ್ನು ನಾವು ನಿರೀಕ್ಷಿಸುವಾಗ ಅವುಗಳು ಸಾಕಷ್ಟು ಸಮೃದ್ಧಿಯಾಗಿವೆ, ನಾವು ಕೇಳುವುದಕ್ಕಿಂತಲೂ, ಆಲೋಚಿಸುವುದಕ್ಕಿಂತಲೂ ಬಹಳಷ್ಟು ಮಿಗಿಲಾಗಿವೆ ಎಂದು ನಾವು ಒಪ್ಪಿಕೊಳ್ಳಬೇಕಾಗುತ್ತದೆ. "ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ, ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ. ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು" (1 ಕೊರಿಂಥ. 2:9–10) ಆದ್ದರಿಂದ ಔದಾರ್ಯವು ಅಥವಾ ನೀಡುವುದು, ಸಹಾಯ ಮಾಡುವುದು. ಇತರರನ್ನು ಆಶೀರ್ವದಿಸುವುದು ಇವುಗಳು ದೈವಸ್ವರೂಪದ ಭಾಗಗಳು. ಹಾಗಾದರೆ ಕೊಡುವುದು ತೆಗೆದುಕೊಳ್ಳುವುದಕ್ಕಿಂತ ದೊಡ್ಡದೆಂಬುದರಲ್ಲಿ ಆಶ್ಚರ್ಯವೇನಿದೆ?

ಇದಕ್ಕೆ ಅನುಪಾತವಾಗಿ ನಾವು ಆತ್ಮೀಕ ಸಂಗತಿಗಳನ್ನು ಮೆಚ್ಚಿಕೊಳ್ಳುವುದನ್ನು ಕಲಿಯುವಾಗ ಮತ್ತು ಅನುಪಾತವಾಗಿ ನಾವು ಕರ್ತನ ಸಾಂಗತ್ಯದಲ್ಲಿರುವಾಗ ಹಾಗೂ ಆತನ ಉತ್ಸಾಹದಲ್ಲಿ ಭಾಗವಹಿಸುವಾಗ ಮತ್ತು ಆ ಪ್ರೀತಿಯ ಆತ್ಮವು ಮತ್ತು ಔದಾರ್ಯ ಮತ್ತು ಉದಾರತೆಗಳು ನಮ್ಮ ಹೃದಯಗಳಲ್ಲಿ ಸುರಿಯುವಾಗ, ಅದೇ ಅನುಪಾತದಲ್ಲಿ ನಾವು ಎಲ್ಲರಿಗೂ ವಿಶೇಷವಾಗಿ ಒಂದೇ ಮನೆಯವರಂತಿರುವ ಕ್ರಿಸ್ತನಂಬಿಕೆಯುಳ್ಳವರಿಗೆ ಒಳ್ಳೆಯದನ್ನು ಮಾಡುವಲ್ಲಿ ಸಂತೋಷಿಸುತ್ತೇವೆ. ನಮ್ಮಲ್ಲಿರುವ ಪ್ರೀತಿಯು, ಪರಲೋಕದ ತಂದೆಯಲ್ಲಿರುವಂತೆ ನಮ್ಮ ಸ್ವಂತ ಆಸಕ್ತಿಯನ್ನು ಮತ್ತು ಸುಖವನ್ನು ಮಾತ್ರವೇ ಬಯಸುವುದಿಲ್ಲ ಆದರೆ ಅದು ನಿರಂತರವಾಗಿ ಜಾಗೃತಿಗೊಂಡಿದ್ದು ಇತರರ ಮೇಲೆ ಆಶೀರ್ವಾದವು ಹೇಗೆ ಅನುಗ್ರಹಿಸಲ್ಪಡುತ್ತದೆ ಮತ್ತು ಇತರರ ಜೀವಿತವು ಯಾವ ರೀತಿಯಲ್ಲಿ ಪ್ರಕಾಶ ಹಾಗೂ ಪ್ರಸನ್ನಗೊಳ್ಳಬಹುದು; ಯಾವ ರೀತಿಯಲ್ಲಿ ಅವರ ದುಃಖಗಳಲ್ಲಿ ಅವರನ್ನು ಸಮಾಧಾನಗೊಳಿಸಬಹುದು ಮತ್ತು ಅವರ ಅಗತ್ಯತೆಗಳಲ್ಲಿ ಹೇಗೆ ನಾವು ಅವರಿಗೆ ನೆರವಾಗಬಹುದು ಎಂಬಿವುಗಳನ್ನು ಗಮನಿಸುತ್ತದೆ. ನಿಜವಾಗಿಯೂ ನೂತನ ಮನಸ್ಸು ನಮ್ಮಲ್ಲಿ ವಿಸ್ತಾರವಾಗಿ ಹರಡಿರುವಾಗ ಅಷ್ಟೇ ಅನುಪಾತವಾಗಿ ನಾವು ನಮ್ಮ ಮನಸ್ಸುಗಳಲ್ಲಿ ಪರಿವರ್ತನೆಗೊಂಡು, ಮಹಿಮೆಯಿಂದ ಮಹಿಮೆಗೆ

ಬದಲಾಗುತ್ತೇವೆ, ದೇವರು ನಮ್ಮ ಭವಿಷ್ಯಕ್ಕಾಗಿ ರೂಪಿಸಿರುವ ನಕ್ಷೆಯ ಮಹತ್ಕಾರ್ಯಗಳನ್ನು ನಾವು ಪ್ರಶಂಸಿಸುತ್ತೇವೆ. ಆತನಿಗೆ ಅನುಸಾರವಾಗಿ ಇರುವವರಿಗೆ ಹಂಚಲಿರುವ ಪರಲೋಕದ ಸಂಭಾವನೀಯವಾದ ಆಶೀರ್ವಾದಗಳನ್ನು ಪ್ರಪಂಚದ ಎಲ್ಲಾ ಕುಟುಂಬಗಳೂ ಹೊಂದಿಕೊಳ್ಳುವಂತೆ ಮಾಡುವ ದೈವ ಸ್ವರೂಪದ ಕಾರ್ಯ ಇದಾಗಿದೆ. ಈ ಕಾರಣದಿಂದ, ನೂತನ ಸೃಷ್ಟಿಗಳು ವೈಯುಕ್ತಿಕವಾದ ಮಹಿಮೆಗಳನ್ನು ಮೆಚ್ಚಿಕೊಳ್ಳುತ್ತಿರುವಾಗಲೇ ಅವರು ಬೆಳೆಯುತ್ತಿರುವ ಕೃಪೆಯ ಅನುಪಾತಕ್ಕನುಸಾರವಾಗಿ ಎಲ್ಲವೂ ಕರ್ತನೊಡಗಿನ ಜಂಟಿ-ವಾರಸುದಾರಿಕೆಯ ಮೂಲಕ ತಮ್ಮದಾಗಿ ಅದರಿಂದ ದೊರಕಲಿರುವ ಸೌಕರ್ಯಗಳ ಬಗ್ಗೆ, ಆದರ ವಿಫುಲವಾದ ಆಶೀರ್ವಾದಗಳ ಬಗ್ಗೆ, ನರಳುವ ಬಡ ಜೀವಿಗಳಿಗೆ ಸಾರಬೇಕಾಗಿರುವ ಪುನರ್‌ವಶದ ಬಗ್ಗೆ, ಆದಾಮನ ಕಾರಣ ಪತನಗೊಂಡವರಲ್ಲಿ ಸಾಧ್ಯವಾದಷ್ಟು ಮಂದಿಯನ್ನು ಮಾನವನ ಪರಿಪೂರ್ಣ ಸ್ವರೂಪಕ್ಕೆ ಮೇಲಕ್ಕೆತ್ತುವ ಬಗ್ಗೆ ಅಲೋಚಿಸ ತೊಡಗುತ್ತಾರೆ.

ಪ್ರೀತಿಯ ಆತ್ಮವು, ನೀಡಬೇಕೆಂಬ ಈ ಅಪೇಕ್ಷೆ, ಇತರರಿಗೆ ಸಹಾಯಮಾಡಬೇಕೆಂಬ ಈ ಇಚ್ಛೆ ಇವುಗಳು ನಮ್ಮ ಹೃದಯದಲ್ಲಿ ಈಗ ಬೆಳೆದು ಇತರರ ಬಗ್ಗೆ ಉದಾರವಾದ ಆಲೋಚನೆಗಳಿಗೆ ನಡೆಸುವುದಲ್ಲದೆ, ಪ್ರಸ್ತುತ ಸತ್ಯದ ಬೆಳಕಿನಲ್ಲಿ ನಾವು ಆಶೀರ್ವಾದ ಹೊಂದಿಕೊಂಡಂತೆ ಇತರರೂ ಹೊಂದಿಕೊಳ್ಳಲು ನಾವು ನಮ್ಮ ಸಮಯ ಮತ್ತು ಪ್ರಭಾವಗಳನ್ನು ಇತರರಿಗೆ ಧಾರೆ ಎರೆಯುವ ಇಚ್ಛೆ ಮುಂತಾದ ಗುಣ ನಡತೆಯ ಔದಾರ್ಯಕ್ಕೂ ನಡೆಸುತ್ತದೆ. ಇದೇ ಉತ್ಸಾಹವು ನಮ್ಮಲ್ಲಿ ಬೋಧಿಸುವ ಅಥವಾ ವ್ಯಾಖ್ಯಾನಿಸುವ ಮೆಧಾಶಕ್ತಿ ಇಲ್ಲವಾದಲ್ಲಿ ಕರಪತ್ರ ಮುಂತಾದವುಗಳನ್ನು ಸಮಯಕ್ಕೆ ತಕ್ಕ ಮಾತುಗಳೊಡನೆ ವಿತರಿಸಲು ನಮ್ಮ ಹಣ, ಅವಕಾಶ ಮತ್ತು ಮೇಧಾಶಕ್ತಿಗಳನ್ನು ವಿನಿಯೋಗಿಸುವಂತೆ ಮಾಡುತ್ತದೆ. ಇದು ನಮ್ಮಲ್ಲಿ ಹಣ ಮತ್ತು ಮೇಧಾಶಕ್ತಿಗಳು ಇರುವುದಾದಲ್ಲಿ ಅವುಗಳನ್ನು ಕರ್ತನ ಸೇವೆಯಲ್ಲಿ ಆತನ ಸುವಾರ್ತೆಯನ್ನು ಪ್ರಚುರಪಡಿಸುವ ಸಲುವಾಗಿ ಇನ್ನೂ ಮುಂದೆ ವಿನಿಯೋಗಿಸುವಂತೆ ಮಾಡುತ್ತದೆ. ನಿಜವಾಗಿಯೂ, ನಾವು ಆ ಬಡ ವಿಧವೆಯು ಎರಡು ಹಣವನ್ನು ಕಾಣಿಕೆಯಾಗಿ ನೀಡಿದ್ದನ್ನು ಕರ್ತನು ಮೆಚ್ಚಿಕೊಂಡಂತೆ ಇಂದು ಸಹಾ ಸ್ವಾರ್ಥತ್ಯಾಗವನ್ನು ಆತನು ಮೆಚ್ಚುತ್ತಾನೆಂದು ನಾವು ನಂಬುತ್ತೇವೆ. ನಮ್ಮ ಕರ್ತನು ಆಕೆಯನ್ನು ಮೆಚ್ಚಿ ಬಹಳಷ್ಟು ಕೊಟ್ಟವರನ್ನೂ ತನ್ನ ಎಣಿಕೆಯಲ್ಲಿ ಆ ಮೂಲಕ ದೇವರ ಎಣಿಕೆಯಲ್ಲಿ ಇರಿಸಿಕೊಂಡು "ಈಕೆಯೋ ತನ್ನ ಬಡತನದಲ್ಲಿಯೂ ತನಗಿದ್ದ ಜೀವನವನ್ನೆಲ್ಲಾ ಕೊಟ್ಟುಬಿಟ್ಟಳು" (ಲೂಕ 21:4) ಎಂದನು. ಆಕೆಯು ತನ್ನ ರೀತಿಯಲ್ಲಿ ಕರ್ತನು ಮಾಡಿದಂತೆಯೇ ಸಾಮಾನ್ಯ ಉದ್ದೇಶದಿಂದ ಈ ರೀತಿ ಮಾಡುತ್ತಿದ್ದಳು. ಆತನು ತನ್ನ ಜೀವಿತವನ್ನೂ ಮಾತ್ರ ನೀಡಿದ್ದಲ್ಲದೆ ಪ್ರತಿಗಳಿಗೆಯಲ್ಲಿ, ಪ್ರತಿ ದಿನವೂ ತನ್ನ ಪ್ರಾಣವನ್ನೇ ಇತರರ ಸೇವೆಗಾಗಿ ನೀಡಿದನು; ಅಂತ್ಯದಲ್ಲಿ ಕಲ್ವಾರಿಯಲ್ಲಿ ಸಂಪೂರ್ಣವಾದ ಅರ್ಥದಲ್ಲಿ ಈ ಕಾರ್ಯವನ್ನು ಸಮಾಪ್ತಿಗೊಳಿಸಿದನು.

ನಮ್ಮ ಕರ್ತನು ಆ ಬಡ ವಿಧವೆಗೆ ಆಕೆ ತನ್ನ ಕರ್ತವ್ಯಕ್ಕೂ ಹೆಚ್ಚಾದುದನ್ನು ಮೀರಿ ಮಾಡಿದ್ದಾಳೆ ಎಂಬ ಎಚ್ಚರಿಕೆಯನ್ನು ಯಾವುದಾದರೂ ಪ್ರಮಾಣದಲ್ಲಿ ಯಾಕೆ ನೀಡಲಿಲ್ಲ ಎಂಬುದರ ಬಗ್ಗೆ ನಾವು ಒಲವು ತೋರುತ್ತೇವೆ; ಆಕೆಯ ಬಳಿ ಕೇವಲ ಎರಡು ಹಣಗಳು ಮಾತ್ರವೇ ಇದ್ದಿದ್ದರೆ ಆಕೆ ಆ ಎರಡನ್ನೂ ಇಟ್ಟುಕೊಳ್ಳಬಹುದಿತ್ತು ಅಥವಾ ಕನಿಷ್ಠ ಒಂದನ್ನಾದರೂ ತನ್ನ ಅಗತ್ಯತೆಗಳಿಗಾಗಿ ಇಟ್ಟುಕೊಳ್ಳಬಹುದಿತ್ತು. ಕರ್ತನಲ್ಲದೆ ಬೇರೆ ಯಾರೇ ಆಗಿದ್ದರೂ ಅಥವಾ ಅಪೋಸ್ತಲರಲ್ಲಿ ಒಬ್ಬನು ಈ ವ್ಯವಹಾರವನ್ನು ಕಂಡು ಯಾವುದೇ ಎಚ್ಚರಿಕೆಯ ಮಾತನ್ನು ಹೇಳದೇ ಅದನ್ನು ಮೆಚ್ಚುತ್ತಿದ್ದರೆ, ಆ ಎಚ್ಚರಿಕೆಯ ಮಾತನ್ನು ಸೇರಿಸಲು ನಮಗೆ ಸಂಪೂರ್ಣ ಸ್ವತಂತ್ರವಿರುತ್ತಿತ್ತು. ಆದರೆ, ಒಟ್ಟನಲ್ಲಿ ಸ್ವಯಂ ರಕ್ಷಣೆಯ ದೆಸೆಯಲ್ಲಿ ಕೆಲವರಿಗೆ ಮಾತ್ರವೇ ಎಚ್ಚರಿಕೆಯ ಅವಶ್ಯಕತೆಯಿದೆ ಎಂದು ನಾವು ಭಾವಿಸುತ್ತೇವೆ. ತಮ್ಮೆಲ್ಲಾ ಬದುಕನ್ನು ನೀಡುವುದರ ವಿರುದ್ಧ ಎಚ್ಚರಿಕೆಯನ್ನು ಕೆಲವರಿಗೆ ಮಾತ್ರವೇ ನೀಡಬೇಕಾಗುತ್ತದೆ. ಉದಾರತೆಯು ಮಿತಿಮೀರಿದ್ದು ಎಂದು ನಾವು ಪರಿಗಣಿಸುವ ಆ ಬಡ ವಿಧವೆಯಂತೆ ಕೆಲವರಿಗೆ ಇದ್ದಿರಬಹುದು ಅಂತಹವರಿಗೆ ನಿಶ್ಚಯವಾಗಿ ಕರ್ತನು ಯಾವುದಾದರೂ ರೀತಿಯಲ್ಲಿ ಪೂರೈಸುತ್ತಾನೆ. ಪ್ರಶ್ನೆಯ ವಿರುದ್ಧ ದಿಕ್ಕಿಗಿಂತ ಪ್ರಶ್ನೆಯ ಆ ಭಾಗದಲ್ಲಿ ಅವರು ತಪ್ಪು ಮಾಡುವುದು ಒಳ್ಳೆಯದು ಎಂಬ ದೃಢ ವಿಶ್ವಾಸ ನಮಗಿದೆ. "ಒಬ್ಬನು ತನ್ನ ಧನವನ್ನು ಚೆಲ್ಲಿದರೂ ಅವನಿಗೆ ವೃದ್ಧಿ (ವೃದ್ಧಿಯು ಪ್ರಕೃತಿ ಸಹಜವಾಗಿ ಬಾರದೇ ಹೋದರೂ ಆತ್ಮೀಕ ಸಂಗತಿಗಳಲ್ಲಿ ಉಂಟಾಗುತ್ತದೆ); ಮತ್ತೊಬ್ಬನು ನ್ಯಾಯವಾದುದನ್ನು ಬಿಗಿಹಿಡಿದರೂ (ಮಿತಿಮೀರಿದ ಜಾಗೃತಿ ವಹಿಸುವವರು, ಎಚ್ಚರಿಕೆಯಿಂದಿರುವವರು, ದರಿದ್ರರು, ಅತಿಯಾಗಿ ರಕ್ಷಣೆವಹಿಸುವವರು) ಅವನಿಗೆ ಬಡತನ ಕೆಲವೊಮ್ಮೆ ಆರ್ಥಿಕ ಬಡತನ, ಆದರೆ ನಿಶ್ಚಯವಾಗಿ ಸದಾ ಆತ್ಮೀಕ ಬಡತನ". (ಜ್ಞಾನೋಕ್ತಿ 11:24).

ದೇವರು ತನ್ನ ಜನರಿಗೆ ಅವರ ಉದಾರತೆಯ ಬಗ್ಗೆ ಯಾವುದೇ ನಿಯಮವನ್ನು ವಿಧಿಸಿರುವುದಿಲ್ಲ, ಆದರೆ ಎಲ್ಲವನ್ನೂ ಆತನಿಗೆ ಸಮರ್ಪಿಸಿದವರಿಗೆ ಆ ಸಂಗತಿಯನ್ನು ಮುಕ್ತವಾಗಿಟ್ಟಿರುವುದರಿಂದ ಅವರ ಪ್ರತಿಷ್ಠೆಯು ಅವರ ಅನಂತರದ ನಡತೆಗಳಿಂದ ತ್ಯಾಗಗಳು, ಸ್ವಯಂ-ನಿರಾಕರಣೆಗಳು ಇವುಗಳಿಂದ ಅಳೆಯಲ್ಪಡುತ್ತದೆ. ಈ ಕಾರಣ ನಮ್ಮ ಪ್ರತಿಯೊಬ್ಬರ ಮುಂದೆ ಉದ್ಭವಿಸುವ ಪ್ರಶ್ನೆ ಏನೆಂದರೆ ನಾನು ನನ್ನ ಸಮಯವನ್ನು, ನನ್ನ ಪ್ರಭಾವವನ್ನು, ನನ್ನ ಹಣವನ್ನು ಕರ್ತನಿಗೆ ಎಷ್ಟರ ಮಟ್ಟಿಗೆ ನೀಡಬೇಕು? ಇಂತಹ ವಿಚಾರಣೆಯು ತನ್ನನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡು ನೂತನ ಸೃಷ್ಟಿಯಾದವರಿಂದ ಬರುವುದಾದಲ್ಲಿ ಅದಕ್ಕೆ ನಾವು ನೀಡುವ ಒಂದೇ ಉತ್ತರ-ಆತನು ಕೊಡಬೇಕಾದುದು ಏನೂ ಇಲ್ಲ, ಆತನು ತನ್ನಲ್ಲಿರುವುದೆಲ್ಲವನ್ನೂ ಈಗಾಗಲೇ ಕರ್ತನಿಗೆ ನೀಡಿಯಾಗಿದೆ. ಆತನು ಏನನ್ನಾದರೂ ಉಳಿಸಿಕೊಂಡಿದ್ದರೆ ಆತನು ತನ್ನನ್ನು ಸಂಪೂರ್ಣವಾಗಿ ಪ್ರತಿಷ್ಠಿಸಿಕೊಂಡಿಲ್ಲ ಮತ್ತು ಕರ್ತನಿಂದ ಆತನು ಸಂಪೂರ್ಣವಾಗಿ ಅಂಗೀಕರಿಸಲ್ಪಟ್ಟಿಲ್ಲ ಎಂದು ನಿಶ್ಚಯವಾಗಿ ಅವನು ತಿಳಿದಿರಲಿ.

---

**(*ಅಧ್ಯಾಯ xiii ರಲ್ಲಿ ಪ್ರತಿಷ್ಠೆಗೊಂಡವರ ಮತ್ತು ಅವರ ಕುಟುಂಬದವರ ಹಂಗು, ಮತ್ತು ಎಲ್ಲವೂ ದೇವರಿಗೆ ಸಮರ್ಪಿಸುವ ಬಗ್ಗೆ ತಿಳಿಸಲಾಗಿದೆ.)**

ನಾವು ಕರ್ತನಿಗೆ ಎಲ್ಲವನ್ನು ಸಂಪೂರ್ಣವಾಗಿ ಅರ್ಪಿಸಿದ್ದೇವೆ ಎಂಬುದನ್ನು ಒಪ್ಪಿಕೊಳ್ಳುವಾಗ ನಾವು ಈ ವರವನ್ನು ಕಾರ್ಯರೂಪಕ್ಕೆ ತರುವ ವಿಷಯದಲ್ಲಿ ದೇವರ ಚಿತ್ತವೇನು ಎಂಬುದನ್ನು ವಿವರಿಸುವುದಾದರೂ ಹೇಗೆ? ನಮ್ಮ ಉತ್ತರವೇನೆಂದರೆ, ಪ್ರತಿಯೊಬ್ಬನೂ ತನ್ನ ಸ್ವಂತ ಸಮಯದ, ಪ್ರಭಾವದ, ಹಣ ಮುಂತಾದುವುಗಳ ಮನೆವಾರ್ತೆಯವನಾಗಿ ಕರ್ತನಿಂದಲೇ ನೇಮಿಸಲ್ಪಟ್ಟಿದ್ದಾನೆ ಮತ್ತು ಪ್ರತಿಯೊಬ್ಬನೂ ಈ ಎಲ್ಲಾ ತಲಾಂತುಗಳನ್ನು ತನ್ನ ಉತ್ತಮವಾದ ಸಾಮರ್ಥ್ಯಕ್ಕನುಸಾರವಾಗಿ ತನ್ನ ಕರ್ತನ ಮಹಿಮೆಗಾಗಿ ವಿನಿಯೋಗಿಸತಕ್ಕದ್ದು. ಆತನಿಗೆ ಕರ್ತನ ಕೃಪಾಸನದ ಸವಲತ್ತು ದಯಪಾಲಿಸಲ್ಪಟ್ಟಿರುವುದರಿಂದ, ಈ ತಲಾಂತುಗಳ ಉಪಯೋಗಿಸುವಿಕೆಯ ಬಗ್ಗೆ ಆತನಿಗೆ ಅನುಮಾನಗಳು ಇರುವುದಾದಲ್ಲಿ ಅದನ್ನು ಆತನು ಮುಕ್ತವಾಗಿ ತನಗೆ ಧಾರಾಳವಾದ ವಿವೇಕವನ್ನು ದಯಪಾಲಿಸಿರುವ ಕರ್ತನಲ್ಲಿ ಕೇಳಬಹುದು. ಕೇಳುವವರನ್ನು ಆತನು ಗದರಿಸುವವನಲ್ಲ. ಆತನ ಪ್ರೀತಿ ಮತ್ತು ಉತ್ಸಾಹಗಳಿಗೆ ಅನುಪಾತವಾಗಿ ಮೇಲಿನಿಂದ ದೊರೆಯುವ ಜ್ಞಾನದ ಮಾರ್ಗದರ್ಶನದಿಂದಾಗಿ ದಿನದಿಂದ ದಿನಕ್ಕೆ ಸತ್ಯದ ಮತ್ತು ಆತ್ಮನನ್ನು ಪಡೆದುಕೊಳ್ಳುವ ಜ್ಞಾನದಲ್ಲಿ ಬೆಳೆಯುತ್ತಾನೆ ಮತ್ತು ಆತನೇ ಸತ್ಯದ ಸೇವೆಯಲ್ಲಿ ಹೆಚ್ಚು ಹೆಚ್ಚು ಸಮಯವನ್ನು, ಪ್ರಭಾವವನ್ನು ಇನ್ನಿತರ ಎಲ್ಲಾ ಸಂಗತಿಗಳು ತನ್ನ ವಶದಲ್ಲಿರುವುದನ್ನು ಕಂಡುಕೊಳ್ಳುತ್ತಾನೆ ಮತ್ತು ತನ್ನ ಕಾಣಿಕೆ ಮತ್ತು ತ್ಯಾಗವನ್ನು ಹೆಚ್ಚಿಸುವ ರೀತಿಯಲ್ಲಿ ತನ್ನ ಸ್ವಂತ ಮತ್ತು ಕುಟುಂಬದ ವಿವಿಧ ಹಂಗನ್ನು ಯಾವ ರೀತಿಯಲ್ಲಿ ಮೊಟಕುಗೊಳಿಸಬಹುದು ಎಂಬುದನ್ನು ಹೆಚ್ಚಾಗಿ ಯೋಚಿಸುತ್ತಾನೆ.

ಎಲ್ಲರಿಗೂ ತಿಳಿದಿರುವಂತೆ ದೇವರು ಯೆಹೂದ್ಯರಿಗೆ ದಶಮಾಂಶ ಪದ್ಧತಿಯನ್ನು ಜಾರಿಗೆ ತಂದನು. ಇದರ ಪ್ರಕಾರವಾಗಿ ಹೆಚ್ಚಾದ ಸಂಪತ್ತಿನಲ್ಲಿ ಅದು ದವಸ ಧಾನ್ಯವಾಗಿರಲಿ ಅಥವಾ ತರಕಾರಿಯಾಗಿರಲಿ ಅಥವಾ ಪಶುಗಳ ಹಿಂಡು ಅಥವಾ ಹಣವೇ ಆಗಿರಲಿ ಅದರಲ್ಲಿನ ಹತ್ತನೆಯ ಒಂದು ಭಾಗವನ್ನು ದೇವರಿಗೆ ಮೀಸಲಿರಿಸತಕ್ಕದ್ದು ಮತ್ತು ಪವಿತ್ರ ಕಾರ್ಯಗಳಿಗೆ ಮಾತ್ರವೇ ಅದನ್ನು ವಿನಿಯೋಗಿಸತಕ್ಕದ್ದು. ಆದರೆ ಈ ವ್ಯವಸ್ಥೆಯು ಕೇವಲ ಸೇವಕರ ಮನೆಯವರಿಗೆ ಮಾತ್ರವೇ ಅನ್ವಯವಾಗುತ್ತಿತ್ತು. ಕರ್ತನು ತನ್ನ ಪುತ್ರರ ಮನೆಯವರಿಗೆ ಇಂತಹ ಯಾವುದೇ ಕಾನೂನು ಕಾಯ್ದೆಗಳನ್ನು ವಿಧಿಸಿರಲಿಲ್ಲ. ಆತನು ತನ್ನ ಮಕ್ಕಳಿಂದ ಸೇವಕರಿಗಿಂತ ಕಡಿಮೆಯಾದುದ್ದನ್ನು ಅಪೇಕ್ಷಿಸುತ್ತಿದ್ದನೆಂಬ ಅಭಿಪ್ರಾಯವನ್ನು ಇದು ನೀಡುತ್ತದೆಯೋ? ಖಂಡಿತವಾಗಿಯೂ ಇಲ್ಲ; ತನ್ನ ತಂದೆಯ ವ್ಯವಹಾರದಲ್ಲಿ ಸೇವಕರಿಗಿಂತ ಕಡಿಮೆ ಆಸಕ್ತಿ ತೋರುವ ಮಗನು ಮಗನಾಗಿರಲು ಯೋಗ್ಯನಲ್ಲ. ಆ ಮಗನು ಅದನ್ನು ಕಳೆದುಕೊಳ್ಳುವನು ಮತ್ತು ಬೇರೊಬ್ಬನು ಮಗನ ನಿಜವಾದ ಉತ್ಸಾಹಕ್ಕಿಂತ ಹೆಚ್ಚಿನದನ್ನು ಹೊಂದಿಕೊಳ್ಳುವನು. ಪುತ್ರರ ಮನೆಯವರಲ್ಲಿ ಹತ್ತರಲ್ಲಿ ಒಂದಂಶ ಮಾತ್ರವಲ್ಲ, ಆದರೆ ಎಲ್ಲವನ್ನೂ ಪ್ರತಿಷ್ಠಿಸಲಾಗುವುದು, ಸಮರ್ಪಿಸಲಾಗುವುದು ಮತ್ತು ಎಲ್ಲವನ್ನೂ ಅವಕಾಶಕ್ಕೆ ತಕ್ಕಂತೆ ದೇವರ ಕಾರಣಗಳಿಗಾಗಿ ವಿನಿಯೋಗಿಸಲಾಗುವುದು. ಈ ರೀತಿಯಲ್ಲಿ ನಾವು ನಮ್ಮ ಬದುಕನ್ನು, ನಮ್ಮದೆಲ್ಲವನ್ನೂ ಸತ್ಯದ ಸೇವೆಯಲ್ಲಿ ಅರ್ಪಿಸಬೇಕಾಗುತ್ತದೆ.*

ಅಪೋಸ್ತಲನು ಈ ಬಗ್ಗೆ ನಮ್ಮ ಗಮನವನ್ನು ಫಿಲಿಪ್ಪಿಯವರಿಗೆ ಬರೆದ ಪತ್ರಿಕೆಯಲ್ಲಿ ಈ ರೀತಿಯಾಗಿ ಸೆಳೆಯುತ್ತಾ ಅವರು ಸ್ವಯಿಚ್ಛೆಯಿಂದ ನೀಡುವ ಕಾಣಿಕೆಗಳನ್ನು ಮೆಚ್ಚಿ ನಂತರದಲ್ಲಿ "ನಾನು ನಿಮ್ಮಿಂದ ದಾನವನ್ನು ಅಪೇಕ್ಷಿಸುವುದಿಲ್ಲ; ನಿಮ್ಮ ಆತ್ಮಕ್ಕೆ ಆದಾಯವಾಗುವಂಥ ಪ್ರೀತಿಫಲವನ್ನೇ ಅಪೇಕ್ಷಿಸುತ್ತೇನೆ" (ಫಿಲಿಪ್ಪಿ 4:17) ಎಂದಿದ್ದಾನೆ. ಇವುಗಳೆಲ್ಲವೂ ಪವಿತ್ರಾತ್ಮನಿಂದ ಪಡಕೊಂಡದ್ದು ಮತ್ತು ಉತ್ತಮ ಫಲಗಳನ್ನು ನೀಡುತ್ತವೆ, ಉತ್ತಮ ಕಾರ್ಯವೂ, ಔದಾರ್ಯತೆಗಳೂ ಇದರಿಂದ ಉಂಟಾಗುತ್ತವೆ ಎಂದು ಆತನು ನಿಶ್ಚಯವಾಗಿ ತಿಳಿದಿದ್ದಾನೆ. ಈ ಔದಾರ್ಯದ ನಿದರ್ಶನವು ಹೆಚ್ಚಿದಂತೆಲ್ಲಾ ಅವುಗಳ ಆತ್ಮೀಕ ಬೆಳವಣಿಗೆಗಳನ್ನು ಆತನು ಇನ್ನೂ ಹೆಚ್ಚಾಗಿ ನಿರೂಪಿಸುತ್ತಾನೆ ಮತ್ತು ಇವನ್ನೇ ಆತನು ಹೆಚ್ಚಾಗಿ ಅಪೇಕ್ಷಿಸಿದ್ದು, ಅದರಂತೆಯೇ ಈ ದಿನಗಳಲ್ಲಿ ಇದೆ. ಎಲ್ಲಾ ಚಿನ್ನ ಬೆಳ್ಳಿಯೂ, ಸಾವಿರಾರು ಗುಡ್ಡಗಳ ಮೇಲಿರುವ ಪಶುಗಳೂ ಆತನವೇ ಎಂದು ಕರ್ತನು ನಮಗೆ ತಿಳಿಸುತ್ತಾನೆ. ಆತನಿಗೆ ನಮ್ಮ ಪ್ರಯತ್ನದಿಂದ ದೊರೆತ ಯಾವುದೇ ಹಣವಾಗಲೀ ಬೇರೆ ಏನೇ ಆಗಲೀ ಯಾವುದೂ ಬೇಕಿಲ್ಲ. ಆದರೆ ಇವು ನಮ್ಮ ಅನುಕೂಲಗಳಿಗಾಗಿದ್ದು ನಮ್ಮ ಅಭಿವೃದ್ಧಿಗೆ ಸಹಾಯಕವಾಗಿರುವುದರಿಂದ ಆತನು ತನ್ನ ಕಾರ್ಯಗಳನ್ನು ನಿಜವಾದ ಆತನವರ ಎಲ್ಲಾ ಪರಿಶ್ರಮಕ್ಕೆ ತಕ್ಕಂತೆ ಆತನ ಮಹಿಮೆಗಾಗಿ ಅವನ್ನು ಉಪಯೋಗಿಸಲು ಅನುಮತಿಸುತ್ತಾನೆ.

ಈ ವ್ಯವಸ್ಥೆಯು ಎಷ್ಟೊಂದು ಅನಂದದಾಯಕವಾಗಿದೆ! ಈ ಸವಲತ್ತುಗಳು ಆತನ ಪ್ರಿಯ ಜನರಿಗೆ ಎಂತಹ ಆಶೀರ್ವಾದಗಳನ್ನು ಈಗಾಗಲೇ ತಂದಿವೆ! ನಾವು ಕರ್ತನ ಸೇವೆಯಲ್ಲಿ ನಮ್ಮೆಲ್ಲಾ ಮೇಧಾಶಕ್ತಿಗಳನ್ನು ಅರ್ಪಿಸುವಂತೆ ಇವು ನಮ್ಮ ಓಟದ ಅಂತ್ಯದವರೆಗೂ ಮುಂದುವರೆಯಲಿದೆ ಎಂಬುದರಲ್ಲಿ ಯಾವ ಅನುಮಾನವೂ ನಮಗಿಲ್ಲ. ಆದುದರಿಂದ ಆ ಬಡ ವಿಧವೆ ಮತ್ತು ಆಕೆಯ ಎರಡು ದುಗ್ಗಾಣಿಯ(ಹಣದ) ದೃಷ್ಟಾಂತದ ನಂತರ ತಮ್ಮ ಹೃದಯದ ಇಚ್ಛೆಯನ್ನು ಕರ್ತನಿಗೆ ತೋರಿಸಲಾಗದಷ್ಟು ಬಡವರು ಯಾರೂ ಇಲ್ಲ ಎಂದು ನಾವು ಹುರಿದುಂಬಿಸುತ್ತೇವೆ. ಯಾವಾತನು ಅಲ್ಪ ಸಂಗತಿಗಳಲ್ಲಿ ನಂಬಿಗಸ್ಥನಾಗಿರುವನೋ ಅಂಥವನು ಹೆಚ್ಚಿನ ಸಂಗತಿಗಳಲ್ಲಿಯೂ ನಂಬಿಗಸ್ಥನಾಗಿರುವನೆಂದು ನಮ್ಮ ಕರ್ತನು ಒಂದೆಡೆ ಹೇಳಿರುವಂತೆಯೇ ಆತನ ಅಂದಾಜು ಇರುವಂತೆ ನಮಗೆ ತೋರಿಬರುತ್ತದೆ. ಆತನು ಇನ್ನುಮುಂದೆ ದೊಡ್ಡ ಅವಕಾಶಗಳನ್ನು ನೀಡುವುದು ಮಾತ್ರವಲ್ಲ ಇಂದು ಸಹಾ ಇನ್ನೂ ಹೆಚ್ಚಿನ ಅವಕಾಶಗಳನ್ನು ನೀಡುವ ಒಲವುಳ್ಳವನಾಗಿರುತ್ತಾನೆ.

ನಮ್ಮ ಬುದ್ಧಿ ಮಾತೇನೆಂದರೆ, ಹಣದ ವಿಷಯವನ್ನು ಸಭೆಯ ಸಾಮಾನ್ಯ ಕೂಟಗಳಲ್ಲಿ ಪರಿಗಣಿಸದೆ ಸಾಧ್ಯವಾದ ಮಟ್ಟಿಗೆ (ಪೂರ್ತಿಯಾಗಿ ಎಂದು ನಾವು ನಂಬುತ್ತೇವೆ) ಬಿಟ್ಟುಬಿಡಬೇಕು. ಕರ್ತನ ಆತ್ಮವನ್ನು ಬೆಳೆಸಿಕೊಳ್ಳಬೇಕೆಂದು ನಾವು ಬುದ್ಧಿ ಹೇಳುತ್ತೇವೆ. ಇದು ನಮ್ಮಲ್ಲಿ ಶ್ರೀಮಂತನಾಗಿರುವ ನೆಲೆಸಿದ್ದು ಪ್ರತಿಯೊಬ್ಬನೂ ಸಭೆಯ ಪ್ರಸ್ತುತ ಖರ್ಚು ವೆಚ್ಚಗಳನ್ನು ಮಾತ್ರವಲ್ಲ ತನ್ನ ಆತ್ಮಕ್ಕೆ ದೊರೆತ ಆಶೀರ್ವಾದದ ಬೆಳಕನ್ನು

ಇನ್ನೂ ಕತ್ತಲೆಯಲ್ಲಿ ಕುಳಿತಿರುವ ಇತರರಿಗೆ ಪ್ರಸರಿಸುವ ಬಗ್ಗೆ ತನ್ನ ಪಾಲನ್ನು ನೀಡಲು ಕಾತುರವುಳ್ಳವನಾಗುತ್ತಾನೆ. ಇದೇ ದಿಸೆಯಲ್ಲಿ ಹೊರಗಿನವರಿಂದ ಬಂದ ಹಣವನ್ನು ಯಾಕೆ ತಿರಸ್ಕರಿಸಬೇಕೆಂಬುದರ ಕಾರಣ ನಮಗೆ ತಿಳಿಯದೇ ಹೋದರೂ ಹಣವನ್ನು ಇತರರಿಂದ ಕೋರಿಕೊಳ್ಳದಂತೆ ನಾವು ಬುದ್ಧಿಹೇಳುತ್ತೇವೆ. ಇದು ಅವರ ಅನುಕಂಪದ ಸೂಚನೆಯಾಗಿದೆ. ನಿಸ್ಸಂದೇಹವಾಗಿ ಇದು ಅವರಿಗೆ ಪ್ರಸ್ತುತ ಜೀವಿತದಲ್ಲಿ ಇಲ್ಲವೆ ಮುಂಬರುವ ಜೀವಿತದಲ್ಲಿ ಒಂದು ರೀತಿಯ ಮಾನ್ಯತೆ ಮತ್ತು ಬಹುಮಾನವನ್ನು ತರುವುದಾಗಿದೆ. ಯಾಕೆಂದರೆ "ಈ ಚಿಕ್ಕವರಲ್ಲಿ ಒಬ್ಬನಿಗೆ ಯೇಸುವಿನ ಶಿಷ್ಯನೆಂದು ಒಂದು ತಂಬಿಗೆ ತಣ್ಣೀರನ್ನಾದರೂ ಕುಡಿಯುವುಕ್ಕೆ ಕೊಟ್ಟರೆ ಬರತಕ್ಕ ಪ್ರತಿಫಲವು ಅವನಿಗೆ ತಪ್ಪುವುದೇ ಇಲ್ಲ" (ಮತ್ತಾಯ 10:42, ಮಾರ್ಕ 9:41) ಎಂದು ಬರೆದದೆ. ■

* * * * * *

ಈ ಕ್ರೂರ ಶಬ್ಧಗಳ ನಮ್ಮ ದಿವಸದಲ್ಲಿ
ಸಣ್ಣ ಮಧುರ ಮುನ್ನುಡಿಯೊಂದು ತನ್ನ ಮಾರ್ಗ ಕಂಡುಕೊಳ್ಳುತ್ತೆ;
ಸಂಶಯ ಮತ್ತು ಧರ್ಮಸಿದ್ಧಾಂತದ ಕಾರ್ಮೋಡಗಳ ಭಯದ ನಡುವೆ
ಪ್ರಶಾಂತ ಮತ್ತು ಸ್ಪಷ್ಟವಾದ ಬೆಳಕು ಭೇಧಿಸಿಕೊಂಡು ಬರು

ಕಾಣಲಾರದವರು ತಡಕಾಡಲೇಬೇಕೆಂಬಂತೆ
ತೆನೆಯೊಡೆಯುವ ಮುನ್ನ ಗರಿ ಕಾಣಲೇಬೇಕು
ನೀವು ಭಾವಿಸುವಂತೆ ನಾನೂ ಭಾವಿಸುತ್ತೇನೆ,
ನೀವು ವಾಸಿಸುವಲ್ಲಿ ನಾನೂ ವಾಸಿಸುವೆನು.

## ನನಗೆ ಗೊತ್ತಿದ್ದರೆ

ಎಲ್ಲಾ ವಿಷಯಗಳು ನನ್ನನ್ನು ದಣಿಸುತ್ತಿದ್ದರೂ,
ನೋವುಗಳು ನನ್ನನ್ನು ಕತ್ತಿಯಿಂದ ಕತ್ತರಿಸಿದಂತಿದ್ದರೂ,
ಗದ್ದಲ, ಆಯಾಸ, ಸಂಕಟ,
ಜೀವಿತದ ಹೇಳಹೆಸರಿಲ್ಲದ ಬೇನೆ, ಜಂಜಾಟ
ಇವೆಲ್ಲವನ್ನೂ ನನ್ನ ಕರ್ತನು ಗಮನಿಸುತ್ತಿದ್ದಾನೆಂದು
ನನಗೆ ಖಂಡಿತ ಗೊತ್ತಿದ್ದರೆ
ಎಂಥಹ ಸಮಾಧಾನ ದೊರಕುತ್ತಿತ್ತು !

ಸೀಮಿತವಿಲ್ಲದ ಬಾಹ್ಯಾಕಾಶದಲ್ಲಿರುವ
ಪ್ರತಿಯೊಂದು ಉಜ್ವಲ ಗ್ರಹಗಳನ್ನು,
ಅದರದರ ಪಥದಲ್ಲಿ ಕೊಂಡೊಯ್ಯುತ್ತಿರುವ
ಈ ಪರಾಕ್ರಮಿಯಾದ ರಾಜಾಧಿರಾಜನು
ಅಲ್ಪ ಮಾನವನ ಎಲ್ಲಾ ಸಣ್ಣ ಪುಟ್ಟ ಚಿಂತೆಗಳಲ್ಲೂ,
ಕೃಪೆ ತೋರಿ ಆತನು ನಿಜವಾಗಿಯೂ ಸಹಭಾಗಿಯಾಗುವನು
ಎಂದು ತಿಳಿಯಲು ನನಗಾಶ್ಚರ್ಯವಾಗುತಿದೆ.

ಇದು ನಿಜವಾಗಿದೆ ಎಂಬದಾಗಿ ಕಂಡುಬರುವಾಗ,
ಪ್ರತಿಯೊಂದು ಅಸ್ವಸ್ಥತೆಯ ಹಿಂದೆ
ಎಂಥಹ ಆಶೀರ್ವಾದ ಬರುತ್ತದೆಯೆಂದರೆ,
ಮತ್ತೆ ನಾನು ಅದನ್ನೇ ಬಯಸುವಂತಾಗುತ್ತೆ
ಆಶೀರ್ವಾದದಾಯಕ ಈ ದೈವ ಆಲೋಚನೆಯ ಪರಿಣಾಮ,
ಕ್ರಿಸ್ತನ ಮಧುರವಾದ ಸಹಾನುಭೂತಿಯ ಅರಿವು ನಷ್ಟವಲ್ಲ,
ಆದರೆ ಅದು ಅಪಾರ ಲಾಭವೇ ಸರಿ ಎನಿಸುತ್ತದೆ.

ಪ್ರಿಯ ಕರ್ತನೇ, ನೀನು ನನ್ನನ್ನು ದಿವ್ಯವಾದ
ಅನುಕಂಪದಿಂದ ಆವರಿಸಿಕೊಂಡಿರುವಿ ಎಂಬುದರ ಬಗ್ಗೆ
ನನ್ನ ಹೃದಯವು ಎಂದಿಗೂ ಶಂಕಿಸುವುದಿಲ್ಲ,
ನನ್ನ ಮೇಲಣ ಪ್ರೀತಿಗಾಗಿ ಕ್ರೂಜೆಗೇರಿದ
ನಿನ್ನ ಪ್ರೀತಿಯು ನನ್ನನ್ನು ಬಿಡದಿರಲಿ
ಆದರೆ ಅದು ನನ್ನ ಪ್ರತಿಯೊಂದು
ತವಕವನ್ನು ನೀಗಿಸಲು ಕಾಯುತ್ತಿರುತ್ತದೆ.